
ಶ್ರೀಬಲಭೀಮ ಗ್ರಂಥಮಾಲೆ ಕಾಗವಾಡ— ಪುಷ್ಪ ೧.



ಸಹ್ಯಾಚಲಾರೋಹಣ.

ಮಹಾಬಳೇಶ್ವರ.

। ಕರುಣಾಸಾಗರ ವಳವನೀಯಲು ।
ಪರಮಾದರದಿ ಹರನ ತಾಣದ ।
ಸರಸ ವರ್ಣನೆ ಕರ್ನಾಟಕದ ಮಾನವರಿಗಾಗಿ ॥
ಹರುಷದಿಂದಲಿ ವಸಂತಕಾಲ ।
ಬರೆ ವಿಹಾರಕೆ ಭಳದೆ ಸಾಗಿರಿ ।
ಇರದೆ ತೋರ್ಪುದು ವರಭೂದೇವಿ ವೈಭವಂ ನಿಮಗೆ ॥ ೧ ॥

'S'

ಬೆಲೆ ೮ ಆಣೆ.

ಶ್ರೀಬಲಭೀಮ ಗ್ರಂಥಮಾಲೆ ಕಾಗವಾಡ.

ಪುಷ್ಪ ೧.

ಸಹ್ಯಾಚಲಾರೋಹಣ.

ಮಹಾಬಳೇಶ್ವರ.

ಲೇಖಕರು:—

ಗಣೇಶ ಜೀವಾಜಿ ಸುರಪುರ

ನಾರಾಯಣ ಹಣಮಂತ ಶೇಡಬಾ

ಕಾಗವಾಡ.

ಶ್ರೀಮಹಾವೀರ ಪ್ರೇಸ ಬೆಳಗಾವಿ.

ಸನ್ ೧೯೨೪.

ಬೆಲೆ ೮ ಆಣೆ.

ಬೆಳಗಾವಿಯೊಳಗೆ ದೇವೇಂದ್ರ ಫಡೆಪ್ಪಾ ಚೌಗುಲೆಯವರು ತಮ್ಮ
'ಶ್ರೀಮಹಾವೀರ' ಮುದ್ರಣಾಲಯದಲ್ಲಿ ಮುದ್ರಿಸಿದರು.
ಬೆಳಗಾಂವ ಜಿಲ್ಹಾ ಕಾಗವಾಡದಲ್ಲಿ ರಾ. ಗಣೇಶ ಜೀವಾಜಿ ಸುರ
ಇವರು ಪ್ರಕಟಿಸಿದರು.

ಅನುಕ್ರಮಣಿಕೆ.

ಬಂಗಲೆ.
ಮ್ಯುನಸಿಪಾಲ್ಟಿ.
ಲೇಡಿರೇಸ್ಕೂಲ.
ಹಾಸ್ಪಿಟಲ್.
ಚಾವಡಿ.
ಫೌಜದಾರಿ ಕಚೇರಿ.
ಲಾಯಬ್ರರಿ.
ರೇಗಾರ್ಡನ್.
ಪೋಸ್ಟ ಹಾಗು ತಾರಆಫೀಸು.
ಹೌಸಏಜಂಟ.
ಸ್ಮಶಾನಗಳು.
ದೇವಾಲಯಗಳು.
ಪಾಂಚಗಣಿ.
ನರಸರಿ.

ಶ್ರೀಬಲಭೀಮ ಗ್ರಂಥಮಾಲೆ ಕಾಗವಾಡ.

ಸಾಭಾರಸ್ವೀಕಾರ.

ನಾವು ‘ ಸೀಝನ ’ ದ ನಿಮಿತ್ತ ಮಹಾಬಳೇಶ್ವರಕ್ಕೆ ಹೋದಾಗ ಅಲ್ಲಿ
ಸೃಷ್ಟಿಸೌಂದರ್ಯ, ಹವೆ, ನೀರುಗಳ ಸುಪರಿಣಾಮವನ್ನು ನಮ್ಮ ಕರ್ನಾ
ಬಾಂಧವರಿಗೆ ತಿಳಿಸಬೇಕಾಗಿ ಒಂದು ಚಿಕ್ಕ ಪುಸ್ತಕವನ್ನು ಬರೆದೆವು. ಇ
ಕಾಲಕ್ಕೆ ನಮ್ಮ ಮನಸ್ಸು ಮಾತೃಭಾಷಾಸೇವೆಯನ್ನು ಆಜನ್ಮ ಮಾಡಬೇಕ
ಉತ್ಕಟೇಚ್ಛೆಯುಳ್ಳದಾದುದರಿಂದ ಕಾಗವಾಡ ಗ್ರಾಮದಲ್ಲಿ ‘ ಶ್ರೀಬಲಭೀ
ಗ್ರಂಥಮಾಲೆ ’ ಯನ್ನು ಸ್ಥಾಪಿಸಿ ನಮ್ಮ ಮಾಲೆಗೆ ಸಹಾಯ ಮಾಡುವದಕೆ
ಸ್ಕರ ‘ ನಮ್ಮ ಬೇಡಿಕೆ ’ ಪತ್ರಗಳ ದ್ವಾರದಿಂದ ತಿಳಿಸಲು ಪ್ರಿಯಬಾಂಧ
ತಮ್ಮ ಕೈಲಾದಮಟ್ಟಿಗೆ ಹಣದ ಸಹಾಯ ಮಾಡಿ ನಮಗೆ ಪ್ರೋತ್ಸಾ
ಕೊಟ್ಟಿರುವರು. ಈ ಬಗ್ಗೆ ನಾವು ಅವರನ್ನು ಎಷ್ಟು ಕೊಂಡಾಡಿದರೂ ಸ್ವಲ್ಪ
ಸರಿ. ಇದರಂತೆ ಇನ್ನುಳಿದ ಉದಾರಗೃಹಸ್ಥರಿಗೂ ಇದೇ ಪ್ರಕಾರದ ಮನ
ಉಂಟಾಗಲೆಂದು ಬಯಸುವ,

ತಮ್ಮ— **ಬಂಧುದ್ವಯ.**

ಪ್ರಸ್ತಾವನೆ.

ಮಹಾಬಳೇಶ್ವರವೆಂದರೆ ಮೋಜಿನ-ಮನೆಯೂ, ಸೃಷ್ಟಿಸೌಂದರ್ಯದ ಸಾಗರವೂ ಆಗಿರುವದು. ಅಲ್ಲಿ ಕ್ಷಣಕ್ಷಣಕ್ಕೆ ಸಿನೇಮಾದೊಳಗಿನ ನೋಟುಗಳಂತೆ ಮೋಜಿನ ನೋಟುಗಳು ಕಣ್ಣಿಗೆ ಬೀಳುತ್ತವೆ. ಬೇಕಾದ ಭಾವನೆಯ ಮನುಷ್ಯನು ಅಲ್ಲಿ ಹೋಗಲಿ, ಅಲ್ಲಿಯ ಒಂದಿಲ್ಲೊಂದು ನೋಟವು ಆತನ ಭಾವನೆಯನ್ನು ಜಾಗ್ರತಮಾಡುತ್ತದೆ. ಕ್ಷೇತ್ರ ಮಹಾಬಳೇಶ್ವರವು ಧಾರ್ಮಿಕ ಪ್ರವೃತ್ತಿಯ ಮನುಷ್ಯನ ಕಣ್ಮುಂದೆ ಬಂದು, ಪಂಚಗಂಗೆಯ ನಿರ್ಮಲ ತೀರ್ಥದಲ್ಲಿ ಸ್ನಾನಮಾಡಿ, ಸ್ವ-ದೇಹವನ್ನು ಪುನೀತಮಾಡಿಕೊಳ್ಳಬೇಕೆಂದು, ಆತನ ಮನಸ್ಸು ಹರಿಯಹತ್ತುತ್ತದೆ. ಪ್ರತಾಪಗಡವು ದೇಶಾಭಿಮಾನೀ ಮನುಷ್ಯನಿಗೆ ಎಚ್ಚರಗೊಳಿಸಿ, ಸ್ವ-ಕರ್ತವ್ಯವನ್ನು ಮಾಡಲು, ಸೂಚನೆಯನ್ನು ಕೊಡುತ್ತದೆ!

ಹಿಂದಕ್ಕೆ ಮರಾಟರ ಶಸ್ತ್ರಗಳಿಂದ ಕೆಂಪಾಗಿ ಮಾಡಿದ ಕೃಷ್ಣಾ-ವೇಣ್ಯಾ ನದಿಗಳ ಭಯಂಕರ ಕಂದರಗಳು ಕಣ್ಮುಂದೆ ಬಂದು ಪರಾಕ್ರಮೀ-ಪುರುಷರ ಬಾಹುಗಳು ಸ್ಫುರಣಹೊಂದುತ್ತವೆ! ರಾಜಕಾರಣೀ, ಧೋರಣೀ, ಮುತ್ಸದ್ದೀ ಮನುಷ್ಯನಿಗೆ ಮೋರೇ ಚಂದ್ರರಾಯನ ಹೊಂಚುಗಳು ನೆನಪಾಗಹತ್ತುತ್ತವೆ. ಹೀಗೆ ಅನೇಕ ಮೋಜುಗಳು ಮಹಾಬಳೇಶ್ವರದಲ್ಲಿ ತುಂಬಿಕೊಂಡಿವೆ! ಒಟ್ಟಿನ ಮೇಲೆ ಹೇಳತಕ್ಕದ್ದೇನಂದರೆ, ಮಹಾಬಳೇಶ್ವರದ ಸೃಷ್ಟಿಯು ಅಚೇತನಕ್ಕೆ ಚೇತನೆಯನ್ನುಂಟುಮಾಡುವಂಥಾದ್ದೂ, ಕೆಟ್ಟ ವಿಚಾರಗಳನ್ನು ಹೋಗಲಾಡಿಸಿ, ಹೃದಯವನ್ನು ಅನೇಕ ಉಚ್ಚ ವಿಕಾರಗಳಿಂದ ತುಂಬುವಂಥಾದ್ದೂ ಆಗಿರುವದು! ಇಂಥ ಮಹತ್ವದ ಸ್ಥಳವರ್ಣನೆಯು ನಮ್ಮ ಕರ್ನಾಟಕಸ್ಥರಿಗೆ ಲಭಿಸಿದ್ದು ಸುದೈವವೇ ಸರಿ! ಈ ಪುಸ್ತಕದಿಂದ ಮಹಾಬಳೇಶ್ವರದ ಪ್ರವಾಸಮಾಡುವವರಿಗೆ ಬಹಳೇ ಉಪಯೋಗವಾಗುವದು. ಇದರ ಲೇಖಕರು ಸರಸ್ವತೀ-ಮಂದಿರದಲ್ಲಿ

ಇದೇ ಕಾಲಿಟ್ಟಿರುವರು. ಈ ದೃಷ್ಟಿಯಿಂದ ವಿಚಾರಿಸಿದರೆ, ಅವರು ಹೀಗೇ
ಬಿಡದೆ ಲೇಖನ-ವ್ಯವಸಾಯವನ್ನು ಶ್ರಮಬಟ್ಟು ಸಾಗಿಸಿದರೆ, ಮುಂದೆ ವ
ನುರಿತ ಲೇಖಕರಲ್ಲಿ ಅವರ ಸಮಾವೇಶವಾಗಲಿಕ್ಕೆ ಅಡ್ಡಿಯಿಲ್ಲ. ಶ್ರೀವ
ಬಳೇಶ್ವರನು ಇಂಥ ಹುರುಪಿನ ಹೊಸ ಲೇಖಕರಿಗೆ ಭಾಷಾ-ಸೇವೆಯನ್ನು
ಡುವ ಹಾಗೂ ಕರ್ನಾಟಕ ಬಾಂಧವರಿಗೆ, ಅವರಿಗೆ ಸಹಾಯಮಾಡುವ ಸ
ಯನ್ನು ಕೊಡಲಿ; ಹೀಗೆ ಆತನಿಗೆ ನಮ್ಮ ಪ್ರಾರ್ಥನೆಯಿರುವದು!!

ಕಾಗವಾಡ.
ತಾ. ೬-೧೧-೧೯೨೩ ಇ.

ಕರ್ನಾಟಕ ಭಾಷಾ-ಸೇವಕ,
K. G. Bijapurkar,
H. D.

ಹೃದಯಾವಿಷ್ಕರಣ !

ಸಹ್ಯಾಚಲದ ಐತಿಹಾಸಿಕ, ಆರೋಗ್ಯವರ್ಧನೋತ್ತೇಜಕ ಭೌತಿಕ ಮಹತ್ವವನ್ನು ಈ ವರೆಗೆ ಕೇಳುತ್ತಿರುವ ಮೂಲಕ ಒಮ್ಮೆಯಾದರೂ ಸಹ್ಯಾದ್ರಿಯ ಕೆಲವೊಂದು ಭಾಗದಲ್ಲಿ ವಿಹಾರ ಮಾಡಿ ಅಲ್ಲಿಯ ನೋಟಗಳನ್ನು ಪ್ರತ್ಯಕ್ಷ ಕಣ್ಣಿನಿಂದ ನೋಡುವ ಉತ್ಕಟೇಚ್ಛೆಯು ಬಹಳ ದಿವಸಗಳಿಂದಾಗಿದ್ದಿತು. ಆದರೆ ಆ ಸುಯೋಗವು ಒದಗಬೇಕಾದಲ್ಲಿ ಅನೇಕ ದಿವಸಗಳು ಗತಿಸಿದವು. ಈ ಸಾರೆ ದೇವರ ಅನುಗ್ರಹದಿಂದ ಮಹಾಬಳೇಶ್ವರದ 'ಸೀಝನ' ದ ನಿಮಿತ್ತ ಹೋಗಿ ಸುಖವನ್ನು ಉಪಭೋಗಿಸಿದೆವೆಂಬದನ್ನು ತಿಳಿಸಲು ಪರಮಾನಂದವಾಗುತ್ತದೆ. ಸಹ್ಯಾಚಲದ ಮೇಲಿನ ಎಷ್ಟೋ ಮಹತ್ವದ ಸ್ಥಳಗಳಲ್ಲಿ ಒಂದಾದ ಮಹಾಬಳೇಶ್ವರವು ಮೇಲ್ಕಾಣಿಸಿದ ಭೌತಿಕ ದೃಷ್ಟಿಯಿಂದ ಅತ್ಯುಚ್ಚ ಪದವಿಯನ್ನು ಹೊಂದಿರುವದರಿಂದ ಅಲ್ಲಿಗೆ ಹೋಗಬೇಕಾಗಿ ಮೊದಲಿನಿಂದ ಹವಣಿಸುತ್ತಿದ್ದೆವು. ಹಾಗೂ ಅಲ್ಲಿಯ ವಿಹಾರದ ದೆಸೆಯಿಂದ ಉಪಯೋಗ ಬೀಳುವ ಮಾಹಿತಿಯನ್ನು ದೊರಕಿಸುವ ಪ್ರಯತ್ನವನ್ನಾದರೂ ಬಹಳ ದಿವಸಗಳಿಂದ ಮಾಡುತ್ತಲಿದ್ದೆವು. ಈ ಪ್ರಕಾರ ಸಂಪಾದಿಸಿದ ಮಾಹಿತಿಯು ಸದ್ಯದ ಸುಧಾರಣೆಯ ಪರಿಸ್ಥಿತಿಯಲ್ಲಿ ಅಷ್ಟೊಂದು ಉಪಯೋಗ ಬೀಳದ ಮೂಲಕ ನಾವು ಯಾವಾಗ ಪ್ರತ್ಯಕ್ಷ ಗಿರ್ಯಾರೋಹಣಕ್ಕೆ ಆರಂಭ ಮಾಡಿದೆವೋ ಆ ವೇಳೆಗೆ ಎಷ್ಟೋ ಹೊಸ ಹೊಸ ತೊಂದರೆಗಳೊದಗಿದವು. ಅವುಗಳನ್ನೆಲ್ಲ ದೂರು ಮಾಡುತ್ತ ನಮ್ಮ ವಿಹಾರವನ್ನು ಒಂದು ಒಂದೂವರೆ ತಿಂಗಳಲ್ಲಿ ಪೂರ್ಣ ಮಾಡಿದೆವು. ಆ ವಿಹಾರದಲ್ಲಿ ಸಂಪಾದಿಸಿದ ಅನುಭವ ಮತ್ತು ಜ್ಞಾನವನ್ನು ಕರ್ನಾಟಕ ಬಂಧು ಭಗಿನಿಯರಿಗೆ ನಮ್ಮ ಅಲ್ಪಮತಿಯ ಲೆಕ್ಕಣಿಕೆಯ ದ್ವಾರದಿಂದ ತಿಳಿಸಲು ಅಪೇಕ್ಷಿಸಿ ಈ ಚಿಕ್ಕ ಪುಸ್ತಕವನ್ನು ಬರೆದಿರುತ್ತೇವೆ.

ಪ್ರಸಿದ್ಧ ಆಂಗ್ಲ ತತ್ವವೇತ್ತರಾದ ಫ್ರಾನ್ಸಿಸ್ ಬೇಕನ್ ಸಾಹೇಬರು ಪ್ರವಾಸದ ವಿಷಯವನ್ನು ಬರೆಯುವಾಗ ಅದರಲ್ಲಿ ಸರಸ್ವತಿಯ ಮಂದಿರವನ್ನು ಪ್ರವೇಶಿಸಿ, ಜ್ಞಾನಾರ್ಜನದ ಉತ್ಕಟೇಚ್ಛೆಯುಳ್ಳ ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರವಾಸವು ಅತ್ಯವಶ್ಯಕವಾಗಿರುವದೆಂಬ ಮಾತನ್ನು ಬರೆದಿರುವರು. ಕಾರಣ ಆದ

ರಿಂದ ಪ್ರತಿಯೊಬ್ಬರಿಗೆ ಜ್ಞಾನ ಪ್ರಾಪ್ತವಾಗುವದಲ್ಲದೆ ಭಿನ್ನ ಭಿನ್ನ ಅನು
ದೊರೆಯುತ್ತ ಹೋಗಿ, ಅಲ್ಪಕಾಲದೊಳಗೆ ಅವರು ಊರ್ಜಿತಾವಸ್ಥೆಯ
ಹೊಂದುವರು. ಆದರೂ ಈ ಕಾರ್ಯದಲ್ಲಿ ಯೋಗ್ಯಮಾಹಿತಿಯ ಕೊರತೆ
ವಿಶೇಷವಾಗಿರುವದರಿಂದಲೂ, ಸಣ್ಣ ಸಣ್ಣ ಮಾಹಿತಿ ಪತ್ರಿಕೆಗಳು ಇ
ರಿಂದಲೂ, ಸ್ವಲ್ಪ ಕಾಲದಲ್ಲಿ ತೀರಿಸಲಿಕ್ಕೆ ಬರುವಂಥ ಪ್ರವಾಸವು ಬಹಳೇ ದೀ
ಕಾಲದ್ದಾಗಿ ಅತಿ ವೆಚ್ಚವಾಗುವದು. ಆದ್ದರಿಂದ ಮಧ್ಯಮ ವರ್ಗದ ಜ
ಈ ಅಲಭ್ಯಲಾಭದಿಂದ ಬೇರೆಯಾಗುವರು. ಕಾರಣ ಈ ಕೊರತೆಯನ್ನು
ವಾದ ಮಟ್ಟಿಗೆ ತುಂಬಿ ತೆಗೆದು ಆ ಬಾಬಿನಲ್ಲಿ ಸುಪ್ತರಾದ ಕರ್ನಾಟಕ ಬಾಂ
ರನ್ನು ಜಾಗೃತಮಾಡಿ ಅವರಲ್ಲಿ ಮಹಾಬಳೇಶ್ವರ ಪ್ರವಾಸದ ದೆಸೆಯಿಂದ ಜಿ
ಸೆಯನ್ನು ಹುಟ್ಟಿಸಿ, ಸ್ವಲ್ಪಕಾಲದಲ್ಲಿಯೇ ಪ್ರವಾಸ ಮುಗಿಸಿ ಎಲ್ಲ ಸ್ಥಳಗ
ಪ್ರತ್ಯಕ್ಷ ನೋಡಲಿಕ್ಕೆ ಸುಲಭವಾಗಬೇಕೆಂಬ ಉದ್ದೇಶದಿಂದಲೂ, ಕರ್ನಾ
ಭಾಷೆಯ ಸೇವೆಯನ್ನು ಸ್ವಲ್ಪಾದರೂ ಮಾಡಬೇಕೆಂತಲೂ, ನಮಗೆ ದೊ
ಅಲ್ಪಜ್ಞಾನದ ಲಾಭ ಹಾಗು ಮಹಾನಂದ ಬಂಧುವರ್ಗಕ್ಕೆ ಮಾಡಿಕೊಡ
ಕೆಂಬ ಹೇತುವಿನಿಂದ ಪ್ರೇರಿತರಾಗಿ ಈ ಪ್ರಸ್ತುತ ಉದ್ಯೋಗವನ್ನು ಆ
ಮಾಡಿದ್ದೇವೆ. ಈ ಪ್ರಕಾರದ ವಿಷಯಸಾಗರದಲ್ಲಿ ಪ್ರವೇಶಮಾಡುವ ಪ್ರಸಂ
ಮೊದಲನೆಯದಿರುವ ಮೂಲಕ ಪ್ರಿಯ ಬಾಂಧವರು ಹಂಸಕ್ಷೀರನ್ಯಾಯದಿ
ಪರಿಶೀಲಿಸಿ ನಮಗೆ ಉತ್ತೇಜನ ಕೊಡಬೇಕಲ್ಲದೆ ಸ್ವಪರಹಸ್ತಗಳಿಂದ ಸಹಾ
ಮಾಡಬೇಕಾಗಿ ಆಶಯವದೆ.

ಕಾಗವಾಡ.
ಕಾ. ಶು. ೧ ಶ. ೧೮೪೫.

ವಿದ್ವಜ್ಜನ ವಿಧೇಯ,
ಬಂಧುಗಳು.
ಗ. ಜೀ. ಸುರಪುರ.
ನಾ. ಹ. ಶೇಡಬಾಳಕ

॥ ॐ शिवाय नमः ॥

ಸಹ್ಯಾಚಲಾರೋಹಣ!

* ಮಹಾಬಳೇಶ್ವರ *

" शरीरमाद्यं, खलुधर्मसाधनम् "

ಎಷ್ಟೋ ವರ್ಷಗಳಿಂದ ನಡೆಯುತ್ತಬಂದ ಜೀವಿತಯಾತ್ರೆಯ ಅಖಿಲ ವ್ಯಾಪಾರವು ಕಷ್ಟಮಯವಾಗಿರುವದೆಂಬದು, ಯಾವತ್ತು ಜನರ ಅನುಭವದ ಮಾತಾಗಿರುವದಷ್ಟೇ: ಪ್ರತಿಯೊಬ್ಬ ಸಾಮಾನ್ಯ ಮನುಷ್ಯನು ಭವಸಾಗರದಲ್ಲಿ

ಉಪೋದ್ಘಾತ. ಮುಳುಗಿಹೋಗಿರುವ ಮೂಲಕ ಈ ತನ್ನ ಮೋಹದಿರು ವಿಕೆಯು ಹೇಗೆ ಸುಖಕರವಾದೀತೆಂಬ ವಿಚಾರದಲ್ಲಿ ತೊಡಗಿರುವನಲ್ಲದೆ, ಒಂದು ಗೇಣು ಹೊಟ್ಟೆಹೊರಕೊಳ್ಳುವದಾಗಿ ಹಗಲಿರುಳು ಚಿಂತಿಸುತ್ತಿರುವನು. ಈ ಪ್ರಕಾರದ ಚಿಂತೆಯೆಂಬ ಕಾರ್ಗತ್ತಲೆಯು ಎಲ್ಲ ಕಡೆಗೂ ಪಸರಿಸಿರುವಾಗ, ಈ ಜಗತ್ತಿನಲ್ಲಿ ಜೀವಿತದ ಸುಗಮ್ಯ ಹಾಗು ಸುಖಕರವಾದ ಮಾರ್ಗವನ್ನು ಶೋಧಿಸುವದರಲ್ಲಿ, ನಾನಾಪ್ರಕಾರದ ಕಷ್ಟಗಳನ್ನು ಅನುಭವಿಸಬೇಕಾದಲ್ಲಿ ಅಚ್ಚರಿಯೇನು? ಐಹಿಕಸುಖದ ಪೂರ್ಣ ರುಚಿಯನ್ನು ತೆಗೆದುಕೊಳ್ಳಲಿಕ್ಕೆ ಬಂದಲ್ಲಿ ಎಲ್ಲವೂ ಪೂರ್ಣವಾಯಿತೆಂಬ ಕಲ್ಪನೆಯು ಸಾಮಾನ್ಯ ಜನರಲ್ಲಿ ಮಾತ್ರ ಪ್ರಬಲವಾಗಿರುವದು. ಈ ಕಾರಣದಿಂದಲೇ ಪ್ರಾಣಿಮಾತ್ರವು ಅನಿಷ್ಟಕಾರಕ ಕಾರ್ಯವನ್ನು ಮಾಡುವದಾಗಿ, ಒಮ್ಮೊಮ್ಮೆ ಉದ್ಯುಕ್ತವಾಗಬೇಕಾಗುವದು. ಮತ್ತು ಕೆಲವೊಂದು ಪ್ರಸಂಗದಲ್ಲಿ " ತಾನಾಗಿ ತನ್ನ ಮೇಲೆ ಗಂಡಾಂತರವನ್ನು ಎಳೆದುಕೊಳ್ಳಬೇಕಾಗುವದು. ಅಂಥ ಪ್ರಸಂಗದಲ್ಲಿ ಸುಖದೊರೆಯುವ ಬಗೆಹೇಗೆ? ಭವಚಿಂತೆಯಿಂದ ಪೀಡಿತನಾಗಿ ಸಾಧ್ಯಸುಖದ ಸ್ವಲ್ಪಾಂಶವನ್ನಾದರೂ ತಕ್ಕೊಳ್ಳದೆ ಹೇಗಾದರೂ ಮಾಡಿ ಈ ಜಗತ್ತಿನೊಳಗಿಂದ ಪಾರಾಗಿ ಹೋಗುವನು. ಆದುದರಿಂದ ಜಗನ್ನಿಯಾಮಕನು ತನಗೆ ಕೊಟ್ಟದ್ದರಲ್ಲಿಯೇ ಸುಖದಿಂದಿರುವದು

ಇಷ್ಟವು. ಸಂಸಾರಯಾತ್ರೆಯು ನಿರೀಕ್ಷಣವನ್ನು ಸ್ವಲ್ಪದರಲ್ಲಿಯೇ ಮಾಡಹತ್ತ ಅದರ ಸ್ವರೂಪವು ಭೀಷಣವಾಗಿ ತೋರುವದು. ಅದರಲ್ಲಿ ಸುಖದ ಲ ವಾದರೂ ಇಲ್ಲದ್ದು ನೋಡಿ ಮನಸ್ಸು ಬಹಳೇ ಉದ್ವಿಗ್ನವಾಗುವದು.

ಐಹಿಕ ಸೌಖ್ಯವು ಮನೋಭಾವನೆಯು ಒಂದು ಸ್ವರೂಪವಾಗಿರುವ ಮ ಲಕ ಯಾವ ಪರಿಸ್ಥಿತಿಯಲ್ಲಿ ಮನಸ್ಸು ಹರಿದಾಡುವದೋ, ಅದರ ಮೇಲೆ ಹೆಚ್ಚಾಗಿ ಅವಲಂಬಿಸಿ ಕೂಡುವದು. ಐಹಿಕಸುಖವನ್ನೊಡೆದು ದೇವರ ಧ ದಲ್ಲಿ ನಿರತರಾದ ಸಾಧುಸತ್ಪುರುಷರ ಮಾತು ಸಾಮಾನ್ಯ ಜನರಿಂದ ಬೇರೆಯ ರುವದು. ಆದರೆ ನಾವು ಮನೋಭಾವನೆಗೆ ವಿಶೇಷ ಪ್ರಾಧಾನ್ಯ ಕೊಟ್ಟ ಮೂಲಕ, ಯಾವ ಕಾರಣಗಳಿಂದ ಮನಸ್ಸು ಸುಪ್ರಸನ್ನವಾಗುವದೋ ಅವು ಗಾಗಿ ಪ್ರತಿಯೊಂದು ವ್ಯಕ್ತಿಯು ಪ್ರಯತ್ನಿಸುವದೇ ಯೋಗ್ಯವು.

ಚಿತ್ತವೃತ್ತಿಯು ಯಾವಾಗಲೂ ಸುಪ್ರಸನ್ನವಾಗಬೇಕಾದಲ್ಲಿ ಸುತ್ತ ಪರಿಸ್ಥಿತಿ, ಮನಸ್ವಾಸ್ಥ್ಯ, ಸ್ಥಿರತೆ ಇವು ಅವಶ್ಯವಾಗಿಬೇಕು. ಆದರೆ ಸಾಂ ದಲ್ಲಿ ಪ್ರತಿಯೊಂದು ವ್ಯಕ್ತಿಯು ದಾರಿದ್ರ್ಯದಿಂದ ಪೀಡಿತವಾದ ಮೂಲಕ ಅ ಅನುಕೂಲತೆಯು ಲಭಿಸುವದೆಂದರೆ ಮಹತ್ಪ್ರಯಾಸ. ಎಲ್ಲಿಯಾದರೂ ನಾ ದಿವಸ ಸುಖದಲ್ಲಿ ಕಳೆಯಬೇಕಾಗಿ ಮನಸ್ಸು ಬೇಕಾದಷ್ಟು ಹಾತೊರೆದ ಅದು ಪ್ರಾಪ್ತವಾಗಬೇಕಾದಲ್ಲಿ ಕೆಲವು ದಿವಸ ಗತಿಸಬೇಕಾಗುವದು. ಅ ಸುಯೋಗವು ಒಂದುವೇಳೆ ಒದಗಿದಲ್ಲಿ ಎಲ್ಲ ಪ್ರಕಾರದ ಯೋಗ್ಯ ವ ತಿಯು ದೊರೆಯದ ಮೂಲಕ, ಪೂರ್ಣವಾದ ಧ್ಯೇಯವು ಕೈಗೂಡುವದು ದ ಷಾಸ್ತ. ನಮ್ಮಲ್ಲಿ ಕೆಲವರಿಗೆ ಆಪ್ತಇಷ್ಟ ಮೊದಲಾದ ಸಂಬಂಧಿಕರಲ್ಲಿ ಕ ಕೊಂಡು ನಾಲ್ಕು ದಿವಸ ಆನಂದದಲ್ಲಿ ಕಳೆಯುವದೂ, ಕೆಲವರಿಗೆ ನೈಸ ವೈಭವದಿಂದ ಕೂಡಿದ ಸ್ಥಳಗಳಲ್ಲಿ ಸ್ವಲ್ಪಕಾಲಪಹಾರ ಮಾಡುವದೂ, ಶ್ರೇ ರವೆನಿಸುವದು. ನಮ್ಮ ಮತದಿಂದ ಮೇಲೆ ಸೂಚಿಸಿದ ಎರಡನೇ ಮಾಗ ಹಿತವೆನಿಸುತ್ತದೆ. ಏಕಂದರೆ ಮಾನವೀ ಶಕ್ತಿಗಿಂತ ನೈಸರ್ಗಿಕ ಶಕ್ತಿಯೇ ತ್ವದ್ದಾಗಿರುತ್ತದೆ. ನೈಸರ್ಗಿಕ ವೈಭವದ ಪರಿಣಾಮವು ಕೂಡಲೇ ಮನ ಮೇಲಾಗಿ ಚಿತ್ತವೃತ್ತಿಯು ಉಲ್ಹಸಿತವಾಗುವದಲ್ಲದೆ ಆ ಅಗಾಧ ಶಕ್ತಿಸ್ವ ಪರಮಾತ್ಮನ ಸ್ಮರಣೆಯಾಗದಿರದು. ಮತ್ತು ಹೃತ್ಪಟಲದ ಮೇಲೆ ಬೋಧ ಮುದ್ರೆಯು ಮೂಡುವದು. ಆ ವೈಭವದಲ್ಲಿ ಮನಸ್ಸು ತಲ್ಲೀನವಾಗಿ ಐ

ಸುಖದ ರುಚಿಯನ್ನಷ್ಟೇ ತೆಗೆದುಕೊಳ್ಳುವದಲ್ಲದೆ ಆ ಪರಮಾತ್ಮನ ಅನಂತ ಶಕ್ತಿಯ ಪೂರ್ಣ ತಿಳುವಳಿಕೆಯನ್ನು ಮಾಡಿಕೊಂಡು ಆತನ ವಿಷಯದಲ್ಲಿ ಪೂಜ್ಯ ಭಕ್ತಿಯನ್ನಿಡುತ್ತದೆ. ಹಾಗು ನಾಸ್ತಿಕ ಮತವನ್ನು ಬಿಟ್ಟುಕೊಟ್ಟು ದೇವರ ಚರಣದಲ್ಲಿ ಸ್ವಲ್ಪ ವೇಳೆ ರತವಾಗುತ್ತದೆ. ಆಗ ಕ್ಷಣಹೊತ್ತು ಸಂಸಾರದ ಕಲ್ಪನೆಯು ಮರೆಯಾದಂತಾಗಿ, ಎಲ್ಲ ಪ್ರಕಾರದ ವ್ಯಾಪವು ಇಲ್ಲದಂತೆನಿಸಿ, ಆನಂದದಿಂದ ಮನಸ್ಸು ಸ್ವಾತಂತ್ರ್ಯ ಸುಖಸಾಗರದಲ್ಲಿ ಈಸಾಡತೊಡಗುವದು. ಆದುದರಿಂದಲೇ ಸಂಸಾರಸುಖದೊಳಗಿಂದ ಮನಸ್ಸನ್ನು ತೆಗೆದು ಈಶ್ವರ ಧ್ಯಾನದಲ್ಲಿ ನಿರತರಾದ ಪ್ರಾಚೀನ ಋಷಿಗಳೂ, ಅರ್ವಾಚೀನ ಸಾಧುಸತ್ಪುರುಷರೂ, ನಿಬಿಡವಾದ ಅರಣ್ಯ ಉನ್ನತವಾದ ಶೈಲಶಿಖರಗಳನ್ನು ತಮ್ಮ ತಪಶ್ಚರ್ಯಕ್ಕೆ ಯೋಗ್ಯಸ್ಥಾನಗಳಾಗಿ ನಿಶ್ಚಯಿಸಿದರು.

ಈ ಪ್ರಕಾರದ ಸ್ಥಳಗಳು ಹಿಂದುಸ್ತಾನದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಅನೇಕ ಉಂಟು. ಪ್ರಾಚೀನ ಕಾಲದಿಂದ ಆ ಸ್ಥಳಗಳ ಮಹತ್ವವನ್ನು ವೇದಸೂಕ್ತಗಳು ಸಾರಿ ಹೇಳುತ್ತವೆ. ಅವುಗಳಲ್ಲಿಯು ಕೆಲಕೆಲವು ಸ್ಥಳಗಳಿಗೆ ಧಾರ್ಮಿಕ ಮಹತ್ವವು ಪ್ರಾಪ್ತವಾಗಿರುತ್ತದೆ. ಬೇರೆ ಕೆಲವು ಸ್ಥಳಗಳು ಪೂರ್ವದಲ್ಲಿ ಋಷಿಗಳ ಆಶ್ರಮಗಳಾಗಿದ್ದದರಿಂದ ಈ ವರೆಗೂ ಪ್ರಸಿದ್ಧಿಯನ್ನು ಪಡೆದಿರುತ್ತವೆ. ಇನ್ನೂ ಕೆಲವು ಸ್ಥಳಗಳು ದೇವತೆಗಳ ಪುಣ್ಯವಸತಿಸ್ಥಾನಗಳೆಂದೂ, ಬಹು ಪುರಾತನಕಾಲದಿಂದ ಹೆಸರುವಾಸಿಯಾಗಿರುವವು. ಅರ್ವಾಚೀನಕಾಲದ ಸಾಮಾನ್ಯ ಜನರ ಮನಸ್ಸಿನಲ್ಲಿ ಐತಿಹಾಸಿಕ ಜಿಜ್ಞಾಸೆಯು ಹೆಚ್ಚಾದ ಹಾಗೆ ಶೂರಪುರುಷರ ಜನ್ಮಸ್ಥಾನ, ಹಾಗು ರಣಭೂಮಿಗಳು ಪ್ರಸಿದ್ಧಿಗೆ ಬರಹತ್ತಿವೆ. ಐತಿಹಾಸಿಕ, ಧಾರ್ಮಿಕ ಇವೆರಡು ಬಾಬುಗಳಿಂದೊಡಗೂಡಿದ ಸ್ಥಳಗಳು ಮಹಾರಾಷ್ಟ್ರದಲ್ಲಿದ್ದಷ್ಟು ಬೇರೆ ಯಾವ ಕಡೆಗೂ ಇಲ್ಲ. ಮಹಾರಾಷ್ಟ್ರದಲ್ಲಿಯು ಈ ಸ್ಥಳಗಳು ಪ್ರಾಚೀನಕಾಲದಿಂದಲೇ ಪ್ರಸಿದ್ಧವಾಗಿದ್ದು ಅವೆಲ್ಲವುಗಳು ಸಹ್ಯಾಚಲದ ಉನ್ನತಶಾಖೆಯ ಮೇಲೆಯೇ ವಿರಾಜಮಾನವಾಗಿರುತ್ತವೆ. ಅವುಗಳಿಗೆ ಶ್ರೀಶಿವಾಜಿಮಹಾರಾಜರ ಅದ್ಭುತ ಪ್ರಭಾವದಿಂದ ಹೇಗೆ ಮಹತ್ವವು ಪ್ರಾಪ್ತವಾಯಿತೋ, ಹಾಗೆಯೇ ರಾಮದಾಸ, ತುಕಾರಾಮ ಜ್ಞಾನೇಶ್ವರ ಮೊದಲಾದ ಸಾಧು ಸತ್ಪುರುಷರ ಪಾದಸ್ಪರ್ಶದಿಂದ ಪವಿತ್ರತೆಯು ಪ್ರಾಪ್ತವಾಯಿತೆನ್ನಲು ಅಡ್ಡಿಯಿಲ್ಲ. ಮಹಾರಾಷ್ಟ್ರದಲ್ಲಿ ಯವನರ ರಾಕ್ಷಸೀ ಕೃತ್ಯಗಳಿಂದ ಪೀಡಿತಳಾದ

ಭೂಮಾತೆಯು ಉದ್ಧಾರ ಮಾಡುವದಕ್ಕಾಗಿಯೇ ಸಕಲಗುಣಾನುಯುಕ್ತ ಶ
ಶಿವಾಜಿಮಹಾರಾಜರ ಜನ್ಮವೂ ಆಧ್ಯಾತ್ಮಿಕ, ಐಹಿಕ ಮಾತುಗಳ ಪೂರ್ಣಜ್ಞಾ
ವನ್ನು ಸಾಮಾನ್ಯ ಜನರಿಗೆ ಮಾಡಿಕೊಟ್ಟು, ರಾಷ್ಟ್ರೀಯತ್ವದ ಉದಾತ್ತ ಕಲ
ಯನ್ನು ಪ್ರಜ್ವಲಿತವಾಗಿ ಮಾಡಿ, ಮುಳುಗಹತ್ತಿರುವ ಹಿಂದೂಧರ್ಮದ ಉದ
ಮಾಡುವ ವಿಷಯವಾಗಿ ಪ್ರಬಲವಾದ ಇಚ್ಛೆಯನ್ನುಂಟು ಮಾಡಿದ ಸಾಧುಸ
ರುಷರ ಅವತಾರವೂ ಒಂದೇ ಕಾಲಕ್ಕಾದುದರಿಂದುಂಟಾಗುವ ಅಲಭ್ಯಲಾಭ
ಮಹಾರಾಷ್ಟ್ರರ ಹೊರ್ತು ಬೇರೆಯವರಿಗೆ ಆದದ್ದು ಕಂಡುಬರುವದಿಲ್ಲ. “ ಕ
ಗತಿಯು ವಿಚಿತ್ರವಾದದ್ದು” ಎಂಬ ಸಾಮತಿಗನುಸಾರವಾಗಿ ದುರ್ದೈ
ದುತ್ತೆಂದು ಬಂದು ನಿಂತಕೂಡಲೇ ಅನೇಕ ಕಾರಣಗಳ ಮೂಲಕ ಧರ್ಮಶ್ರ
ಯು ಲೋಪವಾಗಿ ಆ ಸ್ಥಳಗಳು ಕೇವಲ ಅರಣ್ಯಮಯ, ಹಾಗು ನಿರ್ಮಾನ
ಗಳಾಗಿ ಉಳಿದಿವೆ. ಅಲ್ಲಿಗೆ ಹೋಗುವ ಹಿಂದೂ ಪುತ್ರರಿಗೆ ಅವು ತಮ್ಮ ಗತವ
ವದ ಪೂರ್ಣ ಸ್ಮರಣೆಯನ್ನು ಮಾಡಿಕೊಡದೆ ಇರಲಾರವು. ಅಲ್ಲದೆ ನಮ್ಮ
ಈ ಹೀನಾವಸ್ಥೆಯೊಳಗಿಂದ ಉದ್ಧಾರ ಮಾಡಬೇಕಾಗಿ, ಪ್ರವೃತ್ತರಾಗಿರೆಂ
ದೀನಸ್ವರದಿಂದ ವಿನಂತಿಮಾಡಿಕೊಳ್ಳುವದರಲ್ಲೇನಾಶ್ಚರ್ಯ! ಈ ಪ್ರಕಾ
ವಿನಂತಿಯನ್ನು ಮಾಡಿಕೊಂಡ ಸ್ಥಳಗಳಲ್ಲಿ ಮಹಾಬಳೇಶ್ವರವು ಒಂದಾಗಿ
ಅದನ್ನು ನಮ್ಮ ದಯಾಳು ಇಂಗ್ಲಿಷ ಸರಕಾರದವರೂ, ಸಂಸ್ಥಾನಿಕರ
ಶ್ರೀಮಂತರೂ, ವ್ಯಾಪಾರಸ್ಥರೂ ಊರ್ಜಿತಾವಸ್ಥೆಗೆ ತಂದು ಅದರ ದೈನ್ಯವ
ದೂರುಮಾಡಿರುವರು. ಆದುದರಿಂದ ನಾವೆಲ್ಲರು ಅಲ್ಲಿಗೆ ಹೋಗಿ ಅದನ್ನು ನಿ
ಕ್ಷಿಸಿ, ಆದರಿಂದ ಉಂಟಾಗುವ ಸುಖವನ್ನು ಸಂಪಾದಿಸುವಾ.

ಮಹಾಬಳೇಶ್ವರ:—

देखे महा प्रचंड गिरी । विशाळ पर्वतांचिया दरी ।
जळें तुंबिलीं सरितां सारीं । समुद्रतुल्य अगाध ॥ १ ॥
तेथें आम्रनिचोल वेल । कवंट कदंब मधुपिंपळ ।
सिरसपलाश विशाळ । न्यग्रोधवृक्ष वाढिन्नले ॥ २ ॥
ताळ हिंताळ शाळ सरळ । मंदार कांचन तमाळ निर्मळ
पिचुमंद देवदार धवळ । अर्जुनवृक्ष अपार ॥ ३ ॥

बदरी श्लेष्मातकी आंवळी । शालमली करवंदी जांबुळी ।
चारी वल्लाबकी गुग्गुळी । शमी वेरुकळी चिंचाणिका ॥४॥
ऐसिया वृक्षांचीं अचाढ । डांगें लागलीं घनदाट ।
माजी निर्झरोदकाचे पाट । सैरा वैरा धांवती ॥ ५ ॥
मस्तकें उचलोनि दिनकर । छायें रक्षिला अंधकार ।
माजी श्वापदगणांचे भार । सुखावले सुखवस्ती ॥ ६ ॥
हरिण, करी, सिंह, शार्दूळ । चित्ते, चितेळ, तरस, तरळ ।
रिक्षरोही गवे मांसाळ । अरण्यसारें माजलें ॥ ७ ॥

ಮಹಾಬಳೇಶ್ವರ ಕ್ಷೇತ್ರವು ಬಹು ಪುರಾತನದಿದ್ದು ಅದರ ಮಹತ್ವವು ಮೊದಲಿನಿಂದಿರುವದು. ಆ ಕ್ಷೇತ್ರದ ಪೌರಾಣಿಕ ಕೆಲವು ಮಾಹಿತಿಯನ್ನು ವಾಚಕಮಹಾಶಯರಿಗಾಗಿ, ಮುಂದುಗಡೆಯಲ್ಲಿ ಕೊಟ್ಟಿರುತ್ತೇವೆ. ಆ ಅತ್ಯಂತ ರಮಣೀಯ ಸ್ಥಾನವು ಸೃಷ್ಟಿಸೌಂದರ್ಯ, ಹಾಗು ಆರೋಗ್ಯದೃಷ್ಟಿಯಿಂದ ಸ್ಪೃಹಣೀಯದಾಗಿರುತ್ತದೆ. ಮೇಲ್ಭಾಗದಲ್ಲಿ ಬರೆದ ಮುಕ್ತೇಶ್ವರ ಕವಿಯ ಸೃಷ್ಟಿವರ್ಣನಾತ್ಮಕ ಪದ್ಯಗಳಲ್ಲಿ ವರ್ಣಿಸಿದಂತೆಯೇ ಅಲ್ಲಿಯ ಸ್ಥಿತಿ ಇರುತ್ತದೆ. ಮಹಾಬಳೇಶ್ವರದಲ್ಲಿ ಬೇರೆ ಬೇರೆ ಸ್ಥಳಗಳಿಂದ ಜನರು ಬೇಸಿಗೆಯ–ನಿಮಿತ್ತ ಬಂದು ನಿಲ್ಲುವರು. ಆ ಸ್ಥಳಕ್ಕೆ ಕರ್ನಾಟಕ ಬಂಧುಭಗಿನಿಯರನ್ನು ಒಯ್ಯುವ ವಿಚಾರವದೆ.

ನಾವು ಮದ್ರಾಸ ಸದರ್ನಮರಾಠಾ ರೇಲ್ವೆಯ, ಶೇಡಬಾಳ ಸ್ಟೇಶನದಿಂದ ರಾತ್ರಿಯ ೮॥ ಘಂಟೆಯ ಉಗಿಬಂಡಿಯಲ್ಲಿ ಕೂತು ಮರುದಿವಸ ಬೆಳಗಿನ ೬ ಘಂಟೆಗೆ ವಾಠಾರ, ಸ್ಟೇಶನಕ್ಕೆ ಬಂದಿಳಿದೆವು. ಆದರ ಎತ್ತರವು ಸಮುದ್ರ ಸಪಾಟಿಯಿಂದ, ೨೬೨೪ ಫೂಟವಿರುವದು. ಅಲ್ಲಿ ಮೋಟಾರ, ಟಾಂಗಾ, ಬಂಡಿ ಮೊದಲಾದವುಗಳು ದೊರೆಯುತ್ತವೆ. ತರುವಾಯ ಮೋಟಾರದಲ್ಲಿ ಕುಳಿತು, ವಾಯಿಗ್ರಾಮಕ್ಕೆ ಬಂದು, ಹತ್ತುಹದಿನೈದು ಮಿನಿಟು ವಿಶ್ರಮಿಸಿದೆವು. ಬಳಿಕ ಪಸರಣಿ ಘಟ್ಟದ ಮೇಲಿಂದ ನಾನಾಪ್ರಕಾರದ ಶೋಭೆಯನ್ನು ನೋಡುತ್ತ ಪಾಂಚಗಣಿ ಪೇಠೆಯೊಳಗಿಂದ ಹಾಯ್ದು, ನಾಗಮುರಿಗೆಯಂತಿರುವ ಅತಿಶಯ ಏರಿಳಿತವಾದ ಮಾರ್ಗದಿಂದ ಮಹಾಬಳೇಶ್ವರಕ್ಕೆ ಬಂದು ಹೊಸ ಎಜಂಟರಾದ, ಸಿ. ಡಿ. ದಿಕ್ಷೀತರ ಬಂಗಲೆಯನ್ನು ಪ್ರವೇಶಿಸಿದೆವು. ಅಲ್ಲಿಯ ಹೊಸ ಎಜಂಟರು

ಎಲ್ಲ ಪ್ರಕಾರದ ವ್ಯವಸ್ಥೆಯನ್ನು ಮಾಡಿಕೊಟ್ಟು ತಮ್ಮ ಶ್ರಮದ ಬಗೆ ಕಮೀ
ವನ್ನು ತೆಗೆದುಕೊಂಡರು.

ಸಾತಾರದಿಂದ ವಾಯಿ—೨೦ ಮೈಲು.
ವಾಯಿಯಿಂದ ಪಾಂಚಗಣಿ—೮ ಮೈಲು.
ಪಾಂಚಗಣಿಯಿಂದ ಮಹಾಬಳೇಶ್ವರ—೧೨ ಮೈಲು.

ನಹರ:—ಸಾತಾರೆ ಜಿಲ್ಹೆಯೊಳಗಿನ ಜಾವಲೀ ತಾಲೂಕಿನಲ್ಲಿರ
ಸಹ್ಯಾಚಲದ ಅತ್ಯುನ್ನತ ಶಿಖರದ ಮೇಲೆ ಸುಖಕರವಾದ ತಂಪು, ಆರೋ
ಕರವಾದ ಹವೆಯನ್ನೀಯುವ, ಮಹಾಬಳೇಶ್ವರ ಜನವಸತಿ ಸ್ಥಾನವು ತಿ
ಪಶ್ಚಿಮದಂಡೆಗಿರುತ್ತದೆ. ಅದರ ಎತ್ತರವು ಸಮುದ್ರ ಸಪಾಟಿಯಿಂದ ೪೭೧
ಫೂಟು. ಮಹಾಬಳೇಶ್ವರದ ಗುಡ್ಡದ ಸಾಲು ಮೂವತ್ತು ಮೈಲು ಉದ್ದವಿದ
ಅದರ ಕ್ಷೇತ್ರವು ಸರಾಸರಿ ಮುನ್ನೂರು ಎಕರೆಗಿಂತ ಹೆಚ್ಚಿರುತ್ತದೆ. ಆ ಗ್ರಾಮ
ಮಹಾಬಳೇಶ್ವರವೆಂಬ ಹೆಸರು ಪುರಾತನದ್ದಿರುತ್ತದೆ. ಅಲ್ಲಿಯ ಮುಖ್ಯ ಪೇಟೆಯ
ಮಾಲಕಮ ಸಾಹೇಬರಿಂದ ಸ್ಥಾಪಿತವಾದ ಮೂಲಕ ಅದಕ್ಕೆ ಮಾಲಕಮಪೇ
ಎಂಬ ಹೆಸರು ಬಿದ್ದಿರುವದು. ಮಹಾಬಳೇಶ್ವರವು ಕೆಲವು ಕಾಲ 'ನಹರ
ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದಿತು. ನಹರವೆಂದರೆ ತಂಪುಪ್ರದೇಶ.

ಈ ಗ್ರಾಮವು ಪೂರ್ವದಲ್ಲಿ ಕುರುಬ, ಕೋಳಿ ಮೊದಲಾದ ಜಾತಿ
ಜನರ ವಸತಿಸ್ಥಾನವಾಗಿದ್ದಿತು. ಈ ಮೊದಲು ಹುಲಿ, ಕಾಡುಹಂದಿ ಮೊದಲಾ
ಹಿಂಸ್ರಪಶುಗಳು ಊರಲ್ಲಿ ಅತ್ತಿತ್ತ ಅಡ್ಡಾಡುತ್ತಿದ್ದವು. ಗಿಡಗಂಟಿಗಳು ವಿಶೇ
ದಟ್ಟವಾಗಿರುವ ಮೂಲಕ ಹನ್ನೆರಡು ತಿಂಗಳುಗಳಲ್ಲಿ ಸಹ ಸೂರ್ಯದರ್ಶ
ವಾಗುವದು ಬಲುಜಿಗಿಯಾಗಿದ್ದಿತು. ಮುಂದೆ ಕ್ರಮೇಣ ಸುಧಾರಣೆಗಾಗಿ ಈಗ
ಉನ್ನತಸ್ಥಿತಿ ಪ್ರಾಪ್ತವಾದದ್ದಲ್ಲದೆ ನಹರವೆಂಬ ಹೆಸರು ಲೋಪವಾಗಿ ಮಹಾ
ಬಳೇಶ್ವರವೆಂಬ ನಾಮವು ಸ್ಥಿರವಾಯಿತು.

ಮೂಲ ಮಹಾಬಳೇಶ್ವರ, ಶ್ರೀಶಂಕರನ ಸ್ಥಾನ, ಪಂಚಗಂಗಾ

शिरस्योर्ध्वे मौलिर्नयनयुगुलं भाति विमलं
ललाटे कस्तूरीतिलकमपि कृष्णे स्मितमुखी ।
चतुर्हस्ते पद्मं वरदमभयं शंखवलयं
कढौ सूक्ष्मं पीतांबरमपि च वंदे तव पदं ॥ १ ॥

ಮೂಲ ಮಹಾಬಳೇಶ್ವರವು ಪ್ರಸಿದ್ಧ ಕ್ಷೇತ್ರವಿದ್ದು, ಮೂಲಕಮ್ ಪೇಠೆಯ ದಕ್ಷಿಣಕ್ಕೆ ಸುಮಾರು ಮೂರು ಮೈಲಿನ ಅಂತರದಲ್ಲಿರುವದು: ಆ ಕ್ಷೇತ್ರದ ಉತ್ಪತ್ತಿ ವಿಷಯು, ಸ್ಕಂದಪುರಾಣದಲ್ಲಿ ಬರೆದಿರುತ್ತದೆ. ಅದರೊಳಗಿನ ಒಂದೆರಡು ಮಾತು ಗಳನ್ನು ಇದರಡಿಯಲ್ಲಿ ಬರೆಯುತ್ತೇವೆ.

ಬ್ರಹ್ಮದೇವರು ಬ್ರಹ್ಮಲೋಕದಲ್ಲಿ ತಪಸ್ಸನ್ನು ಮಾಡುತ್ತಿರಲು ವಿಷ್ಣುವು ಆತನಿಗೆ ಮನಷ್ಯಸೃಷ್ಟಿನಿರ್ಮಾಣಮಾಡಬೇಕಾಗಿ ಆಜ್ಞೆಯನ್ನಿತ್ತನು. ಆಗ ಬ್ರಹ್ಮದೇವನು, ಶಿವ, ವಿಷ್ಣು, ಸರಸ್ವತಿ, ಕಶ್ಯಪ, ವೇದ ಮೊದಲಾದವರನ್ನು ಕೂಡಿಕೊಂಡು ಸಹ್ಯಾದ್ರಿಯ ಉನ್ನತಪ್ರದೇಶಕ್ಕೆ ಬಂದನು. ಬಳಿಕ ಬ್ರಹ್ಮ ವಿಷ್ಣು ಮಹೇಶ್ವರ ಈ ಮೂವರು ಬ್ರಹ್ಮತೀರ್ಥ, ವಿಷ್ಣುತೀರ್ಥ, ರುದ್ರತೀರ್ಥಗಳಿ ರುವ ಸ್ಥಳಗಳಲ್ಲಿ ತಪಶ್ಚರ್ಯ ಮಾಡಿದರು. ಆ ವೇಳೆಗೆ ಸೃಷ್ಟಿಯನ್ನುಂಟುಮಾ ಡುವ ಹಾಗೆ ತಪಃಸಿದ್ಧಿಯಾಗಿ ತಪೋವನ ಮೊದಲಾದವುಗಳು ನಿರ್ಮಾಣವಾದ ವು. ಅವುಗಳಲ್ಲಿಯ ಒಂದು ಸ್ಥಳದಲ್ಲಿ ಬ್ರಹ್ಮದೇವರು ಒಂದು ಯಜ್ಞವನ್ನು ಮಾಡಿದರು. ಅದರ ಬಗ್ಗೆ ಸ್ಕಂದಪುರಾಣದಲ್ಲಿ ಸಾಗ್ರ ಸಂಗತಿಯುಂಟು.

ಮಹಾಬಳ, ಅತಿಬಳರೆಂಬ ಪರಾಕ್ರಮಿಗಳಾದ ಅಣ್ಣತಮ್ಮಂದಿರುಗಳು ಪೂರ್ವದಲ್ಲಿ ಆ ಸ್ಥಳದೊಳಗೆ ವಾಸಮಾಡುತ್ತಿದ್ದರು. ಅವರಿಗೂ ಬ್ರಹ್ಮ, ವಿಷ್ಣು, ಮಹೇಶ್ವರರಿಗೂ, ತುಮಲ ಯುದ್ಧವಾಯಿತು. ಅದರಲ್ಲಿ ವಿಷ್ಣುವು ಅತಿಬಲನನ್ನು ಕೊಂದನು. ಮಹಾಬಲನ ಮುಂದೆ ಮಾತ್ರ ಯಾರ ಆಟವು ನಡೆಯದಾಯಿತು. ಕಾರಣ ತ್ರಿಮೂರ್ತಿಗಳು ಮಾಯಾದೇವಿಯನ್ನು ಸ್ತುವಿಸಿ, ಆಕೆಯನ್ನು ಪ್ರಸನ್ನ ಳಾಗಿ ಮಾಡಿಕೊಂಡರು. ಆ ಮೇಲೆ ಮಾತ್ರ ಮಹಾಬಲನೆಂಬ ದೈತ್ಯನು ತನ್ನ ದೇಹವನ್ನು ದೇವರಿಗೆ ಅರ್ಪಿಸಬೇಕಾಯಿತು. ಆಗ ತ್ರಿಮೂರ್ತಿಗಳು ದೇವಿಯ ಆಜ್ಞಾನುಸಾರವಾಗಿ ದೈತ್ಯನಿಗೆ ಸಾಯುವ ಮೊದಲು ಆತನ ಇಷ್ಟಾನುಸಾರ ವರ ವನ್ನು ಕೊಟ್ಟರು. ಆ ವರಕ್ಕನುಸಾರವಾಗಿ ಶಿವನು ಲಿಂಗರೂಪ ಧಾರಣಮಾಡಿ, ತಲೆಯಮೇಲೆ, ಪಂಚಗಂಗೆಯ ಉಗಮದ ಭಾರವನ್ನು ವಹಿಸಿ ಮಹಾಬಳೇಶ್ವರ, ವಿಷ್ಣುವು ಅತಿಬಳೇಶ್ವರ, ಬ್ರಹ್ಮನು ಕೋಟೇಶ್ವರರೆಂಬ ನಾಮುಗಳಿಂದ ವಾಸ ಮಾಡಹತ್ತಿದರು. ಮತ್ತು ತಾವಿರುವ ಸ್ಥಳಕ್ಕೆ ಮಹಾಬಳೇಶ್ವರವೆಂಬ ಅಭಿದಾನ ವನ್ನಿತ್ತರು.

ಮಹಾಬಳೇಶ್ವರದಲ್ಲಿ ಕೃಷ್ಣಾ, ವೇಣ್ಯಾ, ಕುಮುದ್ವತಿ (ಕೋಯನಾ ಗಾಯಿತ್ರಿ, ಸಾವಿತ್ರಿ ಮೊದಲಾದ ಹೊಳೆಗಳ ಉಗಮಸ್ಥಾನಗಳಿರುವವು. ಸ್ಥಳದಲ್ಲಿ ಒಂದು ದೇವಾಲಯವನ್ನು ಕಟ್ಟಿಸಿರುವರು. ಅದಕ್ಕೆ ಕೃಷ್ಣಾಬಾಯಿಯ ದೇವಾಲಯವೆಂದೆನ್ನುವರು. ದೇವಾಲಯದಲ್ಲಿ ಮೇಲೆ ಹೇಳಿದ ನದಿಗ ಹೊರ್ತು, ಭಾಗೀರಥಿ, ಸರಸ್ವತಿ ಮೊದಲಾದ ಸಪ್ತನದಿಗಳ ನೀರಿನ ಒಂದ ಕರೇ ಕಲ್ಲಿನಿಂದ ಕಟ್ಟಿದ ಹೌದು ಇರುವದು. ಅದಕ್ಕೆ ಬ್ರಹ್ಮಕುಂಡವೆಂದೆನ್ ತ್ತಾರೆ. ಅದರ ಸಮೀಪದಲ್ಲಿಯೇ ಮತ್ತೊಂದು ಅದರಂತಿರುವ ಹೌದು ಇರ ವದು. ಅದಕ್ಕೆ ವಿಷ್ಣುಕುಂಡವೆನ್ನುತ್ತಾರೆ. ಆ ಕುಂಡಗಳಲ್ಲಿ ಸ್ನಾನ ಮಾಡಿ ಮನುಷ್ಯನು ಪುನೀತನಾಗದಿರನು!

ಬ್ರಹ್ಮಾರಣ್ಯ:—ಮಹಾಬಳೇಶ್ವರ ದೇವಾಲಯದ ಪಶ್ಚಿಮಕ್ಕೆ ಮೂರ ನಾಲ್ಕು ಮೈಲುಗಳ ಅಂತರದ ಮೇಲೆ ಒಂದು ವಿಸ್ತೀರ್ಣವಾದ ಗಿಡಗಂಟಿಯ ಸ್ಥಳವಿರುವದು. ಅಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ಕೂಡಿ, ಒಂದು ಯಜ್ಞ ವನ್ನು ಮಾಡಿದ್ದರಷ್ಟೇ? ಆ ಯಜ್ಞದಲ್ಲಿ ಬ್ರಹ್ಮದೇವನು, ಅಧ್ವರ್ಯುನಾಗಿರು ಮೂಲಕ ಆ ಸ್ಥಳಕ್ಕೆ ಅವನ ಹೆಸರು ಕೊಡಲ್ಪಟ್ಟಿತು. ಅಂದಿನಿಂದ ಅದು ಬ್ರಹ್ಮಾ ರಣ್ಯವೆಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಿರುವದು. ಅದು ನೋಡತಕ್ಕಂ ಸ್ಥಳವು. ಅಲ್ಲಿಯ ನೋಟವು ಭವ್ಯವೂ, ರಮಣೀಯವೂ ಆಗಿರುವದು. ಮತ್ತ ನಿರ್ಜನಸ್ಥಳವಾಗಿರುವ ಮೂಲಕ, ಹಿಂಸ್ರಪಶುಗಳ ನಿವಾಸಸ್ಥಾನವಾಗಿರುವದು ಅಲ್ಲಿಗೆ ಬೇಟೆಗಾಗಿ ಜನರು ಮೇಲಿಂದ ಮೇಲೆ ಹೋಗುತ್ತಿರುವರು. ಅಲ್ಲಿಯ ಯಜ್ಞಕುಂಡದ ಸ್ಥಳದಲ್ಲಿ ಈ ವರೆಗೆ ದೊರೆಯುವ ಭಸ್ಮವನ್ನು ಹಿಂದೂಜನರ ತೆಗೆದುಕೊಳ್ಳುತ್ತಿರುವರು. ಅರಣ್ಯದಲ್ಲಿ ಅಲ್ಲಲ್ಲಿಗೆ ನಾನಾಪ್ರಕಾರದ ಸರ್ಪಗಳ ದೃಗ್ಗೋಚರವಾಗುವವು. ಕಾರಣ ಅದು ಒಬ್ಬಿಬ್ಬರು ಹೋಗುವ ಸ್ಥಳವಲ್ಲ.

ಕ್ಷೇತ್ರ:—ಮಹಾಬಳೇಶ್ವರದಲ್ಲಿ ಬ್ರಾಹ್ಮಣ, ಕೋಳಿ, ಕುರುಬ ಮೊ ಲಾದ ಜಾತಿಯ ಜನರ ವಸ್ತಿಯು ದಟ್ಟವಿದ್ದು ಅವರ ಉದರನಿರ್ವಾಹವು ಯಾತ್ರಿ ಕರಿಂದ ದೊರೆಯುವ ಹಣದ ಮೇಲೆಯೇ ಹೆಚ್ಚಾಗಿ ಅವಲಂಬಿಸಿರುವದು ಮಹಾಬಳೇಶ್ವರ, ಅತಿಬಳೇಶ್ವರ, ಕೋಟೇಶ್ವರ ಕೃಷ್ಣಾ, ಕಮಲಜಾನಾಮು ದೇವತೆಗಳ ದೇವಾಲಯಗಳು ಅತಿ ಪುರಾತನದವುಗಳುಂಟು. ಅವುಗಳನ

ಕರೇಕಲ್ಲಿನಿಂದ ಕಟ್ಟಿರುತ್ತಾರೆ. ಆ ದೇವಾಲಯಗಳ ಜೀರ್ಣೋದ್ಧಾರವನ್ನು ಸಂಸ್ಥಾನಿಕರೂ, ಶ್ರೀಮಂತರೂ ಮಾಡಿರುವರು. ಕೃಷ್ಣಾಬಾಯಿಯ ದೇವಾಲಯದ ಹಿಂಬದಿಗೆ ರಾಮದಾಸ ಸ್ವಾಮಿಗಳಿಂದ ಸ್ಥಾಪಿತವಾದ ಹನುಮಂತ ದೇವರ ಗುಡಿಯುಂಟು. ಹೋಳಕರ ಮನೆತನದ ಅಹಲ್ಯಾಬಾಯಿಯು ರುದ್ರೇಶ್ವರ ದೇವಾಲಯವನ್ನು ಕಟ್ಟಿಸಿರುವಳು. ರುದ್ರ, ಚಕ್ರ, ಹಂಸ, ಪಿತೃಮುಕ್ತಿ ಅರಣ್ಯ, ಮಲಾಪಕರ್ಶಗಳೆಂಬ ತೀರ್ಥಗಳುಂಟು. ಕೊಲ್ಹಾಪುರ ಸಂಸ್ಥಾನದ ಕಾರಭಾರಿ ಕೈ. ವಾ. ಮಹಾದೇವ ವಾಸುದೇವ ಬರ್ವೆ ಇವರು ಯಾತ್ರಿಕರ ಸಲುವಾಗಿ ಒಂದು ಧರ್ಮಸಾಲೆಯನ್ನು ಕೃಷ್ಣಾಬಾಯಿಯ ದೇವಾಲಯದ ಸಮೀಪದಲ್ಲಿಯೇ ಕಟ್ಟಿಸಿರುವರು. ಪ್ರತಿವರ್ಷ ಕೃಷ್ಣಾಬಾಯಿಯ ಉತ್ಸವವು ಫಾಲ್ಗುಣ ವದ್ಯದಲ್ಲಿ ಐದು ದಿವಸ ನಡೆಯುವದು.

ಮಹಾಬಳೇಶ್ವರ ದೇವಾಲಯದಲ್ಲಿ ರುದ್ರಾಕ್ಷಾಕೃತಿ ಸ್ವಯಂಭೂಲಿಂಗವಿರುವದು. ಲಿಂಗದ ಮೇಲೆ ಐದು ದೊಡ್ಡ ಛಿದ್ರಗಳಿದ್ದು, ಅವು ಯಾವಾಗಲೂ ನೀರಿನಿಂದ ತುಂಬಿರುವವು. ಅಲ್ಲಿಂದಲೇ ಪಂಚನದಿಗಳು ಉಗಮವಾಗಿರುತ್ತವೆಂದು ಹೇಳುವರು. ಪೇಶ್ವೆಯವರ ಕಾಲಕ್ಕೆ ಹೆಸರಾದ ಶೂರ ಸರದಾರ ಬಾಪೂ ಗೋಖಲೆ ಹಾಗು ವಾತಾರದ ಸೋನೀಯವರ ನಂದಾದೀಪಗಳು ಈಗಲೂ ಇರುವವು. ಗರ್ಭಗುಡಿಯ ಹೊರಬದಿಯಲ್ಲಿ ಕಾಳಭೈರವನ ಸ್ಥಾನವಿದ್ದು, ಅಲ್ಲಿ ಪುರಾಣ ಕೀರ್ತನಗಳು ನಡೆಯುವವು. ಸಮೀಪದಲ್ಲಿಯೇ ಬಸವೇಶ್ವರನ ಮೂರ್ತಿಯಿರುವದು. ದೇವರ ಮುಖ್ಯ ಉತ್ಸವವು, ಮಾಘ ವದ್ಯ ೧೪ರಿಂದ ಫಾಲ್ಗುಣ ಶುದ್ಧ ೩ರವರೆಗೆ ಐದು ದಿವಸ ಜರಗುವದು. ಅದಲ್ಲದೆ ಆಶ್ವೀನ ಮಾಸದಲ್ಲಿ ಶಾರದಾನವರಾತ್ರಿಯ ಉತ್ಸವವು ವಿಜೃಂಭಣೆಯಿಂದ ನಡೆಯುವದು.

ನೋಟ:—ಮಹಾಬಳೇಶ್ವರ ಕ್ಷೇತ್ರವನ್ನು ಬಿಟ್ಟು ಮೂರು ಮೈಲು ಪ್ರವಾಸಮಾಡಿ ಮಹಾಬಳೇಶ್ವರ ಅಥವಾ ಮಾಲಕಮ ಪೇಠೆಯ ಕಡೆಗೆ ಹೋಗೋಣ. ಮಹಾಬಳೇಶ್ವರವು ಹವೆಯ ದೃಷ್ಟಿಯಿಂದ ಬಹಳ ಪ್ರಸಿದ್ಧಿಯನ್ನು ಪಡೆದಿರುವದು. ಕ್ಷೇತ್ರದ ಹೊರಹೊರಟಲು, ನೋಡಿದತ್ತೆಲ್ಲ ಗುಡ್ಡ ಹಾಗೂ ಗಿಡಗಳ ಹೊರ್ತು ಏನೂ ಕಂಡುಬರುವದಿಲ್ಲ. ಬಲಬದಿಗಿರುವ ಕೊಂಕಣ ಪ್ರಾಂತದೊಳಗಿನ ಅನೇಕ ಗುಡ್ಡಗಳ ಸಾಲುಗಳು ನಾಟಕಗೃಹದೊಳಗಿನ ಪ್ರೇಕ್ಷಕರ ಸಲುವಾಗಿ ಮಾಡಿದ ವ್ಯವಸ್ಥೆಯ ಸೆನಪುಮಾಡಿಕೊಡುವವು. ಪ್ರಥ

ಮದಲ್ಲಿ ಕುರ್ಚಿಯು ಸಾಲುಗಳಂತೆ ಸಣ್ಣ ಸಣ್ಣ ಗುಡ್ಡದ ಸಾಲುಗಳೂ, ತದನ
ಅವುಗಳಾಚೆಗಿರುವ ಪ್ರತಾಪಗಡ, ಮತ್ತು 'ಸಡಲಬಕಹಿಲ್ಲ'ದ ಗುಡ್ಡಗ
ಗ್ಯಾಲರಿಯು ಭಾಸವನ್ನುಂಟುಮಾಡುವವು. ಸಾವಿತ್ರಿ ನದಿಯು ನೀರು ಪ್ರತ
ಗಡದ ಕೆಳಬದಿಯಲ್ಲಿ ಹರಿಯುತ್ತಿರುವದು. ಈ ಪ್ರಕಾರದ ನೋಟದ ಮೇಲಿ
ಮಹಾಬಳೇಶ್ವರ ಸ್ಥಾನವು ಯಾವಾಗಲೂ ರಮಣೀಯವಾಗಿರುತ್ತದೆಂದೆನ
ಅಡ್ಡಿಯಿಲ್ಲ.

ಅಕ್ಟೋಬರ ತಿಂಗಳಲ್ಲಿ ಸಹ್ಯಾದ್ರಿಯ ಆ ಭಾಗವು ಬಹು ರಮಣೀ
ವಾಗಿರುವದು. ಆ ತಿಂಗಳಲ್ಲಿ ಪರ್ವತದ ಮೇಲಿನ ಬೈಲುಪ್ರದೇಶವೆಲ್ಲ ನಾ
ಪ್ರಕಾರದ ಹುಲ್ಲಿನಿಂದಲೂ, ಅಡವಿಯ ಹೂಗಳಿಂದಲೂ ತುಂಬಿಹೋಗಿರುವ
ನೋಡಿದಲ್ಲೆಲ್ಲ ಗುಲಾಬೀ ಹೂ ಗೊಂಚಲಗಳು ಬೇಲಿಯ ಮೇಲೆಲ್ಲ ಪಸರಿ
ವವು. ಪ್ರತಿಯೊಂದು ಗುಡ್ಡದ ಮೇಲಿಂದ ಶುಭ್ರನೀರಿನ ಪ್ರವಾಹವು ಕೆಳಬದಿ
ದರಿಯಲ್ಲಿ ಹಾರಿಕೊಳ್ಳುತ್ತಿರುವದು. ಆ ಸಮಯದಲ್ಲಿ ನೀರು ಅತಿಶಯ ತಂ
ವವು. ವೇಣ್ಣ್ಯಾಸರೋವರ ಹಾಗು ಅದರ ಸುತ್ತಲಿನ ಗಿಡಗಳನ್ನು ನೋ
ಕೂಡಲೆ ಪುರಾಣ ಪ್ರಸಿದ್ಧ ಪಂಪಾಸರೋವರದ ಸ್ಮರಣೆಯಾಗದಿರದು! ಎಲ್ಲ
ಯ ಹೊಳೆಯದಂಡೆ, ಕಲ್ಲು, ದಿನ್ನೆ ಮೊದಲಾದವುಗಳು ಹುಲ್ಲು, ಅಥವಾ ಹ
ಯಿಂದ ಹಸರು ಮುರಿಯುವವು. ಹೊಳೆಯ ನೀರು ಒಡಲ ತುಂಬಿ ಭರದಿ
ಹರಿಯುತ್ತಿರುವದು. ಇದೆಲ್ಲ ಚಮತ್ಕಾರವು ಪುಣೆಯಿಂದ ಮುಂಬಯಿಗೆ ಹೋ
ಮಾರ್ಗದಲ್ಲಿದ್ದ ಖಂಡಾಳೆಘಟ್ಟದ ಮೇಲಿಂದ ನೋಡುವವರಿಗೆ ದೃಗ್ಗೋ
ವಾಗುವದು.

ಮಾರ್ಚದಿಂದ ಮಳೆಗಾಲವು ಬರುವವರೆಗೆ ಹೂಗಳೂ ಹುಲ್ಲೂ ಇಲ್ಲದ
ಗುವವಲ್ಲದೆ, ಝರಿ ಹಾಗು ಧಬಧಬೆಗಳು ಶುಷ್ಕವಾಗಿ ಹೋಗುವವು.
ಕಡೆಗೂ ಬೀಳುವ ಹೊಗೆ ಮಂಜಿನಿಂದ ನೋಡತಕ್ಕ ಸ್ಥಳಗಳು ಸ್ಪಷ್ಟ
ಕಾಣಿಸುವದಿಲ್ಲ. ಸದೈವ ಅಡವಿಯೊಳಗಿನ ಗಿಡಗಂಟೆಗಳಿಗೆ ಚಿಗುರೆಲೆಗಳು
ವವು. ಅಡವಿಗಳು ಗಿಡಗಳಿಂದ ಶೋಭಾಯಮಾನವಾಗಿ ತೋರುವವು.
ತಿಂಗಳ ಕಡೆಕಡೆಯ ಭಾಗದಲ್ಲಿ ಹೊಗೆ ಮಂಜು ನೆಲದ ಮೇಲೆ ಬರುವ ಮ
ಕ ಆಕಾಶದ ಹೊರ್ತು ಏನೂ ಕಾಣಿಸುವದಿಲ್ಲ. ಸೂರ್ಯನು ಮೇಲಕ್ಕೆ
ಹಾಗೆ ಹೊಗೆ ಮಂಜು ಕ್ರಮೇಣ ಇಲ್ಲದಂತಾಗುವದು.

ಮಳೆಗಾಲದಲ್ಲಿ ಮನೆಹೊರಗೆ ಬೀಳುವದು ಬಲು ಬಿಗಿಯಾದದ್ದಲ್ಲದೆ ಮನೆಯೊಳಗಿರುವದಾದರೂ ಬಹು ಪ್ರಯಾಸ. ನಾಲ್ಕು ತಿಂಗಳುಗಳ ವರೆಗೆ ಸೂರ್ಯನ ದರ್ಶನವೇ ಆಗುವದಿಲ್ಲ. ದಿನಾಲು ಮಳೆಯು ಒಂದೇಸವನೆ ಸುರಿಯುವದರಿಂದ, ಕೊಡೆ ಹಾಗು ಕಂಬಳಿಗಳ ಉಪಯೋಗವು ಹೇಗೆ ಆಗಬೇಕೋ ಹಾಗೆ ಆಗುವದಿಲ್ಲ. ಹೇಗಾದರೂ ಮಾಡಿ ಒಂದುವೇಳೆ ಮನೆ ಬಿಟ್ಟು ಹೊರಬಿದ್ದಲ್ಲಿ ಆದಷ್ಟು ಬೇಗ ತಿರುಗಿ ಹೋಗಿ ಕಾಸಿಕೊಳ್ಳಬೇಕೆಂಬ ವಿಚಾರವು ಮೇಲಿಂದ ಮೇಲೆ ಮನಸ್ಸಿನಲ್ಲಿ ಬರತೊಡಗುವದು. ಹನ್ನೆರಡು ತಾಸಿನ ಹಗಲು ಸಹ ರಾತ್ರಿಯ ಭಾಸವನ್ನುಂಟುಮಾಡುವದು. ಅಂದ ಬಳಿಕ ಮನೆಯೊಳಗೆ ಬೆಳಕು ಎಲ್ಲಿಂದ ಬರಬೇಕು? ಮನೆಯೊಳಗೆ ಯಾವತ್ತೂ ಜನರು ಬೆಂಕಿಯನ್ನು ಮಾಡಿ ಕಾಸಿಕೊಳ್ಳುತ್ತ ಕೂಡ್ರುತ್ತಿರುವರು. ಹೊಗೆ ಹಾಗು ಮಂಜುಗಳ ಮೂಲಕ ಜನರು ಬೇಸತ್ತು ಹೋಗುವರು.

ಮಾಲಕಮ್ ಪೇಠೆ:—ಸಾತಾರೆಯ ರೆಸಿಡೆಂಟರಾದ ಲಾಡವಿಕ ಸಾಹೇಬರು ಕ್ರಿ. ಶ. ೧೮೨೪ರಲ್ಲಿ ಘನಘೋರ ಅರಣ್ಯದೊಳಗಿಂದ ಮಹತ್ಪ್ರಯಾಸ ಮಾಡಿ ಹಾಗೂ ಹೀಗೂ ಸಿಡ್ನಿಪಾಯಿಂಟಕ್ಕೆ ಬಂದು ತಲ್ಪಿದರು. ಕೆಲವು ದಿವಸ ಗತಿಸಿದ ಮೇಲೆ ಈ ಸ್ಥಳವು ರಮಣೀಯವಾಗಿದ್ದು, ಹವೆಯು ದೃಷ್ಟಿಯಿಂದ ಅತ್ಯುತ್ತಮವಾಗಿರುವದೆಂದು ಜನರಿಗೆ ತಿಳಿಸಿದ್ದಲ್ಲದೆ ಸರಕಾರದಲ್ಲಿ ಜಾಹೀರ ಮಾಡಹೇಳಿದರು. ಆಮೇಲೆ ಕ್ರಿ. ಶ. ೧೮೨೬ರಲ್ಲಿ ಸಾತಾರೆಯ ರೆಸಿಡೆಂಟರಾದ ಕರ್ನಲ್ ಬ್ರಿಗ್ ಸಾಹೇಬರು ಇಲ್ಲಿ ಒಂದು ಅತ್ಯುತ್ತಮ ಬಂಗಲೆಯನ್ನು ಕಟ್ಟಿಸಿ ಸಾತಾರೆಯ ಮಹಾರಾಜರ ಕಡಿಯಿಂದ ಅಲ್ಲಿಯವರೆಗೆ ಒಂದು ರಾಜಮಾರ್ಗವನ್ನು ಮಾಡಿಸಿದರು. ಮುಂದೆ ಕೆಲವು ದಿವಸಗಳಾದ ಮೇಲೆ ಮುಂಬಯಿಯ ಗವ್ಹನರರಾದ ಸರ್ ಜಾನಮೂಲಕಮ ಸಾಹೇಬರು ಹವೆಯ ನಿಮಿತ್ತ ಬಂದು ಯುರೋಪಿಯನ್ನರಿಗಾಗಿ ದವಾಖಾನೆಯನ್ನು ಸ್ಥಾಪಿಸಿದರು. ಅಂದಿನಿಂದ ಎಷ್ಟೋ ಯುರೋಪಿಯನ್ನರು ಹವೆಯ ದೆಸೆಯಿಂದ ಬರಲಾರಂಭಿಸಿದರು. ಕ್ರಿ.ಶ. ೧೮೨೮ರ ಸುಮಾರಕ್ಕೆ ಮಾಲಕಮಸಾಹೇಬರು ವುಯಿಲ್ಯಮ ಎಂಬ ಡಾಕ್ಟರರನ್ನು ಸಂಗಡ ಕರಕೊಂಡು ಬಂದು ಅವರಿಂದ ಹವೆಯ ಚಿಕಿತ್ಸೆಯನ್ನು ಮಾಡಿಸಿ ತಮಗಾಗಿ ಒಂದು ಅಂದವಾದ ಬಂಗಲೆಯನ್ನು ಕಟ್ಟಿಸಿದರು. ಆ ಬಂಗಲೆಯ ಹೆಸರು "ಮೌಂಟಮಾಲಕಮ" ಎಂಬದಾಗಿ ಇಟ್ಟರು. ಸಾತಾರೆಯ ಮಹಾರಾಜರು

ಮೊಲಕಮಸಾಹೇಬರು ಹೇಳಿಕೆಯಂತೆ ನಹರದಲ್ಲಿ ಒಂದು ಗ್ರಾಮವನ್ನು
ಸ್ಥಾಪಿಸಿ ಅದಕ್ಕೆ 'ಮಾಲಕಮ ಪೇಠ' ಎಂಬ ಅಭಿದಾನವನ್ನಿತ್ತರು. ಅದು
ಸಾಂಪ್ರತದಲ್ಲಿ ಮಹಾಬಳೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧವಿರುವದು. ಸಾತಾ
ರೆಯು ಮಹಾರಾಜರು ಮಹಾಬಳೇಶ್ವರದಿಂದ ಎರಡು ಮೈಲಿನ ಮೇಲೆ ವೇಣಾ
ಕೆರೆಯನ್ನು ಕಟ್ಟಿಸಿದ್ದಲ್ಲದೆ ಸಾತಾರೆಯು ಹಳೇ ಮಾರ್ಗವನ್ನು ವೃದ್ಧಿಂಗತ ಮಾಡಿ
ದರು. ಸಾತಾರೆಯ ಸಂಸ್ಥಾನವು ಡಾಲಹೌಸಿಯು ಕಾಲದಲ್ಲಿ ಇಂಗ್ಲಿಷ ಸರಕಾರ
ವರ ಕೈಸೇರಿದ ಕೂಡಲೆ ಆ ಸ್ಥಳವಾದರೂ ಇಂಗ್ಲಿಷರ ವಶವಾಯಿತು. ಆ ಮೇಲೆ
ಇಂಗ್ಲಿಷರು ಮಾಲಕಮ ಪೇಠೆಗೆ ವಿಲಾಯತಿಯ ಸ್ವರೂಪವನ್ನಿತ್ತು ಅಲ್ಲಿಯ
ನೋಡತಕ್ಕ ಸ್ಥಳ, ಬಂಗಲೆ ಮೊದಲಾದವುಗಳಿಗೆ ಇಂಗ್ಲಿಷ ಹೆಸರುಗಳನ್ನು
ಕೊಟ್ಟರು. ಮಹಾಬಳೇಶ್ವರದಲ್ಲಿ ಮಾಲಕಮಪೇಠೆ, ಮರೀಪೇಠೆ ಎಂಬವುಗಳ
ಹೆಸರಾಗಿರುವವು.

ಭೂಪದಾರ್ಥ:—ಮಹಾಬಳೇಶ್ವರದಲ್ಲಿ ಸಂಚರಿಸತೊಡಗಲು ಕೆಲವು
ಕಡೆಗೆ ಕೆಂಪು, ಕೆಲವು ಕಡೆಗೆ ನಾಶೀಪುಡಿವರ್ಣದ ಭೂಮಿಯೂ, ಅಲ್ಲಲ್ಲಿಗೆ ಛಿದ್ರ
ಮಯವಾದ ಕಲ್ಲುಗಳೂ ದೃಗ್ಗೋಚರವಾಗುತ್ತವೆ. ನಾಶೀಪುಡಿ ಬಣ್ಣದ ಮಣ್ಣ
ನ್ನು ಅಲ್ಲಿಯ ಜನರು ಗೊಬ್ಬರದಂತೆ ಉಪಯೋಗಮಾಡಿ ಅನೇಕ ತರದ ಬೆಳೆ
ಗಳನ್ನು ತೆಗೆದುಕೊಳ್ಳುತ್ತಿರುವರು. ಅಲ್ಲಿ ದೊರೆಯುವ ಸೂಕ್ಷ್ಮಛಿದ್ರಮಯವಾದ
ಕಲ್ಲುಗಳಿಂದ ಕಬ್ಬಿಣವು ಹೊರಡುವದು. ಅವುಗಳಿಂದ ಪೂರ್ವದಲ್ಲಿ ಧಾವಡ
ಜನರು ಯಾಂತ್ರಿಕಸಾಧನವಿಲ್ಲದೆ ಕೃತ್ರಿಮಸಾಧನ ಹಾಗು ಸ್ವಲ್ಪ ಶ್ರಮದಿಂದ
ಅಶುದ್ಧವಾದ ಕಬ್ಬಿಣವನ್ನು ತೆಗೆದು ಅದರಿಂದ ಅಂಕಡೊಂಕಾದ ಆಯುಧ
ಹಂಚು, ಬುಟ್ಟಿ, ಸವಟು ಮೊದಲಾದವುಗಳನ್ನು ತಯಾರಿಸಿ ಅವುಗಳ ಮಾರಾ
ಟದ ಹಣದಿಂದಲೇ ತಮ್ಮ ಹೊಟ್ಟೆಹೊರಕೊಳ್ಳುತ್ತಿದ್ದರಂತೆ. ಸಾಂಪ್ರತಕ್ಕೆ ಅದು
ಹೇಳಹೆಸರಿಲ್ಲದಂತಾಗಿದೆ. ಇಲ್ಲಿಯ ಮಣ್ಣಿನಲ್ಲಿ ವಿಶೇಷ ಸ್ನಿಗ್ಧತೆ ಇದ್ದಮೂಲಕ
ಅರಿವೆ ಅಂಚಡಿಗಳಿಗೆ ಹತ್ತಿದ ಕಲೆಯು ಬೇಗ ಹೋಗುವದಿಲ್ಲ.

ಹವೆ:—ಮಹಾಬಳೇಶ್ವರವು ಸಮುದ್ರಸಪಾಟಿಯಿಂದ ೫೦೦೦ ಫೂಟು
ಎತ್ತರವಾದ ಶಿಖರದ ಮೇಲಿರುವದರಿಂದಲೂ, ಗಿಡಗಂಟೆ ಮೊದಲಾದವುಗಳು
ಎತ್ತರವಾಗಿ ಹಬ್ಬಿರುವದರಿಂದಲೂ, ಇಲ್ಲಿಯು ಹವೆಯು ತಂಪಿರುವದು. ಆ ಹವೆ
ಯಲ್ಲಿ ಬೇಕಾದಂಥ ಶ್ರಮದ ಕೆಲಸಗಳನ್ನು ಮಾಡಿದರೂ ಕೂಡ ಆಯಾಸ

ಕಲ್ಪನೆ ಸಹ ಬರುವದಿಲ್ಲ. ಅಂದಬಳಿಕ ಅದೊಂದು ಮಹಾಬಳೇಶ್ವರದ ಮಹತ್ವವೇ ಸರಿ! ಮಹಾಬಳೇಶ್ವರದ ಎತ್ತರವು ಬಹಳವಿದ್ದು ಗಿಡಗಂಟಿಗಳು ವಿಶೇಷ ಹಬ್ಬಿರುವ ಮೂಲಕ ಪರ್ಜನ್ಯೋದಕವಾಹಕ ಮೋಡಗಳ ಆಕರ್ಷಣವಾಗಿ, ಭೂಗೋಲಶಾಸ್ತ್ರದ ತತ್ವಕ್ಕನುಸರಿಸಿ, ಬೇರೆ ಸ್ಥಳಗಳಿಗಿಂತ ಮಳೆಯು ಹೆಚ್ಚಾಗುತ್ತದೆ. ಮಳೆಯ ವರ್ಷದ ಸರಾಸರಿ ಮಾನವು ಇನ್ನೂರಾ ಐವತ್ತು ಇಂಚು. ಇಲ್ಲಿಯ ಮಳೆಗಾಲವು ಜೂನ ತಿಂಗಳ ಆರಂಭದಿಂದ ಅಕ್ಟೋಬರದ ವರೆಗೆ ಇರುತ್ತದೆ. ಮಳೆಗಾಲದಲ್ಲಿ ಮಳೆಯು ಅತಿಶಯವಾಗುವ ಮೂಲಕ ಇಲ್ಲಿ ನಿಲ್ಲುವದೆಂದರೆ "ತಾನಾಗಿಯೇ ತನ್ನ ಕಾಲಮೇಲೆ ಕಲ್ಲು ಒಗೆದುಕೊಂಡಂತೆ" ಆಗುವದು.

ಅಕ್ಟೋಬರ ತಿಂಗಳಲ್ಲಿ ಮಳೆಯು ಸ್ವಲ್ಪವಾಗುವ ಮೂಲಕ ಮುಂಜಾನೆ ಹವೆಯು ಆರ್ದ್ರವಾದದ್ದಿರುವದು. ಸಾಯಂಕಾಲದಲ್ಲಿ ಮಂಜಿನಿಂದ ಯಾವತ್ತು ಪ್ರದೇಶವು ಕಾಣದಂತಾಗುವದು. ನವಂಬರ ದಿಶಂಬರ ತಿಂಗಳಲ್ಲಿ ಹವೆಯು ಶುಷ್ಕವಾಗಿ ಚಳಿಯು ಹೆಚ್ಚಾಗಹತ್ತುವದು. ಆದ್ದರಿಂದ ಮನೆಯೊಳಗಿನ ನೀರು ಒಮ್ಮೊಮ್ಮೆ ಹೆಪ್ಪುಗಟ್ಟುತ್ತದೆ. ಫೇಬ್ರುವಾರಿ ತಿಂಗಳಲ್ಲಿ ಚಳಿಯು ಕಡಿಮೆಯಾಗುತ್ತಹೋಗಿ, ಬೇಸಿಗೆಗೆ ಆರಂಭವಾಗುವದು. ಇಲ್ಲಿ ಬೇಸಿಗೆಯು ಮಾರ್ಚ ೧೫ನೇ ತಾರೀಖಿನಿಂದ ಎಪ್ರೇಲ ಅಖ್ಯೆರದವರೆಗೆ ಇರುವದು. ಮೇ ತಿಂಗಳ ಹವೆಯಲ್ಲಿ ಬದಲಾವಣೆಯಾಗಿ ಪಶ್ಚಿಮದಿಕ್ಕಿನ ಗಾಳಿಗಳು ಬೀಸತೊಡಗಲು ಉಷ್ಣಪ್ರದೇಶದಿಂದ ಇಲ್ಲಿ ಬರುವ ಜನರಿಗೆ ಸಮಾಧಾನವೂ, ಸುಖವೂ ಆಗದಿರದು. ಮುಂಜಾವಿನಲ್ಲಿ ಕೈಕಾಲುಗಳಲ್ಲಿ ಕಸುವಿಲ್ಲದಂತಾಗೋಣ, ಸ್ವಲ್ಪ ಶ್ರಮವಾದ ಕೂಡಲೆ ಮೈಗೆ ಬೆವರು ಬರೋಣ, ಎಂಥ ಕೆಲಸವಾದರೂ ಮಾಡಲಿಕ್ಕೆ ಉತ್ಸಾಹವಿಲ್ಲದಿರೋಣ, ಮೊದಲಾದ ಉಷ್ಣಭಾವನೆಯುಳ್ಳ ಮನುಷ್ಯನು, ಇಲ್ಲಿ ಬಂದು ವಾಸಮಾಡಿದಲ್ಲಿ ಅವನಿಗೆ ಉತ್ಕೃಷ್ಟವಾದ ಔಷಧವು ಸಿಕ್ಕು ಉತ್ಸಾಹಿಯೂ, ತೇಜಸ್ವಿಯೂ ಆಗುವನು. ಇಲ್ಲಿಯ ಹವೆಯ ಯೋಗದಿಂದ ರೋಗೀ ಮನುಷ್ಯನ ಪ್ರಕೃತಿಯು ಸತೇಜವಾಗಿ ಚಟುವಟಿಕೆಯುಳ್ಳದ್ದಾಗುವದರಲ್ಲಿ ಸಂದೇಹವಿಲ್ಲ.

ಮಹಾಬಳೇಶರವು ಸಹ್ಯಪರ್ವತದ ಉನ್ನತ ಶಿಖರದ ಮೇಲಿರುವದರಿಂದಲೂ, ವೃಕ್ಷವನಸ್ಪತಿಗಳ ದಟ್ಟಣೆಯಿಂದಲೂ, ಸೂರ್ಯನ ಪ್ರಖರತೆಯು ಕಡಿಮೆ ಇರುವದರಿಂದಲೂ, ಕೃಷ್ಣಾ ಮೊದಲಾದ ನದಿಗಳ ಉಗಮಸ್ಥಾನ,

ಮೇಲೆ ಮೇಲೆ ಮೋಡಗಳ ಬರುವಿಕೆ ಇವುಗಳಿಂದಲೂ, ಇಲ್ಲಿಯ ಹವೆಯ
ಚಳಿಯು ಹೆಚ್ಚಾಗಿರುತ್ತದೆ. ಬೇರೆ ಕಡೆಗಾಗುವ ಉಷ್ಣತೆಯ ವಿಕಾರಗಳು ಇ
ಆಗುವದಿಲ್ಲ. ಆದ್ದರಿಂದ ಕೃತ್ರಿಮ ತಂಪು ನೀರು, ಸೀತೋಪಚಾರ ಇವುಗ
ಆವಶ್ಯಕತೆ ಇಲ್ಲ. ಅಂದಮೇಲೆ ಕೃತ್ರಿಮ ಸೀತಜಲವಾಯುಗಳಿಂದಾಗುವ ಕೆ
ಪರಿಣಾಮವು ಇಲ್ಲಿ ಬಂದು ನಿಲ್ಲುವ ಜನರಿಗೆ ಆಗದು. ಹವೆಯು ತಂಪಾಗಿದ್ದರ
ಇದರಲ್ಲಿ ಸಿಗ್ಧತೆ ವಿಶೇಷವಿರುವ ಮೂಲಕ ಸುಖಕರವಾಗಿರುತ್ತದೆ. ದ
ಹಾಗು ಕೊಂಕಣ ಈ ಹವೆಗಳ ಸಮ್ಮೇಲನವಾಗಿ, ದೋಷವು ಹೋಗಿ ಗುಣ
ಮಾತ್ರ ಉಳಿದಿರುವದು.

ತಂಪು ಹಾಗು ವನಸ್ಪತಿಮಯ ಸ್ಥಳದ ಹವೆಯಲ್ಲಿ ವಿಕಾರವಿರುವ ಸಂಭ
ವಿರುತ್ತದೆ. ಅದು ಈ ಸ್ಥಳದಲ್ಲಿ ಸ್ವಲ್ಪವಾದರೂ ಇಲ್ಲ. ಮಳೆಯ ನೀರು ಗುಡ್ಡಗ
ಮೇಲಿಂದ ಹರಿದು ಕೆಳಗೆ ಹೋಗುವದರಿಂದ, ಹುಲ್ಲು, ಎಲೆ ಮೊದಲಾದ
ಗಳು ಕೊಳೆಯುವ ಸಂಭವವಿಲ್ಲ. ಗುಡ್ಡದ ಸುತ್ತು ಮುತ್ತಲಿನ ಹವೆಯು ಸ್ವಾಭ
ವಿಕವಾಗಿ ಉತ್ತಮವಾಗಿರುವದರಿಂದ ಮಲೇರಿಯಾ ಮೊದಲಾದ ರೋಗಗಳ
ಗುವದಿಲ್ಲ. ಬೇರೆ ಕಡೆಗೆ ಮಳೆಗಾಲ ಮುಗಿದನಂತರ ಚಳಿಜ್ವರ ಬರುವಂತೆ ಇ
ಬರುವದಿಲ್ಲ. ಮಹಾಬಳೇಶ್ವರ ಹವೆಯ ಮೂಲಕ ಮನುಷ್ಯನು ಯಾವ
ಗಲೂ ಉತ್ಸಾಹಿಯಾಗಿರುವನು. ಈ ಪ್ರದೇಶವು ಸಮುದ್ರ ಸಪಾಟಿಯಿಂ
೫೦೦೦ ಫೂಟು ಎತ್ತರವಿರುವದರಿಂದ ಹವೆಯ ಒತ್ತುವಿಕೆಯು ಕಡಿಮೆಯಾ
ಮನುಷ್ಯನಲ್ಲಿಯ ರಕ್ತಪ್ರವಾಹವು ಸ್ವಲ್ಪ ತೀವ್ರ ನಡೆಯುವದು. ಆದ್ದರಿಂ
ಯಾವಾಗಲೂ, ಉತ್ಸಾಹವೃತ್ತಿಯಿರುತ್ತದೆ. ಅದರಂತೆಯೇ ಅಶಕ್ತತೆ, ವೀರ್ಯ
ಕ್ಷಯ, ನಿರುತ್ಸಾಹ, ಉದ್ವಿಗ್ನತೆ, ವ್ಯಾಕುಲತೆ ಇತ್ಯಾದಿ ವಿಕಾರಗಳು ಆ ಸ್ಥಳದ
ತೀರ ಕಡಿಮೆಯಾಗುವವು.

ಮಹಾಬಳೇಶ್ವರದ ಹವೆಯು ಕೊಂಚಮಟ್ಟಿಗೆ ಶೋಷಕವಾಗಿರುವ
ರಿಂದ, ಆ ಸ್ಥಳದಲ್ಲಿ ಪಿತ್ತವು ಯಾವಾಗಲೂ ಜಾಗೃತವಾಗಿರುವದು. ಅದು
ರಿಂದ ಅಗ್ನಿಮಾಂದ್ಯವು ಮುರಿದು ಪಚನಾದಿ ವ್ಯಾಪಾರಗಳು ಭರದಿಂದ ನ
ಯುವವು. ಅನ್ನದ ರಸವು ಯಥಾಪ್ರಕಾರವಾಗಿ ರಕ್ತಶುದ್ಧಿ ಹಾಗು ಸಾಮರ್ಥ
ವೃದ್ಧಿ ಮೆಲ್ಲಮೆಲ್ಲನೆ ಆಗಹತ್ತುವವು. ಪಿತ್ತಾಂಶವು ಹೆಚ್ಚಿರುವ ಮೂಲಕ ಮಹ
ಬಳೇಶ್ವರದ ಸಾರಕ ಔಷಧಪ್ರಿತ್ಯರ್ಥ ಡಾಕ್ಟರ ಜನರ ಜಿಪ್ಸು (ಕಿಸೆ) ಗಳನ

ಬೆಚ್ಚಗೆ ಮಾಡುವ ಅವಶ್ಯಕತೆ ಬೀಳುವದಿಲ್ಲ. ಪಿತ್ತ ಪ್ರಕೃತಿಯ ಮನುಷ್ಯನಿಗೆ ಮಾತ್ರ ಇಲ್ಲಿಯ ಹವೆಯು ಕೊಂಚಮಟ್ಟಿಗೆ ಬಾಧಕವಾಗಿರುವದು. ಶರೀರದೊಳಗಿನ ನಿರೋಗಿತನವನ್ನು ಸ್ಥಿರವಿಡುವದಾಗಿ ಈ ಹವೆಯ ಉಪಯೋಗವು ಚನ್ನಾಗಿ ಆಗುತ್ತದೆ. ಇದಲ್ಲದೆ ಗಂಡಮಾಲೆ, ಹೃದಯವಿಕಾರ, ಮೇಲಿಂದಮೇಲೆ ಬರುವ ಜ್ವರ ಇವೆಲ್ಲವುಗಳು ಇಲ್ಲದಂತಾಗುತ್ತವೆ.

ಈ ಹವೆಯು ಗಂಡಸರಿಗಿಂತ ಹೆಂಗಸರಿಗೆ, ಹೆಂಗಸರಿಗಿಂತ ಹುಡುಗರಿಗೆ, ಹೆಚ್ಚು ಆರೋಗ್ಯಕರವಾಗಿರುವದೆಂಬ ಮಾತು ಅನುಭವಸಿದ್ಧವಾಗಿರುತ್ತದೆ. ಈ ಕಾರಣದಿಂದಲೇ ಇಂಗ್ಲಿಷರಿಗೆ ಒಂದುವೇಳೆ ಬೇಸಿಗೆಯಲ್ಲಿ ಮಹಾಬಳೇಶ್ವರಕ್ಕೆ ಬರಲು ಅನುಕೂಲವಾಗದಿದ್ದಲ್ಲಿ ತಮ್ಮ ಹುಡುಗರನ್ನಾದರೂ ಕಳಿಸುವರು. ಹುಡುಗರಿಗೆ ಚಿಕ್ಕಂದಿನಲ್ಲಿ ಒದಗುವ ಬೇನೆಗಳು ಇಲ್ಲಿಯ ಹವೆಯಲ್ಲಿ ವಾಸಮಾಡುವ ಮೂಲಕ, ಬರುವದಿಲ್ಲ. ಅಲ್ಲದೆ ಹಲ್ಲುಬರುವಾಗ ವಿಶೇಷ ಕ್ಲೇಶವಾಗುವದಿಲ್ಲ. ಒಟ್ಟಿನ ಮೇಲೆ ಬಾಲಕರ ಶರೀರವು ಸದೃಢ ಹಾಗು ಪುಷ್ಟವಾಗಿ ನಿರೋಗಿಯಾಗುವದರಲ್ಲಿ ಸಂದೇಹವಿಲ್ಲ.

ಮಹಾಬಳೇಶ್ವರದಲ್ಲಿ ಪರ್ಜನ್ಯವು ವಿಶೇಷವಾಗುವ ಮೂಲಕ ಹವೆಯಲ್ಲಿ ದೋಷವಿರುವದು. ಅತಿಸಾರ, ಸಂಧಿವಾತ, ಧನುರ್ವಾತ, ಗುಲ್ಮ, ಪ್ಲೀಹ, ಯಕೃತ ಮೊದಲಾದ ರೋಗವುಳ್ಳ ಮನುಷ್ಯನಿಗೆ ಈ ಹವೆಯು ತೀರ ಕೆಡಕು. ಕ್ಷಯ, ರಕ್ತದೋಷ, ಈ ವಿಕಾರಗಳಿಗೆ ಮಾತ್ರ ಈ ಹವೆಯು ಉತ್ತಮವಾಗಿರುವದೆಂಬದು ತಜ್ಞ ಜನರ ಅನುಭವದ ಮಾತಾಗಿದೆ. ಇಲ್ಲಿ ಒಂದೆರಡು ರಾತ್ರಿ ಕಳೆದ ಮೇಲೆ, ಉಷ್ಣತೆಯಿಂದಾದ ತ್ರಾಸದಾಯಕ ವಿದ್ರೂಪತೆ ಇಲ್ಲದಂತಾಗುವದು. ಮಧ್ಯಾಹ್ನದ ಊಟವಾದ ಕೂಡಲೆ ನಿದ್ರೆಯು ಹೆಚ್ಚಾಗಿ ಬರಹತ್ತಿದರೂ, ಆ ವೇಳೆಗೆ ನಿದ್ರೆಮಾಡದಿರುವದೇ ಈ ಹವೆಗೆ ಇಷ್ಟವಾಗಿರುವದು. ಒಂದೆರಡು ತಿಂಗಳು ಇದ್ದು ನಾಲ್ಕೈದು ಸೇರು ಮಾಂಸವನ್ನು ಬೆಳಿಸಿಕೊಂಡು ಸಶಕ್ತರಾಗಬೇಕಾದಲ್ಲಿ ವ್ಯಾಯಾಮ, ಉತ್ತಮ ಆಹಾರ, ವಿಶ್ರಾಂತಿಗಳು ಅವಶ್ಯವಾಗಿ ಬೇಕು. ವರ್ಷದಲ್ಲಿಯ ಹನ್ನೊಂದು ತಿಂಗಳು ಕಷ್ಟದಲ್ಲಿ ಕಳೆದು ಹನ್ನೆರಡನೆಯ ತಿಂಗಳನ್ನು ಐಷಆರಾಮಿಯಲ್ಲಿ ಕಳೆಯಲಿಕ್ಕೆ ಮಹಾಬಳೇಶ್ವರವು ಯೋಗ್ಯವಾದ ಸ್ಥಳವಾಗಿರುವದು.

ನೀರು:—ಮನುಷ್ಯನ ಆರೋಗ್ಯತೆಗೆ ಸ್ವಚ್ಛವಾದ ಹವೆಯೂ, ನೀರ
ಅವಶ್ಯವಾಗಿಬೇಕು. ಇವುಗಳಲ್ಲಿ ಒಂದಾದ ಸ್ವಚ್ಛವಾದ ಹವೆಯು ವಿಪುಲವಾ
ಮಹಾಬಳೇಶ್ವರದಲ್ಲಿ ದೊರೆಯುತ್ತದೆ. ಇಲ್ಲಿಯ ನೀರು ಸ್ವಚ್ಛವಾಗಿರುವದಲ್ಲ
ಸೀ, ತಂಪು, ಲೋಹಮಿಶ್ರಿತವಾಗಿರುವ ಮೂಲಕ ಆರೋಗ್ಯದೃಷ್ಟಿಯಿಂ
ಅತ್ಯುತ್ತಮವಾಗಿರುತ್ತವೆ. ಮಾಲಕಮ ಪೇಠೆಯಲ್ಲಿ ನೀರು ೪೦ ರಿಂದ ೫೦ ಫ
ಟಿನ ಕೆಳಗೆ ಹತ್ತುವದರಿಂದ ಅಷ್ಟು ಆಳ ವಾಪಿಗಳನ್ನು ಅಗಿದು ಕಟ್ಟಿಸಬೇಕಾದ
ಬಹಳೇ ವೆಚ್ಚವಾಗುವದರಿಂದ ಇಲ್ಲಿಯ ಯಾವತ್ತು ಬಂಗಲೆ ಹಾಗು ಮನೆಗಳ
ಬಾವಿಗಳಿಲ್ಲ. ಮಾಲಕಮ ಪೇಠೆಯಿಂದ ಒಂದು ಮೈಲಿನ ಮೇಲೆ ಪುಣೆಯಿಂ
ಬರುವ ಮಾರ್ಗದ ದಂಡೆಗೆ ಒಂದು ಸರೋವರವದೆ. ಅದಕ್ಕೆ ಇಲ್ಲಿಯ ಜನ
ವೇಣ್ಣಾ ಕೆರೆ ಎಂದೆನ್ನುವರು. ಅದರ ಆಳವು ಸುಮಾರು ೧೫ ರಿಂದ ೨೦ ಫೂ
ಇರುವದು. ಕೆರೆಯ ಮೇಲ್ಬದಿಯಲ್ಲಿ ವೇಣ್ಣಾನದಿಯ ಉಗಮವುಂಟು. ಮ
ಸಾರ್ವಜನಿಕ “ ಬಿಶೆಪ್, ಎಲ್ ಫಿನ್‌ಸ್ಟನ ” ಎಂಬ ಹೆಸರಿನ ಕೆರೆಗಳಿದ್ದು ಅ
ಗಳ ವ್ಯವಸ್ಥೆಯನ್ನು ಮ್ಯುನಸಿಪಾಲ್ಟಿಯವರು ಮಾಡುತ್ತಾರೆ. ಮೇಲ್ಕಾಣಿಸಿ
ಜಲಾಶಯಗಳ ಹೊರ್ತು ಎಷ್ಟೋ ಶಲೆ (ಝರಿ)ಗಳಿದ್ದು ಅವುಗಳೊಳಗಿ
ನೀರನ್ನಾದರೂ ಜನರು ಉಪಯೋಗ ಮಾಡಿಕೊಳ್ಳುತ್ತಿರುತ್ತಾರೆ. ಅವುಗಳ ಮಾ
ತಿಯನ್ನು ಇದರಡಿಯಲ್ಲಿ ಬರುಯುತ್ತೇವೆ.

ವಾಹುಂಜ:—ಈ ಝರಿಯು ಮುಂಬಯಿ ಹಾಗೂ ಕರ್ನಾಕ
ಯಿಂಟಗಳ ಮಧ್ಯದಲ್ಲಿರುವದರಿಂದ ಅದರ ಅತ್ಯುತ್ತಮವಾದ ನೀರಿನ ಉ
ಯೋಗವನ್ನು ಗವ್ಹರ್ನಮೆಂಟಹೌಸಿನವರು ಮಾಡಿಕೊಳ್ಳುತ್ತಾರೆ.

ಥಬಥಬಿ:—ಈ ಝರಿಯು ಸಿಡ್ನಿಪಾಯಿಂಟ ಹಾಗೂ ಗ್ಲೇಂಗೇರಿ ಬ
ಲೆಯ ನಡುವೆ ಇರುತ್ತದೆ.

ಸಿಪಾಯಿನೀರು:—ಈ ಝರಿಯು ರೋಜ ಕಾಟೇಜ ಬಂಗಲೆ
ಹೊರಬದಿಯ ಇಳುಕಲಿನಲ್ಲಿದೆ.

ಗವ್ಹಾರ್ಝರಿ:—ಯುರೋಪಿಯನ್ನರ ಸ್ಮಶಾನಭೂಮಿಯ ಪಶ್ಚಿಮ
ರುತ್ತದೆ.

ಮುಂಡಲಿಕ್ ಝರಿ:—ಸನೀಸಾಯಿಡ ಬಂಗಲೆಯ ಕಂಪಾಂಡಿನಲ್ಲಿರುವದು.

ಊಡಲಡ ಮತ್ತು ನ್ಯೂಜಂಟ:—ಈ ಝರಿಗಳು ಇವೇ ಹೆಸರಿನ ಕಂಪಾಂಡಿನಲ್ಲಿರುವವು.

ಕಣಸುಸ್ ಸ್ಪ್ರಿಂಗ:—ರೇಡಕ್ಯಾಸಲ್ ಬಂಗಲೆಯ ಪಶ್ಚಿಮಕ್ಕಿರುವದು.

ಫಾವುಂಟನಸ್ಪ್ರಿಂಗ:—ಇದಕ್ಕೆ ಇಲ್ಲಿಯ ಜನರು "ತಾಮನದಿ" ಎನ್ನುತ್ತಾರೆ. ಇದು ಸಾಸೂನಪಾಯಿಂಟಕ್ಕೆ ಹೋಗುವ ಮಾರ್ಗದ ಮೇಲೆ ಫಾವುಂಟನ್ ಹಟೇಲದ ಸಮೀಪಕ್ಕಿರುತ್ತದೆ.

ಸ್ಮಾರರಝರಿ:—ಇದಕ್ಕೆ ದೊಡ್ಡ ನಳವೆಂದೆನ್ನುತ್ತಾರೆ. ಇಲ್ಲಿಂದ ಊರಲ್ಲಿ ನೀರು ತರಬೇಕೆಂದು ಮಾಡಿದ್ದರಷ್ಟೇ! ಆದರೆ ಆ ಕಾರ್ಯವು ಯಾವದೇ ಒಂದು ಕಾರಣದಿಂದ ಹಾಗೇ ಉಳಿಯಿತು. ಈ ದೊಡ್ಡ ಝರಿಯನ್ನು ಉತ್ತಮ ರೀತಿಯಿಂದ ಕಟ್ಟಿರುತ್ತಾರೆ. ಪೂರ್ವಭಾಗದ ಕಡೆಗೆ "ನೇಲ್ಸನಲಾಜ ಹಾಗೂ ಗ್ಲೈನ ಮೋರ" ಬಂಗಲೆಗಳ ಸಮೀಪದಲ್ಲಿರುತ್ತದೆ.

ಬಾರ್ಜೆಸ್ಟರ ಸ್ಪ್ರಿಂಗ:—ಮಹಾಬಳೇಶ್ವರದ ಪಶ್ಚಿಮಕ್ಕೆ ಬಾರ್ಜೆಸ್ಟರವೆಂಬ ಹೆಸರಿನ ಬಂಗಲೆಯ ಹಿಂಭಾಗದಲ್ಲಿದೆ.

ಟಾಯಗರ ಪಾಥಸ್ಪ್ರಿಂಗ:—ದಕ್ಷಿಣಕ್ಕೆ ಟಾಯಗರ ಪಾಥಕ್ಕೆ ಹೋಗುವಾಗ ಮಾರ್ಗದಲ್ಲಿ ಹತ್ತುವದು.

ರಾಂಜಣವಾಡಿಸ್ಪ್ರಿಂಗ:—ಪೂರ್ವಕ್ಕೆ ಸಾಜನಹಿಲ್ಲದ ಕೆಳಬದಿಯಲ್ಲಿದೆ.

ಮುರಾರ್ಜಿ ಕ್ಯಾಸಲ್ ಸ್ಪ್ರಿಂಗ:—ಪೂರ್ವಕ್ಕೆ ಸಾಸೂನಪಾಯಿಂಟಕ್ಕೆ ಹೋಗುವ ಮಾರ್ಗದ ಎಡಬದಿಯಲ್ಲಿರುವ, ಮುರಾರ್ಜಿ ಕ್ಯಾಸಲ್ ಬಂಗಲೆಯ ಕಂಪಾಂಡಿನಲ್ಲಿರುತ್ತದೆ. ಇಲ್ಲಿಯ ನೀರು ವಿಶೇಷ ಲೋಹಮಿಶ್ರಿತವಾಗಿರುವ ಮೂಲಕ ರೋಗೀ ಜನರಿಗೆ ಬಹಳೇ ಹಿತಕರವೆಂಬ ಬಗ್ಗೆ ಆಖ್ಯಾಯಿಕೆಯುಂಟು.

ಟೇಲರಸ್ಪ್ರಿಂಗ:—ನಿರಾಲಾಜ, ಮೌಂಟರಗ್ಲಸ ಈ ಬಂಗಲೆಗಳ ಹತ್ತರದಲ್ಲಿದೆ.

ಈ ಯಾವತ್ತು ಝರಿಗಳ ನೀರು ಬಹಳೇ ಸೀ, ಸತೇಜ, ನಿರ್ಮಲವಿದ್ದು ಕ್ಷೇತ್ರ ಮಹಾಬಳೇಶ್ವರದ ಕೃಷ್ಣೋದಕದಂತಿರುತ್ತವೆ. ಆ ನೀರಿನ ಸೀತನದ

ಬಗ್ಗೆ ವರ್ಣನ ಮಾಡಲಿಕ್ಕಾಗದೆಂದರೂ ಸಲ್ಲುವದು. ಮಹಾಬಳೇಶ್ವರದಲ್ಲಿ
ಕೃಷ್ಣಾನದಿಯ ನೀರಿನ ರುಚಿ ಹಾಗು ಇಲ್ಲಿಂದ ೨೦ ಮೈಲುಗಳ ಮೇಲಿ
ವಾಯಿಗ್ರಾಮದಲ್ಲಿಯ ಕೃಷ್ಣಾನದಿಯ ನೀರಿನ ರುಚಿಯಲ್ಲಿ ಭೂಮ್ಯಾಕಾ
ಳಷ್ಟು ಅಂತರವಿದ್ದದ್ದು ಕಂಡುಬರುತ್ತದೆ. ಆ ಹೆಚ್ಚು ಕಡಿಮೆಯನ್ನು ತಿಳಕೊ
ಬೇಕಾದಲ್ಲಿ ಆಯಾ ನೀರಿನ ಪ್ರಾಶನ ಮಾಡಲೇಬೇಕಾಗುವದು. ಕೇವಲ ಶ
ಳಿಂದ ವರ್ಣಿಸುವದೆಂದರೆ ವ್ಯರ್ಥ. ಮಹಾಬಳೇಶ್ವರದಲ್ಲಿ ಸಂಚರಿಸುವ ಮನು
ನಿಗೆ ನೀರಡಿಕೆಯು ತೀರ ಕಡಿಮೆಯಾಗುವದು. ಇಲ್ಲಿಯ ನೀರು ವಿಲಕ್ಷಣ ತ
ರುವ ಮೂಲಕ ಸ್ವಲ್ಪ ನೀರಿನಿಂದಲೇ ಸಮಾಧಾನವಾಗುವದು. ಇದೊಂ
ಇಲ್ಲಿಯ ಮಹತ್ವದ ಗುಣವೇ ಸರಿ. ನೀರಿನಲ್ಲಿ ಲೋಹವು ವಿಶೇಷ ಮಿಶ್ರವಾ
ರುವ-ಮೂಲಕ ಆರೋಗ್ಯದೃಷ್ಟಿಯಿಂದ ಮೊದಲನೇ ನಂಬರು ಪಡೆದಿರು
ದೆಂಬ ಮಾತು ಲಕ್ಷದಲ್ಲಿಡುವಂತಿದೆ.

ಗಿಡಗಂಟಿ:—ಮಹಾಬಳೇಶ್ವರದ ಅಡವಿಯಲ್ಲಿ ನಾನಾಪ್ರಕಾರದ ಗಿ
ಗಳಿದ್ದು ಮಾವು, ಹುಣಸೆ, ಆಲ, ಬೆಳವಲ, ಅರಳೆ, ಬೇವು, ಜಾಲಿ ಮೊದಲ
ಗಿಡಗಳು ಮಾತ್ರ ಕಂಡುಬರುವದಿಲ್ಲ. ನೋಡಿದತ್ತೆಲ್ಲ ನೀರಲ ಗಿಡಗಳೇ ತು
ತುಳುಕುವವು. ಇವುಗಳ ಆಕಾರವು ಕಿರಿದಾಗಿದ್ದು ಎಲೆ ಹಾಗೂ ಕಾಯಿಗ
ಸಣ್ಣವಾಗಿರುವವು. ಇವುಗಳ ಫಲಗಳು ಆಡುಗಳ ಹಿಕ್ಕೆಯ ಆಕಾರದಂತಿ
ಬೇಸಿಗೆಯಲ್ಲಿ ಎಲ್ಲ ಕಡೆಗೂ ಪಸರಿಸಿರುತ್ತವೆ. ನಮ್ಮಲ್ಲಿಯಂಥ ನೀರಲ ಗಿಡಗ
ಕೆಲಕೆಲವು ಕಡೆಗೆ ಒಂದೆರಡು ಮಾತ್ರ ಇರುವವು. “ ಪಿಸಾ ” ಎಂಬ ಗಿಡ
ಎಲೆಗಳಿಂದ ವೀರ್ಯವೃದ್ಧಿ, ವೀರ್ಯಸ್ತಂಭನವಾಗುವದೆಂಬ ಬಗ್ಗೆ ಇಲ್ಲಿ
ಜನರ ಅಭಿಪ್ರಾಯವುಂಟು. ಈ ಉತ್ತಮವಾದ ಎಲೆಗಳ ಸೇವನದಿಂದ ಶ
ರವು ಸದೃಢ ಹಾಗು ಕಾಂತಿಮಯವಾಗುತ್ತದೆ. ಇಲ್ಲಿರುವ ಅಂಜನ ವೃ
ಕಟ್ಟಿಗೆಯಿಂದ ಅಂದವಾದ ಕೈಗಾರಿಕೆಯ ಸಾಮಾನುಗಳನ್ನು ತಯಾರಿಸುವ
ಈ ಕಟ್ಟಿಗೆಯನ್ನು ನೀರಿನಲ್ಲಿ ಬೇಕಾದಷ್ಟು ದಿವಸ ಒಗೆದರೂ ಕೊಳೆಯುವ ಅ
ಕೆಯಿಲ್ಲ. ಭೋಮಾ, ವಾಳುಂಜ, ಕಾರವಿ, ಡಿಂಗಳಾ, ರಾಮಾಠಾ ಎಂಬ
ರಿನ ಗಿಡಗಳಲ್ಲದೆ ಚಿಮುಟ, ಕುಸರ ಎಂಬ ಹೆಸರಿನ ವಲ್ಲಿಗಳೂ ಪ್ರಸಿದ್ಧ
ತ್ತವೆ. ಅಡವೀ ಬಾಳೇ ಗಿಡಗಳು ಇಲ್ಲಿಂದ ಎರಡು ಮೈಲು ಅಂತರದ ವ
ವಿಶೇಷವಾಗಿರುತ್ತವೆ. ಮಳೆಯಾದ ಕೂಡಲೆ ಅರಶಿಣ ಎಲೆಗಳಂತಿರುವ ಎ

ಳುಳ್ಳ ಗಿಡಗಳು ಉದ್ಭವಿಸುವವು. ಮಳೆಗಾಲದಲ್ಲಿ ಇವುಗಳ ಎಲೆಗಳನ್ನು ಹಕ್ಕೆಗಳಲ್ಲಿ ಹಾಸುವರು. ಈ ಗಿಡಗಳ ಶಾಖೆಗಳಿಂದ ಆರಾರೋಟವನ್ನು ತೆಗೆಯುತ್ತಾರೆ. ಗುಡ್ಡಗಳ ಕೆಳಬದಿಯಲ್ಲಿ ಬಿದರು ಮೆಳೆಗಳು ಬಹಳ ಇರುತ್ತವೆ. ಇಲ್ಲಿಯ ಉತ್ತಮೋತ್ತಮ ಕಟ್ಟಿಗೆಗಳನ್ನೂ, ಗೋಳಾ, ಚಿಮುಟ, ಪಾಂಡರಿ, ಮೇಡಸಿಂಗಿ ಮೊದಲಾದ ಕಟ್ಟಿಗೆಗಳನ್ನೂ ಧಾವಡ ಜನರು ಪೇಟೆಯಲ್ಲಿ ತಂದು ಮಾರುವರು. ನೇಚೇ ಎಂಬ ಹೆಸರಿನ ೨೩ ಪ್ರಕಾರದ ಗಿಡಗಳನ್ನು ಅಡವಿಯಿಂದ ಇಲ್ಲಿಯ ಜನರು ತಂದು ಕಮಾನು ಮೊದಲಾದ ಆಕೃತಿಗಳನ್ನು ಮಾಡುವದರಲ್ಲಿ ಉಪಯೋಗಿಸುತ್ತಿರುತ್ತಾರೆ. ಮಳೆಯು ವಿಶೇಷವಾಗುವ ಮೂಲಕ ನೋಡಿದತ್ತೆಲ್ಲ ಹಾಂಸೆಯು ಪಸರಿಸಿರುತ್ತದೆ. ಪರದೇಶದಿಂದ ಓಕ, ಗ್ರೆವ್ಹಿಲಿಯಾ, ಕ್ಯಾಸರಿನಾ, ಯುಕ್ಯಾಲಿಪ್ಟಸ್ ಮೊದಲಾದ ಗಿಡಗಳನ್ನು ತಂದು ಇಲ್ಲಿ ಬೆಳೆಸಿರುತ್ತಾರೆ. ವಿಲಾಯತಿಯ ಹಣ್ಣಿನ ಗಿಡಗಳಲ್ಲಿಯ ರಾಜಬೇರಿ, ಸ್ಟ್ರಾಬೇರಿ, ಗುಜಬೇರಿ ಗಿಡಗಳನ್ನು ಹಚ್ಚಿ ಅವುಗಳ ಫಲಗಳ ಮಾರಾಟದ ಹಣದಿಂದಲೇ ತಮ್ಮ ಉದರನಿರ್ವಾಹದ ಖರ್ಚಿನ ಬಹಳ ಭಾಗವನ್ನು ಸಾಗಿಸುತ್ತಿರುವರು. ಮಹಾಬಳೇಶ್ವರ ಹಾಗೂ ಅದರ ಸುತ್ತಲಿನ ಪ್ರದೇಶದಲ್ಲಿ ಮಹತ್ವದ ಔಷಧೀ ವನಸ್ಪತಿಗಳು ಅಲ್ಲಲ್ಲಿಗೆ ದೊರೆಯುತ್ತವೆ. ಈ ವನಸ್ಪತಿಗಳ ಜ್ಞಾನವು ನಮ್ಮ ಈಗಿನ ಜನರಿಗೆ ಇಲ್ಲದ್ದರಿಂದ ಅವುಗಳ ಉಪಯೋಗವು ಅಷ್ಟೇನೂ ಆಗುವದಿಲ್ಲ. ಇದೊಂದು ದುರ್ದೈವದ ಮಾತೇ ಸರಿ !

ಬೆಳೆಗಳು:—ಮಹಾಬಳೇಶ್ವರದ ಬೈಲು ಹಾಗು ಇಳುಕಲ ಪ್ರದೇಶಗಳಲ್ಲಿ ಮುಖ್ಯವಾಗಿ ಗೋದಿ, ಜವೆಗೋದಿ, ರಾಗಿ, ವರೆ, ಸಾವಿ, ಬರಗು, ನವಣೆ ಮೊದಲಾದವುಗಳು ಬೆಳೆಯುತ್ತವೆ. ಬೈಲುಪ್ರದೇಶದ ಗೋದಿ ಜವೆಗೋದಿಗಳು ಮಳೆಗಾಲ ಮುಗಿದನಂತರ ಬರುವವು. ಇಳಿಜಾರು ಪ್ರದೇಶದ ರಾಗಿ, ಸಾವಿ ಮೊದಲಾದ ಬೆಳೆಗಳನ್ನು ಬಹು ಪ್ರಯಾಸದಿಂದ ತೆಗೆದುಕೊಳ್ಳುತ್ತಾರೆ. ನೀರಿನ ಪೂರೈಕೆ ಹೆಚ್ಚಿದ್ದ ಸ್ಥಳಗಳಲ್ಲಿ ಮಾತ್ರ ಭತ್ತದ ಗದ್ದೆಗಳು ದೃಷ್ಟಿಗೆ ಬೀಳುತ್ತವೆ. ಕೆಲಕೆಲವು ಕಡೆಯಲ್ಲಿ ಕಬ್ಬು ಬೆಳೆಯುತ್ತದೆ. ಬಟಾಟಿ, ಬೀಟ, ವಿಲಾಯತಿಯ ಬಟಗಡ್ಲೆ ಮೊದಲಾದವುಗಳು ಬೆಳೆಯುತ್ತವೆ. ಇಲ್ಲಿಯ ಬಟಗಡ್ಲೆಗಿರುವಷ್ಟು ರುಚಿಯು ಬೇರೆ ಯಾವ ಭಾಗದ ಬಟಗಡ್ಲೆಗಿರುವದಿಲ್ಲ. ವಿಲಾಯತಿಯಲ್ಲಿ ಬೆಳೆಯುವ ಸ್ಟ್ರಾಬೇರಿ, ರೋಜಬೇರಿ, ಗುಜಬೇರಿ, ಕೋಬೀ, ಟರ್ನಿಪ್, ನವಲಕೋಲ,

ಫ್ರೆಂಚಬೀನ ಮೊದಲಾದವುಗಳು ಈ ಸ್ಥಳದಲ್ಲಿ ಉತ್ತಮ ರೀತಿಯಿಂದ ಬೆಳೆ ತ್ತವೆ. ಈ ಭಾಗದಲ್ಲಿ ಕೆಂಪು ಹಾಗು ಹಿಮಾಲಯದಲ್ಲಿ ಬೆಳೆಯುವ ಜಾತಿ ಬಟಾಟೆಗಳು ದೊರೆಯುತ್ತವೆ. ಅತ್ಯುತ್ತಮವಾಗಿ ಪೋಷಿಸಿದ ಒಂದು ಬ ಟೆಯ ಭಾರವು ಸೇರು (೮೦ ಭಾರ) ಆಗುತ್ತದೆ. ಮಹಾಬಳೇಶ್ವರವು ಬ ಟೆಯ ಬಗ್ಗೆ ಪ್ರಸಿದ್ಧಿಯನ್ನು ಪಡೆದಿರುತ್ತದೆ.

ಚೀನೀ ಶೆರೆಯಾಳು:—ಚೀನೀ ಹಾಗು ಮಲಯಿ ಶೆರೆಯಾಳುಗಳ ಪುಣೆ ಮತ್ತು ಠಾಣೆ ಶೆರೆಮನೆಗಳಲ್ಲಿ ಇಡುತ್ತಿದ್ದರು. ಆದರೆ ಅವರಿಗೆ ಅಲ್ಲಿ ಹವೆಯು ತಡೆಯದ್ದರಿಂದ ಮಹಾಬಳೇಶ್ವರವು ಹವೆಯ ದೃಷ್ಟಿಯಿಂದ ಉತ್ತ ವಾಗಿರುವದೆಂದು ಗೊತ್ತಾದ ಮೂಲಕ ಅವರನ್ನು ಇಲ್ಲಿ ತಂದು ಇಟ್ಟರು. ಇ ದೆಸೆಯಿಂದ ಕಟ್ಟಿಸಿದ ಶೆರೆಮನೆಯು ೧೨೦ ಜನರಿಗೆ ಮಾತ್ರ ಸಾಲುವಷ್ಟಿ ಇದೇ ಸ್ಥಳದಲ್ಲಿ ಈಗ ಇಂಜಿನಿಯರ ಖಾತೆಯವರ ಬಂಗಲೆಯು ಕಂಗೊಳಿಸ ರುವದು. ಕೊಲೆಸುಲಿಗೆಗಳನ್ನು ಮಾಡಿದ ಜನರನ್ನು ಮಾತ್ರ ಇಲ್ಲಿ ತಂದು ಇ ತ್ತಿದ್ದರಷ್ಟೆ. ಅವರಿಗೆ ಪ್ರತಿದಿವಸ ಒಂದೂವರೆ ಆಣೆ ಭತ್ತೆ ದೊರೆಯುತ್ತಿ ಆ ಜನರು ತಮಗೆ ದೊರೆತ ವೇಳೆಯಲ್ಲಿ ಬಟಾಟೆ, ಇಂಗ್ರಜಿ ಪಲ್ಲೆಗಳನ್ನು ಬ ಅವುಗಳ ಮಾರಾಟದಿಂದೊರೆದ ಹಣವನ್ನು ತಾವೇ ತೆಗೆದುಕೊಳುತ್ತಿದ್ದ ಆ ಜನರ ಕಡೆಯಿಂದ ಸರಕಾರದವರು ಮಹಾಬಳೇಶ್ವರದಲ್ಲಿಯ ಮಾರ್ಗ ಳನ್ನು ತಯಾರಿಸಿದರು. ಲಷ್ಕರೀಖಾತೆಯ ಜನರ ಸಲುವಾಗಿ ವನಸ್ಪತಿಗಳ ಆರಾರೋಟವನ್ನು ತಯಾರಿಸುತ್ತಿದ್ದರು. ಅವರು ವರ್ಷದಲ್ಲಿ ಸರಾಸರಿ ೩೫೦ ಪೌಂಡು ಆರಾರೋಟವನ್ನು ತೆಗೆಯುತ್ತಿದ್ದರಂತೆ. ಅವರು ಇಲ್ಲಿಯ ತೋಟಗ ಸುಧಾರಣೆ ಮಾಡಿ ಬಟಾಟೆ ಮೊದಲಾದವುಗಳ ಬೆಳೆಗಳನ್ನು ಉತ್ತಮ ಯಿಂದ ತಯಾರಿಸುವ ಶ್ರೇಯಸ್ಸನ್ನು ತೆಗೆದುಕೊಂಡರು. ಹಾಗು ಇಲ್ಲಿಯ ರಿಗೆ ಬೆತ್ತಿನ ಹೆಣಿಕೆಯ ಬುಟ್ಟಿ, ಕುರ್ಚಿ ಮೊದಲಾದವುಗಳನ್ನು ಮಾಡಲು ಕ ದರು. ವೇಣ್ಣಾಸರೋವರದಿಂದ ಹೊರಡುವ ನೀರಿನ ಪ್ರವಾಹದ ದಂಡೆಗ ಚೀನೀ ಜನರ ತೋಟಗಳಿರುವವು. ಇವುಗಳಲ್ಲಿ ಈಗ ಧಾವಡ, ಒಕ್ಕಲಿಗರು ಗಳನ್ನು ತೆಗೆದುಕೊಳ್ಳುತ್ತಿರುತ್ತಾರೆ.

ಜೇನು:—ಮಹಾಬಳೇಶ್ವರದ ಜೇನತುಪ್ಪವು ಔಷಧೀಯಾಗಿದ್ದು ತನ್ನ ವಿಶಿಷ್ಟಗುಣದ ಬಗ್ಗೆ ಪ್ರಸಿದ್ಧಿಯನ್ನು ಪಡೆದಿರುವದು. ಜೇನ್ನೊಣ

ದೊಡ್ಡವಿದ್ದು ಜೇನುಹುಟ್ಟುಗಳಾದರೂ ನಮ್ಮಲ್ಲಿಗಿಂತ ಎಷ್ಟೋಪಾಲು ದೊಡ್ಡವಿ
ರುತ್ತವೆ. ಇಲ್ಲಿಯ ನೊಣಗಳಲ್ಲಿ ಆರು ಪ್ರಕಾರಗಳಿದ್ದು ಅವು ಬೇರೆ ಬೇರೆ ಋತು
ಗಳಲ್ಲಿ ತತ್ತಿಗಳನ್ನಿಡುವವು. ಅವುಗಳ ಪೋಷಣಕ್ಕಾಗಿ ಸಮೀಪದಲ್ಲಿಯ ಹೂಗ
ಳೊಳಗಿನ ಮಕರಂದವನ್ನು ಕೂಡಹಾಕುತ್ತವೆ. ಆ ಮೂಲಕ ಇಲ್ಲಿ ಯಾವಾ
ಗಲೂ ಜೇನತುಪ್ಪ ದೊರೆಯುತ್ತದೆ. ಜೇನುಹುಟ್ಟುಗಳು ಬಹಳ ಬಿಕ್ಕಟ್ಟಿನ
ಸ್ಥಳಗಳಲ್ಲಿರುವ ಮೂಲಕ ಅವುಗಳನ್ನು ಬಿಡಿಸುವದೆಂದರೆ ಯಮಸದನದ ಮಾರ್ಗ
ವನ್ನು ಹಿಡಿದಂತೆಯೇ ಸರಿ! ಹೀಗಿದ್ದರೂ ಕೋಳೀ ಜನರು ಹುಟ್ಟುಗಳನ್ನು
ಮಹತ್ಪ್ರಯಾಸದಿಂದ ತಂದು ಅದರೊಳಗಿನ ತುಪ್ಪವನ್ನು ತೆಗೆಯುವರಲ್ಲದೆ ಅದರ
ಜೊತ್ತೆಯಿಂದ ಮೇಣವನ್ನು ತಯಾರಿಸುವರು. ಒಂದೊಂದು ಹುಟ್ಟಿನಲ್ಲಿ ಮೂರು
ನಾಲ್ಕು ಕೊಡ ತುಪ್ಪವು ಹೊರಡುವದು. ಇದರ ವರ್ಣವು ಶ್ವೇತ, ಹಾಗು
ಕೆಂಪು ಇರುವದು. ಆಶ್ವಿನ ಕಾರ್ತಿಕ ಮಾಸಗಳಲ್ಲಿ ದೊರೆಯುವ ಜೇನುತುಪ್ಪಿ
ನಲ್ಲಿ ಉಷ್ಣತೆಯು ಹೆಚ್ಚಾಗಿರುವ ಮೂಲಕ ಔಷಧಕ್ಕೆ ಬಹಳೇ ಉಪಯೋಗ
ಬೀಳುವದು. ಮಾರ್ಗಶೀರ್ಷ, ಪೌಷ್ಯಮಾಸಗಳಲ್ಲಿ ದೊರೆಯುವ ಶ್ವೇತವರ್ಣದ
ತುಪ್ಪವು ಔಷಧಕ್ಕೆ ಅಷ್ಟೊಂದು ಉಪಯೋಗವಾಗುವದಿಲ್ಲ. ಜೇನತುಪ್ಪದ
ವರ್ಷದ ಉತ್ಪನ್ನವು ಸರಾಸರಿ ೧೫೦೦–೨೦೦೦ ರೂಪಾಯಿಗಳು. ಜೇನತುಪ್ಪಿನ
ಬಗ್ಗೆ ಸಾಂಪ್ರತದಲ್ಲಿ ‘ಲಾಯಸನ್ಸ’ವಾದ ಮೂಲಕ ಕೋಳೀ ಜನರು ಸಂಪು
ಮಾಡಿ ತುಪ್ಪ ತೆಗೆಯುವದನ್ನು ಬಿಟ್ಟಿರುವರು.

ವ್ಯವಸ್ಥೆ:—ಕ್ರಿಸ್ತ ದೇವಾಲಯದ ಉತ್ತರಕ್ಕೆ ಸರಕಾರದವರಿಂದ ‘ಫ್ರಿ
ಅರ ಹಾಲ’ ಎಂಬ ಹೆಸರಿನ ಕಟ್ಟಡವು ಕಟ್ಟಲ್ಪಟ್ಟಿರುತ್ತದೆ. ಈ ಕಟ್ಟಡವು
ಹೊಸ ಪದ್ಧತಿಯ ಪ್ರಕಾರ ಕೆಂಪು ಕಲ್ಲುಗಳಿಂದ ಕಟ್ಟಿರುವ ಮೂಲಕ ಬಹಳೇ
ಕಮನೀಯವಾಗಿ ತೋರುತ್ತದೆ. ಇದರಲ್ಲಿ ಮೂರು ಭಾಗಗಳಿದ್ದು ಪಶ್ಚಿಮಕ್ಕಿ
ರುವ ಭಾಗದಲ್ಲಿ ಉತ್ತಮೋತ್ತಮ ಇಂಗ್ಲಿಷಗ್ರಂಥಗಳಿಂದ ಪೂರಿತವಾದ ಕಪಾಟು
ಗಳಿಡಲ್ಪಟ್ಟಿವೆ. ಇದಕ್ಕೆ ಹೊಂದಿಯೇ ಸಾಹೇಬ ಜನರ ಅರಿವೆ ಅಂಚಡಿಗಳ
ಸಲುವಾಗಿ ತಯಾರಿಸಿದ ಒಂದು ಕೋಣೆಯು ಇರುತ್ತದೆ. ಮಧ್ಯಭಾಗದಲ್ಲಿ
ಇಂಗ್ಲಂಡ ಹಾಗು ಇಂಡಿಯಾದಲ್ಲಿ ಹೊರಡುವ ದೈನಿಕ, ವಾರ, ಮಾಸಪತ್ರ
ಗಳನ್ನು ಮೇಜುಗಳ ಮೇಲೆ ಓರಣದಿಂದಿಡುತ್ತಾರೆ. ಹಿಂಭಾಗದ ವ್ಹರಾಂಡಿನಲ್ಲಿ
ನಾನಾಪ್ರಕಾರದ ಕುರ್ಚಿ, ಅತ್ಯುತ್ತಮವಾದ ಬಾಕುಗಳನ್ನು ಜನರು ಕೂಡ್ರುವ

ದಕ್ಕಾಗಿ ಇಟ್ಟಿರುತ್ತಾರೆ. ಫ್ರಿಅರ ಹಾಲಿನಲ್ಲಿ ಒಮ್ಮೊಮ್ಮೆ ನಾಟಕ, ಜ ಮೊದಲಾದವುಗಳು ಆಗುತ್ತವೆ. ವರ್ಗಣಿದಾರರಿಗೆ ಮಾತ್ರ ಸಾಯಂಕಾ ೭-೭॥ ಘಂಟೆಯ ವರೆಗೆ ಹೋಗಿ ಬರಲಿಕ್ಕೆ ಪರವಾನಗಿ ಇರುತ್ತದೆ. ತದನ ಕ್ಲಬ್ಬಿನ ಮೆಂಬರರಿಗೆ ಮಾತ್ರ ಹೋಗಲು ಪರವಾನಗಿ ಇರುವದು. ಇದು ಕ ಟಿಯುವರ ವಶದಲ್ಲಿರುವದರಿಂದ ಅದರ ವ್ಯವಸ್ಥೆಯನ್ನು ಸರಕಾರೀ ಹುಕು ಪ್ರಕಾರ ಅವರೇ ಮಾಡುತ್ತಿರುತ್ತಾರೆ.

ಫ್ರಿಅರ-ಹಾಲಕ್ಕೆ ಹೊಂದಿರುವ ಮಹಾಬಳೇಶ್ವರ ಕ್ಲಬ್ಬಿನ ಕಟ್ಟಡವ ಕ್ರಿ. ಶ. ೧೮೮೨ ರಲ್ಲಿ ಕಟ್ಟಿರುವರು. ಇದರಲ್ಲಿ ಉತ್ತಮವಾದ ಸಭಾಮಂ ವಿರುವದಲ್ಲದೆ, ಖಷ-ಆರಾಮಿಯ, ಊಟದ, ಬಿಲಿಯರ್ಡ ಆಟದ ಸ್ಥಳಗಳಿರುವ ಸಮೀಪದ ಸ್ಯಾನಿಟರಿಯುವರ ವಶದಲ್ಲಿದ್ದ ಹಳೇ ಕಟ್ಟಡದ ಉಪಯೋಗವ ಕ್ಲಬ್ಬಿನವರೇ ಮಾಡಿಕೊಳ್ಳುತ್ತಿರುವರು. ಸ್ವಲ್ಪ ಅಂತರದ ಮೇಲೆ ' ಲಾನಟೆ ಕೋರ್ಟ ' ಬೆಡಮಿನಟನ್ ಕೋರ್ಟಗಳಿರುವವಲ್ಲದೆ ಜಿಮಖಾನೆಯ ಪಠಾಂ ವಿರುವದು. ಅಲ್ಲಿ ಹೆಂಗಸರ ಗೋಳೀಬಾರ, ಗೋಲ್ಫ, ಪೋಲೋ ಮೊದ ಆಟಗಳು ನಡೆಯುತ್ತವೆ. ಮಹಾಬಳೇಶ್ವರದಲ್ಲಿ ಪುಸ್ತಕಾಲಯ, ಪತ್ರಕಾಲ ಹೊಟೇಲಗಳಿರುತ್ತವೆ. ಬೈಲುಪ್ರದೇಶಗಳಲ್ಲಿ ಆಟವಾಡುವ ಕೋರ್ಟಸಗಳಿರು ಟಾಂಗೆ, ವ್ಹಿಕ್ಟೋರಿಯಾ, ಮೋಟಾರ, ಪದಚಲಿತ ಶಕಟಗಳ ಮೇಲೆ ಕ ಅಡ್ಡಾಡುವಂಥ, ಪ್ರಾತಃಕಾಲದಲ್ಲಿಯೂ, ಸಾಯಂಕಾಲದಲ್ಲಿಯೂ ಬೇಕಾದ ವ್ಯಾಯಾಮ ಮಾಡಲು ಅನುಕೂಲವಿರುವಂಥ ಸಣ್ಣದೊಡ್ಡ ನಿರ್ಭಯ ಹ ಏಕಾಂತವಾದ ಮಾರ್ಗಗಳಿರುತ್ತವೆ. ಕ್ರಿಸ್ತ ಜನರ ಪ್ರಾರ್ಥನೆಗಾಗಿ ಚ ಉಂಟು. ಇಂಗ್ಲಿಷರ ಸ್ಮಶಾನ, ಜಿಮಖಾನೆ, ನಾಟಕಗೃಹಗಳಿರುವವಲ್ಲದೆ, ಶ ತಿನ ರಾವುಂಡ, ಹರಗೋಲುಗಳು ಸಂಚರಿಸುವಂಥ ಕೆರೆಗಳಿರುತ್ತವೆ. ' ಗವ್ಹ ಮೆಂಟಹೌಸ ' ಅಂದರೆ ಸರಕಾರೀ ಬಂಗಲೆ ಇರುತ್ತದೆ. ಲಾನಟೇನಿಸಕ ಲಾರ್ಡಹಾರೀಸನು ಒಂದು ಉತ್ತಮ ಸ್ಥಳವನ್ನು ಮಾಡಿಟ್ಟಿರುವನು. ಇಲ್ಲಿ ವಿ ರವಾದ ' ಪೋಲೋಗ್ರಾವುಂಡ ' ಇರುತ್ತದೆ. ಇಲ್ಲಿ ಬರುವ ಜಹಾಗೀರದ ಗರ್ಭಶ್ರೀಮಂತ, ಸರಕಾರೀ ನೌಕರ, ಅಲ್ಲದೆ ಇತರ ಜನರ ಸುಖೋಪಭೋ ಕ್ಕಾಗಿ ಅನೇಕ ಸಾಧನಗಳಿವೆ.

ವೇಳೆಯ ವ್ಯಯ:—ಮಹಾಬಳೇಶ್ವರದ ಹವೆ, ರಮಣೀಯ ಸ್ಥಳ ಅಡ್ಡಾಡುವದರಿಂದುಂಟಾಗುವ ವ್ಯಾಯಾಮ ಶರೀರಸಮೃದ್ಧಿಗೆ ಮುಖ್ಯ ಕ

ಗಳಾಗಿವೆ. ಇಲ್ಲಿ ನಸಕು ಹರಿಯುವದರೊಳಗೆದ್ದು ಹೊಬಿಸಿಲು ಬೀಳುವದರೊಳಗೆ ತಿರುಗಾಡಿ ಬರುವ ಸಾಂಪ್ರದಾಯವುಂಟು. ಈ ನಡಾವಳಿಯು ನಮ್ಮ ಜನರಲ್ಲಿ ಮಾತ್ರ ಕಡಿಮೆ ಪ್ರಮಾಣದಿಂದ ಕಂಡುಬರುತ್ತದೆ. ಏಕೆಂದರೆ ಪ್ರಾತಃಕಾಲದ ಸುಖದಾಯಕ ನಿದ್ರೆಯಿಂದ ಎಚ್ಚರಾಗದೆ ದಿನಕರನು ತನ್ನ ಕರಗಳಿಂದ ಎಬ್ಬಿಸಿದಾಗ ಮಾತ್ರ ಏಳುವರು. ಹಿಂದೂ ಜನರ ವ್ಯಾಯಾಮದ ವೇಳೆಯು ಸರಾಸರಿ ಮುಂಜಾವಿನ ಏಳು ಎಂಟು ಗಂಟೆಯದು. ಇಂಗ್ಲಿಷರು ಮಾತ್ರ ಮಹಾಬಳೇಶ್ವರದ ಸಾಂಪ್ರದಾಯದಲ್ಲಿ ಸ್ವಲ್ಪವಾದರೂ ಹೆಚ್ಚುಕಡಿಮೆ ಮಾಡುವದಿಲ್ಲ. ಮುಂಜಾವಿನಲ್ಲಿ ಕೆಲವರು ಕುದುರೆಗಳ ಮೇಲಿಂದಲೂ ಪದಚಲಿತ ಶಕಟಗಳ ಮೇಲಿಂದಲೂ ಹಲವರು ಕಾಲುನಡಿಗೆಯಿಂದಲೂ ವ್ಯಾಯಾಮ ಮಾಡುವರು. ಸಾಯಂಕಾಲದಲ್ಲಿ ಟಾಂಗೆ, ಬಗಿ, ವ್ಹಿಕ್ಟೋರಿಯಾ, ಮೋಟಾರ, ಧಮಣಿಗಳಲ್ಲಿ ಕೂತು ಅತ್ತಿತ್ತ ಸಂಚರಿಸುವರು. ಇದೇ ಕ್ರಮವು ಪಾರ್ಸಿ ಜನರಲ್ಲಿ ಕಂಡುಬರುತ್ತದೆ. ಪ್ರತಿದಿವಸ ಉತ್ತಮ ಅನ್ನದ ಸೇವನ, ಮಿತ್ರರ ಸಂಗಡ ಭೋಜನವಾಗುತ್ತದೆ. ಊಟವಾದ ಮೇಲೆ ಸಾಯಂಕಾಲದ ೪||-೫ ಘಂಟೆಯವರೆಗೆ ಗಂಜೀಫು, ಚದರಂಗ, ಇಸ್ಪೇಟು ಮೊದಲಾದ ಆಟಗಳು ನಡೆಯುತ್ತವೆ. ಬಳಿಕ ಈ ಮೊದಲು ಸೂಚಿಸಿದ ವಾಹನಗಳಲ್ಲಿ ಕೂತು ಸುಂದರ ಹಾಗು ರಮಣೀಯ ಸ್ಥಳಗಳಿಗೆ ಹೋಗಿ, ಅಲ್ಲಿ ಕೆಲಹೊತ್ತು ವಿಶ್ರಮಿಸಿ ಸುಸ್ವರ, ಮನೋರಮ, ವೀರಶ್ರೀಜನಕ, ಆನಂದದಾಯಕ ವಾದ್ಯ ಸಂಗೀತಗಳನ್ನು ಕೇಳುತ್ತಿರುವರು. ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ತಯಾರಿಸಿದ ವಿಹಾರದ ಸ್ಥಳಗಳಲ್ಲಿ ಕ್ರಿಕೇಟ, ಬ್ಯಾಡಮಿಂಟನ್ ಮೊದಲಾದ ಆಟಗಳು ಭರದಿಂದ ಸಾಗುತ್ತವೆ. ಸ್ತ್ರೀಯರ ಕೋಮಲ ಶರೀರಕ್ಕೆ ಬ್ಯಾಡಮಿಂಟನದ ಆಟವು ಬಹಳೇ ಹಿತಕರವಾಗಿರುತ್ತದೆ. ರಾಜವಿಲಾಸಿ ಮೇಜವಾನಿಗಳು ಒಂದು ದಿವಸ ಗವ್ಹರ್ನರ ಸಾಹೇಬರ ಕಡೆಗೆ, ಮತ್ತೊಂದು ದಿವಸ ಸೇನಾಪತಿಯವರ ಕಡೆಗೆ, ಇನ್ನೊಂದು ದಿವಸ ಶ್ರೀಮಂತರ ಕಡೆಗೆ ಹೀಗೆ ಒಂದರ ಹಿಂದೊಂದು ಜರಗುವವು. ಎಂಟು ಹತ್ತು ದಿವಸಗಳಿಗೊಮ್ಮೆ ಕ್ಲಬ್ಬಿನವರು ನಾಟಕಗಳನ್ನು ಮಾಡುತ್ತಿರುತ್ತಾರೆ. ಒಂದೊಂದು ದಿವಸ ವೇಣಾಸರೋವರದ ಜಲಕ್ರೀಡೆಗಾಗಿ ಎಷ್ಟೋ ಜನರು ಹೋಗುತ್ತಾರೆ. ಮೇಲಿಂದಮೇಲೆ ರಮಣೀಯ ಸ್ಥಳಗಳಲ್ಲಿ ವನಭೋಜನಗಳಾಗುವವು. ಅಲ್ಲಲ್ಲಿಗೆ ಧರ್ಮಾರ್ಥ ಸತ್ಕೃತ್ಯಗಳು ನಡೆಯುವವು. ಸಾರಾಂಶ ಈ

ಸ್ಥಳದಲ್ಲಿ ಐಹಿಕ ಅರ್ಥಕ್ಕನುಸರಿಸಿ ತನುಮನಧನ ವೆಚ್ಚಮಾಡಿ ಇಂಗ್ಲಿಷ
ಶರೀರಸುಖವನ್ನೇ ಹಿಂಬಾಲಿಸಿರುತ್ತಾರೆ. ಅವರು ವ್ಯಗ್ರತೆಯನ್ನುಂಟುಮಾಡ
ಯಾವ ಕಾರ್ಯಗಳನ್ನು ಮಾಡುವದಿಲ್ಲ. ಕೇವಲ ಶರೀರಸಮೃದ್ಧಿ, ಚಿತ್ತ
ನ್ನತಿ ಇವುಗಳಲ್ಲಿಯೇ ಮನಸ್ಸು ಹಾಕುತ್ತಿರುತ್ತಾರೆ.

ಇಂಗ್ಲಿಷರಲ್ಲಿ ಸ್ವಯಂವರ ವಿಧಿಯಿಂದಲೇ ವಿವಾಹಗಳಾಗುವ ಪ
ಯುಂಟು. ಅದಕ್ಕೆ ಬೇಕಾಗುವ ಯಾವತ್ತು ಸಾಧನಗಳ ಅನುಕೂಲತೆಯು
ರುವ ಮೂಲಕ ವಾಕ್‌ನಿಶ್ಚಯವಾಗಿ ಮಹಾಬಳೇಶ್ವರದಿಂದ ಹೋದ ಮ
ಕೆಲವು ದಿವಸಗಳ ವರೆಗೆ ಎಡಬಿಡದೆ ವಿವಾಹಗಳಾಗುವವಂತೆ. ಆದುದರಿ
ಶುದ್ಧ, ನಿರ್ಮಲ, ನಿಷ್ಕಪಟ ಪ್ರೇಮದ ವೃದ್ಧಿಗೆ ಮಹಾಬಳೇಶ್ವರ ಸ್ಥಾನವು
ಲರಿಗೂ ಅನುಕೂಲವಾಗಿರುತ್ತದೆ.

ಸಂಸ್ಥಾನಿಕರಿಗೂ, ದೊಡ್ಡ ದೊಡ್ಡ ವ್ಯಾಪಾರಸ್ಥರಿಗೂ, ಜಹಾಗೀರದ
ರಿಗೂ, ಹೆಚ್ಚು ಸಂಬಳವುಳ್ಳ ನೌಕರರಿಗೂ ಹೆಚ್ಚು ಕಡಿಮೆ ಪ್ರಮಾಣದಿಂದ
ವೆಚ್ಚಮಾಡುವ ಸಾಮರ್ಥ್ಯವಿರುವದರಿಂದ ಅವರಿಗೆ ಮಹಾಬಳೇಶ್ವರದ ಸು
ಚನ್ನಾಗಿ ದೊರೆಯುತ್ತದೆ. ಅವರು ಮನೆಯಲ್ಲಿಯೇ ಸುಖೋಪಭೋಗದ ವಿಶ
ಭಾಗವನ್ನು ಅನುಭೋಗಿಸುತ್ತಾರೆ. ಇದರ ಮೇಲಿಂದ ವಿಚಾರಿಸಲು ಅವ
ಶರೀರಸಮೃದ್ಧಿಗಿಂತ ಮಾನಸಿಕ ಸುಖವೇ ಹೆಚ್ಚಿನದೆನಿಸುವದೆಂಬ ಮಾ
ಸ್ಪಷ್ಟವಾಗುತ್ತದೆ. ಸ್ವಲ್ಪವೇಳೆ ಮಾತ್ರ ವ್ಯಾಯಾಮ ಮಾಡುವದರಲ್ಲಿ ಕಳೆ
ತ್ತಾರೆ. ಮಧ್ಯಾಹ್ನ ಹಾಗು ರಾತ್ರಿಯಲ್ಲಿ ಮಿತ್ರರ ಸಂಗಡ ತಮ್ಮ ತಮ್ಮ ಬಂ
ಗಳಲ್ಲಿಯೇ ಆಟ, ಗಾಯನ, ಹಾಳಹರಟೆ ಹೊಡೆಯುವ ವ್ಯವಸಾಯಗ
ಹೆಚ್ಚು ವೇಳೆ ನಿಮಗ್ನರಾದದ್ದು ಕಂಡುಬರುತ್ತದೆ. ಟೆನಿಸಕೋರ್ಟ, ಬ
ಖಾನೆ ಮೊದಲಾದವುಗಳಿಗೆ ಹೋಗಿ ಕೆಲವರು ಸ್ವತಃ ಆಟಗಳನ್ನಾಡುವ
ಹಲವರು ಅಲ್ಲಿ ಭರದಿಂದ ನಡೆಯುತ್ತಿರುವ ಆಟಗಳನ್ನು ನೋಡುತ್ತ ಕೂ
ವರು. ಇಂಗ್ಲಿಷರ ಕ್ರೀಡೆಗಳನ್ನು ನೋಡಿ ಆನಂದದಲ್ಲಿ ಹೇಗೆ ವೇಳೆಯನ್ನು
ಯಬೇಕೆಂಬ ಬಗ್ಗೆ ಕಿತ್ತೆಯನ್ನು ತೀಡಲಿಕ್ಕೆ ಅಡ್ಡಿಯಿಲ್ಲ.

ಪಾಯಿಂಟ:—ಭವ್ಯವಾದ ಸೃಷ್ಟ ಹಾಗು ಕೃತ್ರಿಮ ಸ್ಥಳಗಳ
ನೋಡಬೇಕಾಗಿ ಯಾವತ್ತು ಜನರ ಮನಸ್ಸು ಹಾತೊರೆಯುವದು ಸ್ವಾಭಾ
ಇಂಥ ಸ್ಥಳಗಳು ನಮ್ಮ ದೇಶದಲ್ಲಿ ಅನೇಕವುಂಟು. ಆದರೆ ಅತಿ ಪರಿಚ

ಮೂಲಕ ಸನ್ನಿಧವಿರುವ ಪ್ರೇಕ್ಷಣೀಯ ಹಾಗು ವರ್ಣನೀಯ ಸ್ಥಳಗಳ ಬಗ್ಗೆ ಅನೇಕ ಸಾರೆ ಅವಜ್ಞೆಯಾಗುವದು. ಮತ್ತು ಅವುಗಳ ದರ್ಶನದಿಂದಾಗತಕ್ಕ ಜ್ಞಾನ, ಆನಂದಗಳು ಲಭಿಸುವದಿಲ್ಲ. ಅದರಂತೆ ಇಲ್ಲಿಯ ಭಯಂಕರ ಎತ್ತರ ಪ್ರದೇಶ, ದೊಡ್ಡ ದೊಡ್ಡ ಧಬಧಬೆಗಳು, ಎಷ್ಟೋ ಶೈಲಸಮುದಾಯ, ದಟ್ಟ ಗಿಡ ಗಂಟೆ, ಪ್ರತಾಪಗಡ ರಾಯಗಡದಂಥ ಕೋಟೆ, ಇವುಗಳ ಪ್ರೇಕ್ಷಣೀಯತ್ವವನ್ನು ಯಾರೂ ಲಕ್ಷಗೊಡದೆ ಅವುಗಳ ಮಾಹಿತಿಯನ್ನು ಜನರಿಗೆ ತಿಳಿಸಿಲ್ಲ. ಪರದೇಶದವರು ಮಹಾಬಳೇಶ್ವರಕ್ಕೆ ಬಂದು ಆಲ್ಹಾದಕಾರಕ ದರ್ಶನದಿಂದ ತಲ್ಲೀನರಾಗಿ, ಸಾವಿರಾರು ರೂಪಾಯಿ ವೆಚ್ಚಮಾಡಿ ನಾನಾಪ್ರಕಾರದ ಸುಖೋಪಭೋಗಗಳನ್ನು ಅನುಭೋಗಿಸಹತ್ತಿದ್ದನ್ನು ನೋಡಿ ನಾವೆಲ್ಲರು ಜಾಗೃತರಾದೆವು. ನಮ್ಮ ಜನರಿಗೆ ಈಗೀಗ ಐತಿಹಾಸಿಕ ಸ್ಥಳಗಳನ್ನು ನೋಡುವ ಅಪೇಕ್ಷೆಯುಂಟಾಗಿದೆ, ಇದೊಂದು ಅಭಿನಂದನೀಯ ಸಂಗತಿಯೇ ಸರಿ! ಇಂಥ ಉತ್ಸುಕ ಶೋಧಕರಿಗೆ ಉಪಯೋಗವಾಗಬೇಕೆಂದು ಈ ಪುಸ್ತಕದಲ್ಲಿ ಮಹಾಬಳೇಶ್ವರದಲ್ಲಿಯ ದರ್ಶನೀಯ ಸ್ಥಳಗಳ ಮಾಹಿತಿಯನ್ನು ಕೊಂಚಮಟ್ಟಿಗೆ ಕೊಟ್ಟಿರುತ್ತೇವೆ. ಇದನ್ನು ಓದಿ ಅಥವಾ ತಿಳಕೊಂಡು ಅವುಗಳನ್ನು ನೋಡಬೇಕಾಗಿ ಅಂತಃಕರಣದೊಳಗಿನ ಉತ್ಸುಕತೆಯು ಅಧಿಕ ತೀವ್ರವಾಗಲೇಬೇಕು.

ಪರ್ವತದ ಉನ್ನತಪ್ರದೇಶದಿಂದ ಕೆಲವು ಅಂತರದ ಮೇಲೆ ಒಡೆದಿರುವ ಶಾಖೆಗಳಿಗೆ “ ಪಾಯಿಂಟ ” ಅನ್ನುವರು. ಇಂಥ ಪ್ರಕಾರದ ಎರಡು ಪರ್ವತಶಾಖೆಗಳಲ್ಲಿ ದೊಡ್ಡದರಿ ಇರುತ್ತದೆ. ಈ ಶಾಖೆಗಳ ತುದಿಗೆ ಹೋಗಿ ನಿಂತರೆ ಎದುರಿನ ಗುಡ್ಡಗಾಡು ಪ್ರದೇಶವು ಸ್ಪಷ್ಟವಾಗಿ ಕಾಣಿಸುವದಲ್ಲದೆ ಭರದಿಂದ ಬೀಸುವ ಗಾಳಿಯು ದೊರೆಯುತ್ತದೆ. ಪಾಯಿಂಟುಗಳ ಮೇಲಿನ ದಟ್ಟವಾದ ಗಿಡಗಂಟೆಯನ್ನು ಕಡಿದು ಬಂಡಿಗಳು ಬೇಕಾದ ಹಾಗೆ ಅಡ್ಡಾಡುವಂಥ ಸ್ಥಳಗಳನ್ನು ಮಾಡಿ ಪಾಯಿಂಟುಗಳ ಸುತ್ತುಮುತ್ತು ಕೆಲವು ಕಡೆಗೆ ಕಲ್ಲಿನ ಗೋಡೆಯನ್ನೂ, ಕೆಲವು ಕಡೆಗೆ ಕಬ್ಬಿಣ ತಂತಿಯನ್ನೂ ಕಟ್ಟಿರುತ್ತಾರೆ. ಇಂಥ ರಮ್ಯಸ್ಥಳಗಳಲ್ಲಿ ಯಾವಾಗಲೂ ಯುವಯುವತಿಯರು ದೃಗ್ಗೋಚರವಾಗುವರು. ಪಾಯಿಂಟುಗಳಿಗೆ ಹೋಗಿಬರುವ ವೇಳೆಯು ಮುಂಜಾನೆ ಆರು ಘಂಟೆಯಿಂದ ಸಾಯಂಕಾಲದ ೬॥ ಘಂಟೆಯುವರೆಗೆ ಮಾತ್ರ ಇಲ್ಲಿಯ ಪ್ರೇಕ್ಷಣೀಯ ಪಾಯಿಂಟುಗಳಲ್ಲಿ ಬಾಬಿಂಗಟನ್, ಲಾಡವುಯಿಕ್, ಎಲ್‌ಫಿನ್‌ಸ್ಟನ್, ಆರ್ಥರ ಪಾಯಿಂಟುಗಳು ಮುಖ್ಯವಾದ

ವುಗಳಿರುತ್ತವೆ. ಬೊಂಬೆ, ಕರ್ನಾಕ್, ಸಾಸೂನ ಮೊದಲಾದ ದುಯ್ಯಂ ಪ್ರತಿ
ಶಾಖೆಗಳಿರುತ್ತವೆ. ಇವುಗಳ ಹೊರ್ತು ಕನಾಟಪೀಕ, ಮೌಂಟಮಾಲಕಮ
ರೇವ್ಹಿಲಾ, (ಗವ್ಹರ್ಮೆಂಟಹೌಸ) ಮೊದಲಾದ ಸ್ಥಳಗಳಿರುತ್ತವೆ.

ಬಾಬಿಂಗಟನ್:—ಇದು ಮಾಲಕಮ ಪೇಠೆಯಿಂದ ಎರಡು ಮೈಲಿ
ಮೇಲೆ ದಕ್ಷಿಣದಿಕ್ಕಿಗಿರುವದು. ಈ ಸ್ಥಳಕ್ಕೆ ಹೋಗುವ ಮಾರ್ಗವು ಅತ್ಯುತ್ತ
ವಾಗಿರುತ್ತದೆ. ಈ ಮಾರ್ಗವು ಪೇಠೆಯೊಳಗಿಂದ ಹಾಯ್ದು ಫಾವುಂಟನ್ ಹ
ಲದ ಮೇಲಿಂದ ಹೋಗಿರುತ್ತದೆ. ಈ ಪಾಯಿಂಟದ ಎತ್ತರವು ಸರಾಸರಿ ೪೨
ಫೂಟು. ಈ ಸ್ಥಳದಿಂದ ಕೋಯುನಾನದಿಯು ಕೊಳ್ಳ, ಸಡಲ್‍ಬಗ್ಗಹಿಲ್ಲ ಕಾಣು
ವಲ್ಲದೆ ವನಶೋಭೆಯು ರಮ್ಯವಾಗಿ ತೋರುವದು. ಬಬಿಂಗಟನ್ ಪಾಯಿಂ
ಹಾಗು ಸಾತಾರೆಯ ಮಾರ್ಗ ಇವುಗಳ ನಡುವೆ ಬ್ಲ್ಯೂವ್ಹಾಲಿ ಎಂಬ ಹೆಸರಿ
ಕೊಳ್ಳವಿರುತ್ತದೆ.

ಲಾಡವ್ಹುಯಿಕ್:—ಇದಕ್ಕೆ ಪ್ರಥಮದಲ್ಲಿ ಸಿಡ್ನಿ ಬೇಕವುಯಿಥಸಾಹ
ಬರ ಹೆಸರು ಕೊಟ್ಟಿರುವ ಮೂಲಕ ಈ ಮೊದಲು ಸಿಡ್ನಿಪಾಯಿಂಟ ಎಂ
ಅನ್ನುತ್ತಿದ್ದರು. ಕ್ರಿ. ಶ. ೧೮೨೭ ರಲ್ಲಿ ಲಾಡವ್ಹುಯಿಕ ಸಾಹೇಬರು ಇಲ್ಲಿ ಬಂದಿ
ರೆಂಬ ಮಾತು ಈ ಮೊದಲೇ ಗೊತ್ತಾಗಿರುವದಷ್ಟೇ. ಅವರ ಹೆಸರು ಸರಕಾರಿ
ಹುಕುಮಿನ ಪ್ರಕಾರ ಈ ಪಾಯಿಂಟಕ್ಕೆ ಕೊಟ್ಟ ಮೂಲಕ ಜನರು ಲಾಡವ್ಹುಯಿ
ಪಾಯಿಂಟ ಎಂದು ಅನ್ನಹತ್ತಿದರು. ಮಹಾಬಳೇಶ್ವರದಿಂದ ಮಹಾಡ ಮಾರ್ಗ
ಹಿಡಿದು ಹೋಗಹತ್ತಲು ಕೆಲವು ಅಂತರದ ಮೇಲೆ ಬಲಮಗ್ಗಲಿಗೆ ಆ ಮಾರ್ಗ
ದಿಂದ ಎಷ್ಟೋ ಮಾರ್ಗಗಳು ಒಡೆದಿರುತ್ತವೆ. ಅವುಗಳಲ್ಲಿಯ ಎರಡನೇ ಮಾರ್ಗ
ವನ್ನು ಹಿಡಿದು ಕೆಲವು ಅಂತರ ಗಮಿಸಿದ ಮೇಲೆ ಬಲಬದಿಗೆ ಮತ್ತೊಂದ
ಮಾರ್ಗವು ಹೋಗಿರುತ್ತದೆ. ಆ ಮಾರ್ಗದಿಂದ ಅಲ್ಲಿಗೆ ಹೋಗಬೇಕು.
ಮಾರ್ಗವು ಏರಿಳಿತವಾಗಿದ್ದರೂ ಬಂಡಿಗಳು ಆಯಾಸವಿಲ್ಲದೆ ಮೂರು, ಮೂ
ವರೆ ಮೈಲುಗಳ ವರೆಗೆ ಮಾತ್ರ ನಡೆಯುವವು. ಅಲ್ಲಿಂದ ಮುಂದೆ ಪಾಯಿಂಟ
ವರೆಗೆ ಬಂಡಿಗಳು ನಡೆಯದ್ದರಿಂದ ಕಾಲುನಡಿಗೆಯಿಂದ ಹೋಗಬೇಕಾಗುತ್ತ
ಮಾರ್ಗದ ಎರಡೂ ಬದಿಗಳಲ್ಲಿದ್ದ ಗಿಡಗಳ ಸಾಲುಗಳು ಬಹಳೇ ದಟ್ಟವಾಗಿ
ವವು. ಕೆಲವು ಭಾಗದಲ್ಲಂತೂ ಸೂರ್ಯನ ಪ್ರಕಾಶವೇ ಬೀಳುವದಿಲ್ಲ. ಮಧ

ಹ್ನದ ಹನ್ನೆರಡು ಘಂಟೆಯ ಸುಮಾರಕ್ಕೆ ಸಾಯಂಕಾಲವಾದಂತೆ ಭಾಸವಾಗುತ್ತದೆ.

ಈ ಸ್ಥಳದಿಂದ ಕಾಣಿಸುವ ಅದ್ಭುತ ಸೃಷ್ಟಿಸೌಂದರ್ಯದ ಚಮತ್ಕಾರವನ್ನು ಶಬ್ದಗಳಿಂದ ವರ್ಣಿಸಲಳವಲ್ಲ. ಅದನ್ನು ಪ್ರೇಕ್ಷಕರ ಮನಸ್ಸಿಗೇ ಕೇಳಬೇಕಾಗುವದು. ವೃಕ್ಷ, ವನಸ್ಪತಿಗಳ ಹಚ್ಚಗಿನ ಪ್ರದೇಶವು ಅಮರ್ಯಾದಿತವಾಗಿ ತೋರುವದು. ಅದರ ಕೆಳಬದಿಯಲ್ಲಿದ್ದ ಕಂದರದ ಆಳವು ಸರಾಸರಿ ಮೂರು ಸಾವಿರ ಫೂಟು ಆಗುವದು. ಪಾಯಿಂಟದ ಎಡಬದಿಗೆ ನೋಡಹತ್ತಲು ಮುಂಬಯಿ ಪಾಯಿಂಟ, ಪ್ರತಾಪಗಡಗಳು ಕಾಣಿಸುವವು. ಮುಂದೆ ಕೆಲವು ಅಂತರದಲ್ಲಿದ್ದ ಚಿತ್ರವಿಚಿತ್ರವಾಗಿರುವ ಹಿರಿದು ಕಿರಿದಾದ ಗುಡ್ಡದ ಸಾಲುಗಳು ದೃಗ್ಗೋಚರವಾಗುತ್ತವೆ. ಇಷ್ಟೆಲ್ಲ ಚಮತ್ಕಾರವನ್ನು ನೋಡಿ ಬಲಬದಿಗೆ ದೃಷ್ಟಿಯನ್ನು ಚಲ್ಲಲು ಎಲ್‌ಫಿನ್‌ಸ್ಟನ್‌ಪಾಯಿಂಟ, ಸಾವಿತ್ರಿಯ ಕೊಳ್ಳ ಕಾಣಿಸುವವು. ಅಲ್ಲದೆ ಉತ್ತರ ಕೊಂಕಣದೊಳಗಿನ ದಿನ್ನೆಗಳು ಪಗಡಿಗಳನ್ನು ಒಂದರ ಮುಂದೊಂದು ಹಚ್ಚಿದಂತೆ ಭಾಸವನ್ನುಂಟುಮಾಡುವವು. ಒಟ್ಟಿನ ಮೇಲೆ ಪಾಯಿಂಟದ ಮೇಲೆ ನಿಂತು ನೋಡಲು ಕಾಣಿಸುವಂಥ ಆಲ್ಹಾದಕರವಾದ ನೋಟವು, ಬೇರೆ ಎಲ್ಲಿಂದಲೂ ಕಾಣಿಸುವದಿಲ್ಲೆಂದರೆ ಅತಿಶಯೋಕ್ತಿಯಾಗಲಾರದು.

ಸರಕಾರದವರಿಂದ ಪರವಾನಗಿಯನ್ನು ಸಂಪಾದಿಸಿ ಜನರಲ್ ಲಾಡವ್ರಯಿಕ ಸಾಹೇಬರ ಸ್ಮಾರಕಕ್ಕಾಗಿ ಅವರ ಮಗನು ಇಲ್ಲಿ ಒಂದು ಸ್ತಂಭವನ್ನು ಕಟ್ಟಿಸಿರುವನು. ಸ್ತಂಭದ ಎತ್ತರವು ಸುಮಾರು ೨೫ ಫೂಟು ಆಗುವದು. ಇದರ ಪಶ್ಚಿಮಬದಿಯಲ್ಲಿ ಸಂಗಮರವರೀ ಕಲ್ಲಿನಿಂದ ತಯಾರಿಸಿದ ಲಾಡವ್ರಯಿಕ ಸಾಹೇಬರ ಮುಖದ ಅಂದವಾದ ಪ್ರತಿಮೆಯನ್ನು (BUST) ಕಬ್ಬಿಣದ ಚೌಕಟ್ಟಿನಲ್ಲಿ ಕೂಡ್ರಿಸಿರುತ್ತಾರೆ. ಚೌಕಟ್ಟಿನ ಸುತ್ತಲು ಜಸ್ತಿನ ತಂತಿಯ ವೇಷ್ಟನಗಳಿರುವವು. ಆ ಸ್ತಂಭದ ದಕ್ಷಿಣ ಪೂರ್ವ ಉತ್ತರ ಬದಿಗಳಲ್ಲಿ ಶಿಲಾಲೇಖಗಳುಂಟು.

ಎಲ್‌ಫಿನ್‌ಸ್ಟನ್:—ಇದು ಮಾಲಕಮಪೇಠೆಯಿಂದ ಆರು ಮೈಲು, ಹಾಗು ಕ್ಷೇತ್ರ ಮಹಾಬಳೇಶ್ವರದಿಂದ ಒಂದು ಒಂದೂವರೆ ಮೈಲು ಆಗುವದು. ಈ ಹೆಸರು ನಾಮದಾರ ಮೌಂಟ ಸ್ಟುಅರ್ಟ ಎಲ್‌ಫಿನ್‌ಸ್ಟನ್ ಸಾಹೇಬರಿಂದ

ಕೊಡಲ್ಪಟ್ಟಿರುವದು. ಸನೇಟೇರಿಯಮ ದೆಸೆಯಿಂದ ಸ್ಥಳವನ್ನು ಮೊದಲು ಈ ಭಾಗದಲ್ಲಿ ಮಾಡುವ ವಿಚಾರವಿತ್ತು. ಆದರೆ ನೀರಿನ ಕೊರತೆಯ ಮೂಲಕ ಆ ವಿಚಾರವನ್ನು ನಿಲ್ಲಿಸಿ ಮಾಲಕಮಪೇಠೆಯ ಸ್ಥಳವನ್ನು ಸನೇಟೇರಿಯಮದ ಸಲು ವಾಗಿ ನಿಶ್ಚಯಿಸಿದರು. ಮೊದಲಿನ ವಿಚಾರಕ್ಕನುಸರಿಸಿ ಇಲ್ಲಿ ಒಂದು ಬಂಗಲೆ ಯನ್ನು ಮಾತ್ರ ಕಟ್ಟಿಸಿರುವರು.

ಎಲ್‌ಫಿನ್‌ಸ್ಟನ್ ಪಾಯಿಂಟು ಬಲು ಬಿಕ್ಕಟ್ಟಿನ ಎತ್ತರವಾದ ಸ್ಥಳದ ಮೇಲಿದ್ದು ಕೆಳಬದಿಗಿರುವ ದರಿಯ ಆಳವು ಸರಾಸರಿ ೩೦೦೦ ಫೂಟು ಇರು ವದು. ಇಲ್ಲಿಯ ಭವ್ಯ ಹಾಗು ಭಯಾನಕ ಪ್ರಕಾರ ನೋಡಿದ ಕೂಡಲೆ ತಲೆ ತಿರುಗಿದಂತಾಗಿ ಕಣ್ಣಿಗೆ ಕತ್ತಲೆಬರುತ್ತದೆ. ಇಲ್ಲಿ ಎದ್ದುನಿಂತು ನೋಡುವದೆಂದರೆ ತಾನಾಗಿ ತನ್ನ ಮೇಲೆ ಗಂಡಾಂತರ ತೆಗೆದುಕೊಂಡಂತೆಯೇ ಸರಿ! ಇದರ ಎದುರಿಗೆ ಪ್ರತಾಪಗಡ ಕೋಟೆಯೂ ಉತ್ತರ ಬದಿಗೆ ಸಾವಿತ್ರಿನದಿಯ ಕೊಳ್ಳದ ಪ್ರಾಗ್ಭಾಗವೂ ಕಾಣಿಸುವವು. ಪಶ್ಚಿಮದಿಕ್ಕಿಗೆ ನೋಡಲು ಸಮುದ್ರ ಸುಶೋಭಿತ ಕೊಂಕಣಪಟ್ಟಿಯು ಹಬ್ಬಿದ್ದು ಅದರ ಮೇಲಿನ ಸಣ್ಣ ಸಣ್ಣ ಗುಡ್ಡ ಮತ್ತ ದಿನ್ನೆ ಗಳು ಕಪ್ಪು, ಹಸರು ಬಣ್ಣಗಳಿಂದ ದೃಗ್ಗೋಚರವಾಗುವವು. ಇದನ್ನೆಲ್ಲ ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸಬೇಕಾದಲ್ಲಿ ಬಹಳ ಕಾಲವು ಹತ್ತುವದೆಂಬದರಲ್ಲಿ ಸಂದೇ ಹವಿಲ್ಲ. ಈ ಪಾಯಿಂಟದ ಮೇಲ್ಬದಿಗೆ ಮ್ಯುನಿಸಿಪಾಲ್ಟಿಯವರು ವನಭೋಜನದ ದೆಸೆಯಿಂದ ಒಂದು ಸಣ್ಣ ಬಂಗಲೆಯನ್ನು ಕಟ್ಟಿಸಿರುತ್ತಾರೆ. ಬಂಗಲೆಯಲ್ಲಿ ಕೆಲ ಕೆಲವು ಕಡೆಗೆ ಮಾತ್ರ ಉತ್ತಮವಾದ ಫರ್ನಿಚರ ಸಾಮಾನುಗಳು ಇಡಲ್ಪಟ್ಟಿರು ತ್ತವೆ. ಈ ಪಾಯಿಂಟದ ಮೇಲಿಂದ ಅರ್ಥರಸೀಟದ ಕಡೆಗೆ ಒಂದು ಮಾರ್ಗವು ಹೋಗಿರುವದು. ಆ ಮಾರ್ಗದ ಬದಿಯಲ್ಲಿಯೇ ಬ್ರಹ್ಮಾರಣ್ಯವಿರುತ್ತದೆ.

ಅರ್ಥರಸೀಟ:—ಈ ಪಾಯಿಂಟು ಮಾಲಕಮ್ ಪೇಠೆಯಿಂದ ಎಂಟು ಮೈಲು, ಹಾಗು ಕ್ಷೇತ್ರ ಮಹಾಬಳೇಶ್ವರದಿಂದ ಐದು ಮೈಲು ಆಗುವದು. ಇದು ಬ್ರಹ್ಮಾರಣ್ಯದ ಸಮೀಪದಲ್ಲಿಯೇ ಇರುತ್ತದೆ. ಇಲ್ಲಿಗೆ ಬರುವವರು ಕ್ಷೇತ್ರಮಹಾ ಬಳೇಶ್ವರಕ್ಕೆ ಬಂದು ಅಲ್ಲಿದ್ದ ಬೋರ್ಡವನ್ನು ಓದಿಕೊಂಡು ಬ್ರಹ್ಮಾರಣ್ಯದೊಳ ಗಿಂದ ಹಾಯ್ದು ಬರಬೇಕಾಗುತ್ತದೆ. ಈ ಪಾಯಿಂಟು ಸಮುದ್ರಸಪಾಟಿಯಿಂದ ಸುಮಾರು ೪೪೩೯ ಫೂಟು ಎತ್ತರದ ಮೇಲಿರುವದು. ಇದರ ಮೇಲಿಂದ ಇದಕ್ಕೆ ಮೇರುಮಣಿ' ಅನ್ನಲು ಅಡ್ಡಿಯಿಲ್ಲ. ಇಲ್ಲಿಯ ಬೈಲುಪ್ರದೇಶದ ಒಂದು ಭಾಗ

ದಲ್ಲಿ ಅರ್ಥರಮುಲೇಟ ಸಾಹೇಬರು ಗುಡಿಸಲು ಹಾಕಿಕೊಂಡು ಇದ್ದರಂತೆ. ಆದ್ದರಿಂದಲೇ ಇದಕ್ಕೆ 'ಅರ್ಥರಸೀಟ' ಎಂಬ ಹೆಸರು ಬಿದ್ದಿರುತ್ತದೆ. ಪಾಯಿಂಟದ ಎದುರಿಗಿರುವ ಕೊಂಕಣಪಟ್ಟಿಯು ಕಡೆಗೆ ಕೆಳಬದಿಯು ಸಾವಿತ್ರಿಯು ಕೊಳ್ಳದಲ್ಲಿ, ಹಾಗು ಅದರ ಆಚೇಮುಗ್ಗಲಲ್ಲಿ ಸರಾಸರಿ ೫೦-೬೦ ಪರ್ವತಪಂಕ್ತಿಗಳಿರುವವು. ಅವುಗಳ ಭಯಂಕರ ಮತ್ತು ಆಕ್ರಾಳವಿಕ್ರಾಳ ಸ್ವರೂಪವನ್ನು ನೋಡಿ ಪ್ರೇಕ್ಷಕರು ಭಯಭ್ರಾಂತರಾಗುವರು. ಪರ್ವತಪಂಕ್ತಿಯು ಪ್ರತಿಯೊಂದು ಸಾಲಿನಲ್ಲಿ ಎಂಟು ಹತ್ತು ಪರ್ವತಗಳಿರುವವು ಇವುಗಳಲ್ಲಿ ಪ್ರತಿಯೊಂದು ಪರ್ವತವು ಒಂದರಿಂದೊಂದು ಭಿನ್ನವಿದ್ದು ಚೂಪಾಗುತ್ತ ಹೋಗಿರುತ್ತವೆ. ಅಲ್ಲದೆ ಅಂಚುಗಳು ಕರಗಸದ ಹಲ್ಲುಗಳಂತಿರುವವು. ಆ ಸ್ಥಳಗಳಲ್ಲಿ ವನಸ್ಪತಿಯು ಲೇಶವಾದರೂ ಕಂಡುಬರುವದಿಲ್ಲ. ಪರ್ವತಪಂಕ್ತಿಗಳ ಸ್ವರೂಪವನ್ನು ನೋಡುವವರಲ್ಲಿ ಹೆದರಿಕೆಯುಂಟಾಗಿ ದೃಷ್ಟಿಯಲ್ಲಿ ಸ್ಥಿರತ್ವವು ಉಳಿಯುವದಿಲ್ಲ. ಇಲ್ಲಿ ಒಂದು ಯಾವಾಗಲೂ ಹರಿಯುವಂಥ ಝರಿಯ ನೀರಿನ ಸಂಚಯವಿರುತ್ತದೆ. ಇದಕ್ಕೆ ಜನರು 'ಹುಲಿಯ ನೀರು' ಎಂದೆನ್ನುತಾರೆ. ಇದರೊಳಗಿನ ನೀರನ್ನು ಹಿಂಸ್ರಪಶುಗಳೇ ಹೆಚ್ಚಾಗಿ ಕುಡಿಯುತ್ತಿರುತ್ತವೆ. ಈ ನೀರಿನ ಸಂಚಯಕ್ಕೆ ಹೋಗಲು ಒಂದು ಸಣ್ಣ ದಾರಿಯುಂಟು. ಮಹಾಬಳೇಶ್ವರದಲ್ಲಿಯ ಯಾವತ್ತು ರಮಣೀಯ ಸ್ಥಳಗಳಿಗಿಂತ ಇಲ್ಲಿ ತೋರುವ ಅದ್ಭುತ ಚಮತ್ಕಾರವು ಅವರ್ಣನೀಯವಾಗಿರುತ್ತದೆ.

ಮುಂಬಯಿ:—ಮುಂಬಯಿಗೆ ಹೋಗುವ ಹಳೇ ಜಲಮಾರ್ಗದ ಮೇಲೆ, ಈ ಪಾಯಿಂಟಿರುವ ಮೂಲಕ ಇದಕ್ಕೆ ಮುಂಬಯಿ ಪಾಯಿಂಟ ಎಂಬ ಹೆಸರು ಬಿದ್ದಿರುತ್ತದೆ. ಇದು ಮಾಲಕಮ ಪೇಠೆಯಿಂದ ಎರಡು ಮೈಲು ಅಂತರದ ಮೇಲಿರುವ 'ಫಿಟರ್ಝರಲ್ಡ' ಘಟ್ಟದ ಮೇಲಿರುವದು. ಇಲ್ಲಿ ಎಲ್ಲ ಪಾಯಿಂಟುಗಳಿಗಿಂತ ಬರಹೋಗುವ ಜನರ ಸಂಖ್ಯೆಯು ವಿಶೇಷವಾಗಿರುವದು. ಪಾಯಿಂಟಿನ ಮೇಲೆ ಬಂಡಿಗಳು ಅತ್ತಿಂದ ಇತ್ತ ಇತ್ತಿಂದ ಅತ್ತ ಆಡ್ಡಾಡುವಂಥ ಪ್ರಶಸ್ತವಾದ ಸ್ಥಳವಿರುತ್ತದೆ. ಬ್ಯಾಂಡು ಬಾರಿಸುವದಕ್ಕೆ, ಜನರು ಕೂಡ್ರುವದರ ಸಲುವಾಗಿ ಒಂದು ಉತ್ತಮವಾದ ಕಟ್ಟೆಯನ್ನು ಮಾಡಿರುತ್ತಾರೆ. ಮುಂಬಯಿ ಪಾಯಿಂಟಗೆ ಹೋಗಲಿಕ್ಕೆ ಎರಡು ದಾರಿಗಳುಂಟು. ಅವುಗಳಲ್ಲಿ ಒಂದು ಮಾರ್ಗವು ಗವ್ಹರ್ನಮೆಂಟ ಹೌಸದ ಮುಂಭಾಗದಲ್ಲಿ ಹಾಯ್ದು ಹೋಗಿರುವದು. ಮತ್ತೊಂದು ಮಹಾಡ ಮಾರ್ಗದ ಎಡಬದಿಯಿಂದ ಹಾಯ್ದು

ಹೋಗಿರುವದು. ಪಾಯಿಂಟದ ಮೇಲೆ ಹೋಗಿ ನಿಂತು ನೋಡಲಾಗಿ, ೩೫೦
ಫೂಟು ಆಳವಿರುವ ದರಿಯಲ್ಲಿ ಕೊಯನಾ ನದಿಯು ಕೊಳ್ಳವೂ, ಮುಂಭಾ
ದಲ್ಲಿದ್ದ ಇತಿಹಾಸಪ್ರಸಿದ್ಧವಾದ ಪ್ರತಾಪಗಡವೆಂಬ ಕೋಟೆಯೂ ಕಾಣಿಸುವ
ಆ ಕೋಟೆಯು ಬಲಬದಿಯು ಗಿಡಗಂಟಿಯುಕ್ತವಿರುವ ಪಾರಗಾಂವ, ಮತ್ತು ಅ
ಹೆಸರಿನ ಘಟ್ಟ ಹಾಗು ಮಹಾಡ ಮಾರ್ಗ ದೃಗ್ಗೋಚರವಾಗುವವು. ಭಾ
ಶಂಕರ ನಾನಾಭಾಯಿ ಸಾಲಿಸೇಟರ ಮುಂಬಯಿ ಇವರು ತಮ್ಮ ಪ್ರಿಯ ಹಾ
ಪೂಜ್ಯಪತ್ನಿಯರ ಸ್ಮಾರಕಕ್ಕಾಗಿ 'ಪವ್ಹೀಲಿಯನ್' ವನ್ನು ಕಟ್ಟಿಸಿರುವ
ಅದರ ಮುಂಭಾಗದಲ್ಲಿದ್ದ, ಬಿಳೇ ಸಂಗಮರವರೀ ಕಲ್ಲಿನ ಮೇಲೆ ಕೊರೆದ ಅಕ್ಷ
ಗಳು ಅಚ್ಚಳಿಯದೆ ಉಳಿದಿರುತ್ತವೆ.

ಕರ್ನಾಕ ಹಾಗು ಫಾಕಲಂಡ.

ಕರ್ನಾಕ ಹಾಗು ಫಾಕಲಂಡವೆಂಬ ಗವ್ಹರ್ನರ ಸಾಹ
ಬರ ಹೆಸರುಗಳನ್ನು ಈ ಎರಡೂ ಪಾಯಿಂಟುಗಳಿಗೆ ಅನುಕ್ರ
ಮವಾಗಿ ಕೊಟ್ಟಿರುವರು. ಮುಂಬಯಿ ಪಾಯಿಂಟದಿಂ
ಕರ್ನಾಕ ಪಾಯಿಂಟವು ಕಾಲು ಮೈಲಿನ ಮೇಲೆ ಮತ್ತ
ಫಾಕಲಂಡ ಪಾಯಿಂಟವು ಅರ್ಧ ಮೈಲಿನ ಮೇಲೆ ಇ
ವವು. ಇವೆರಡೂ ಸ್ಥಳಗಳ ನೋಟವು ಒಂದೇ ಬಗೆಯಾಗಿರುತ್ತದೆ. ಪ್ರತಿಯೊಂ
ಪಾಯಿಂಟಿನ ಮೇಲಿಂದ ಸಡಲ್ ಬಗ್ಗ ದಿಸ್ಸೆಯ ಯಾವತ್ತೂ ಭಾಗವು ರಮಣ
ಯವಾಗಿ ತೋರುವದು. ಸಾಯಂಕಾಲದ ಸಂಧ್ಯಾರಾಗವು ಮುಂಬ
ಪಾಯಿಂಟವು ನಡುವಿರುವ ಮೂಲಕ ಮನಸ್ಸಿಗೆ ವಿಶೇಷ ಅಲ್ಹಾದವನ್ನುಂ
ಮಾಡುವದಿಲ್ಲ. ಪಾಯಿಂಟುಗಳ ಸಮೀಪದಲ್ಲಿ ಗುಡ್ಡಗಳ ಸಾಲುಗಳಿಲ್ಲ
ಮೂಲಕ ಅವು ನೆಲದೊಳಗಿಂದ ಉದ್ಭವಿಸಿದಂತೆ ಕಾಣಿಸುತ್ತವೆ. ಎರಡ
ಪಾಯಿಂಟುಗಳ ಮೇಲೆ ಎಲ್ಲ ಕಡೆಗೂ ಗಿಡಗಂಟಿಯು ವಿಶೇಷ ಹಬ್ಬಿರುತ್ತ
ಅತ್ತಕಡೆಯ ಮಾರ್ಗಗಳ ಮೇಲೆಯೂ, ಗಿಡಗಂಟಿಗಳ ಮೇಲೆಯೂ, ಹಬ್ಬಿರು
ಹಾಂಸೆಯ ಅದ್ಭುತ ಚಮತ್ಕಾರವು ಆಕ್ಟೋಬರ ತಿಂಗಳಲ್ಲಿ ಮಾತ್ರ ನೋಡಲಿ
ಸಿಗುವದು.

ಮೇಲೆ ಸೂಚಿಸಿದ ಗಿಡಗಂಟಿಯ ಒಂದು ಭಾಗದಲ್ಲಿ ವನಭೋಜನ
ದೆಸೆಯಿಂದ ತಯಾರಿಸಿದ ಸ್ಥಳವು ಬಹಳೇ ರಮಣೀಯವಾಗಿರುತ್ತದೆ. ಇಲ್ಲಿ
ಸೂರ್ಯಪ್ರಕಾಶದಿಂದುಂಟಾದ ವಿಲಕ್ಷಣ ಶೋಭೆಯನ್ನು ನೋಡಿ ಮನು

ಆನಂದಸಾಗರದಲ್ಲಿ ಮುಳುಗಿಹೋಗುವದು. ಸಾಹೇಬ ಜನರ ಗೋಲ್ಫ ಆಟಕ್ಕೆ ಬೇಕಾಗುವ ಗಿಡಗಂಟಿಗಳ ಅನುಕೂಲತೆಯು ಇಲ್ಲಿರುವ ಮೂಲಕ ಆ ಆಟಗಳು ಭರದಿಂದ ನಡೆಯುವವು. ವೇಸ್ಟ್ಟಊಡ ಹಾಗೂ ಫರ್ನಬಂಗಲೆಗಳ ಹತ್ತರ ಹಾಯ್ದು ಮಹಾಡ ಮಾರ್ಗದಿಂದ ಅನೇಕ ಮಾರ್ಗಗಳು ಬೇರೆ ಬೇರೆ ಕಡೆಗೆ ಹೋಗಿರುತ್ತವಷ್ಟೇ. ಅವುಗಳೊಳಗಿನ ಎಡಗಡೆಯ ಒಂದು ಮಾರ್ಗವು ಸೆಟ್ಟಗೆ ಫಾಕಲಂಡ ಪಾಯಿಂಟಕ್ಕೆ ಹೋಗಿರುವದು. ಟಾಯಗರ ಪಾಥವನ್ನು ಎಡಗಡೆಗೆ ಬಿಟ್ಟು ಬಲಬದಿಯ ಗುಡ್ಡಗಳ ದಂಡೆಗುಂಟ ನೀಟಾಗಿ ಫಾಕಲಂಡಕ್ಕೆ ಹೋಗುವ ಒಂದು ಕಾಲುದಾರಿಯುಂಟು. ಆ ದಾರಿಯು ಎಲ್ಲಿಯವರೆಗೆ ಹೋಗಿರುವದೋ, ಅಲ್ಲಿಯವರೆಗಿನ ಭಾಗಕ್ಕೆ 'ಎಡೋಪಾಯಿಂಟ' ಎಂಬ ಸಂಜ್ಞೆಯುಂಟು. ಆ ದಾರಿಯಿಂದ ಹೊರಟ ಮನುಷ್ಯನು ಕೆಳಗಣ ವನಶೋಭೆಯನ್ನು ನೋಡಿ ಆಶ್ಚರ್ಯಚಕಿತನಾಗದಿರನು.

ಸಾಸೂನ:—ಮಾಲಕಮ ಪೇಠೆಯಿಂದ ಬಬಿಂಗಟನ್ ಪಾಯಿಂಟಕ್ಕೆ ಹೋಗುವ ಅರ್ಧಮಾರ್ಗವನ್ನು ಕ್ರಮಿಸಿದ ಮೇಲೆ ಸಾಸೂನ ಪಾಯಿಂಟು ಬರುವದು. ಅಲ್ಲಿಗೆ ಹೋಗಿ ಎದುರಿಗೆ ನೋಡಹತ್ತಲು ಫಾಕಲಂಡ ಪಾಯಿಂಟವೂ, ಪಾಯಿಂಟದ ಮುಂಭಾಗದ ನಿಮ್ನ ಪ್ರದೇಶದಲ್ಲಿ ಉಡ್ಲಾನ ಬಂಗಲೆಯ ಹತ್ತರ ಹಾಯ್ದು ಟಾಯಗರ ಪಾಥಕ್ಕೆ ಹೋದ ಮಾರ್ಗವೂ ಕಾಣಿಸುವವು. ಆ ಮಾರ್ಗದ ಎಡಬದಿಗೆ ಧಬಧಬೆಗಳೂ ಬಲಬದಿಗೆ ಚೀನೀ ಜನರ ತೋಟಗಳೂ ಬಹಳೇ ಮನೋಹರವಾಗಿ ತೋರುವವು. ಆ ಮಾರ್ಗದಿಂದ ಹೋಗತೊಡಗಲು ಕಾಲುನಡಿಗೆಯಿಂದ ಹಾಗು ಬಂಡಿಗಳಲ್ಲಿ ಕೂತು ಅಡ್ಡಾಡುವ ಜನರು ಮೇಲಿಂದ ಮೇಲೆ ಭೆಟ್ಟಿಯಾಗುವರು.

ಕ್ಯಾನಾಟ ಶಿಖರ:— ಇದರ ಮೂಲ ಹೆಸರು 'ತಂದುಲನದಿ' ಎಂಬದಾಗಿತ್ತು. ಎತ್ತರವು ಸುಮಾರು ೪೭೪೪ ಫೂಟು ಉಂಟು. ಪೇಟಿಟ್ ರೋಡದಿಂದ ಸುಮಾರು ಎರಡು ಫರ್ಲಾಂಗು ಗತಿಸಿದ ಮೇಲೆ 'ಲೀಕಾಟೇಜ, ಬಂಗಲೆಯ ಹತ್ತರ ಕಾಯ್ದು ಮಾರ್ಗವು ಅಂಕಡೊಂಕಾಗಿ ಶಿಖರಕ್ಕೆ ಹೋಗಿ ತಲ್ಪಿರುವದು. ಆ ಮಾರ್ಗದಿಂದ ಜನರು ಹೆಚ್ಚಾಗಿ ಹೋಗುವರು. ಅಲ್ಲದೆ ಮಾಲಕಮ ಪೇಠೆಯಿಂದ ಕ್ಷೇತ್ರ ಮಹಾಬಳೇಶ್ವರಕ್ಕೆ ಹೋಗುವ ದಾರಿಯಿಂದಲೂ, ಜನರಿಗೆ ಶಿಖರಕ್ಕೆ ಹೋಗಲಿಕ್ಕೆ ಬರುವಂತಿದೆ. ಈ ಶಿಖರದ ಮೇಲಿಂದ ನೋಡಲು

ನಾಲ್ಕೂ ಕಡೆಯ ಪ್ರದೇಶವು ಅಂದವಾಗಿ ತೋರುವದು. ಶಿಖರದ ಮೇ
ಯಲ್ಲಿರುವ ಸಮನೆಲದ ಮಧ್ಯಭಾಗದಲ್ಲಿ 'ಪವ್ಹೀಲಿಯನ್' ಇರುವದು. ಶಿಖ
ಮೇಲಿಂದ ಸೂರ್ಯೋದಯ ಹಾಗು ಸೂರ್ಯಾಸ್ತವಾಗುವದನ್ನು ನೋಡ
ಬಹಳೇ ಚಮತ್ಕಾರವೆನಿಸುವದು. ಮೇಲೆ ಹೇಳಿದ ಮಾರ್ಗಗಳಿಂದ ಬಂಡಿ
ಹೋಗುವಂತಿದ್ದರೂ, ಆ ಪ್ರದೇಶವು ಎತ್ತರವಿರುವ ಮೂಲಕ ಬಂಡಿಗಳ
ಪ್ರಯಾಣಮಾಡುವದು ಶ್ರಮದ ಕೆಲಸವೆಂದು ತಿಳಿದು ಜನರು ಕಾಲುನ
ಯಿಂದಲೇ ಹೋಗುವರು. ಮುಂಬಯಿ ಸೈನ್ಯದ ನಾಯಕ ಹಾಗು ರಾಜಕುಲ
ತ್ಪನ್ನರಾದ ಡ್ಯೂಕ ಆಫ್ ಕ್ಯಾನಾಟ ಸಾಹೇಬರ ಆಗಮನದ ನೆನಪು ಚಿರಕ
ಉಳಿಯಬೇಕೆಂದು ಡೀವಾಕ ಸುಪರಿಂಟೆಂಡೆಂಟ ಸಾಹೇಬರು ಅವರ ಹೆಸ
ಟ್ಟಿರುವದರಿಂದ ಜನರು ಈ ವರೆಗೂ ಇದಕ್ಕೆ ಡ್ಯೂಕಪಾಯಿಂಟ ಅಥವಾ ಕನ
ಶಿಖರವೆಂದು ಅನ್ನುವರು.

ಕೇಟಿಸ:—ಇದಕ್ಕೆ ಮಹಾಬಳೇಶ್ವರದಲ್ಲಿಯ ಜನರು 'ನಾಕೇಖಿಂ
ಎಂದೆನ್ನುವರು. ಮಹಾಬಳೇಶ್ವರದಿಂದ ಪಾಂಚಗಣಿಗೆ ಹೋಗುವ ಹ
ಮಾರ್ಗದ ಬದಿಗೆ ಈ ಪಾಯಿಂಟು ಇರುವದು. ಪಾಯಿಂಟಿನ ಮೇಲಿದ್ದ ಗರ
ಒಂದು ಭಾಗವು ನೋಡಲು ಅರ್ಹವಾಗಿರುತ್ತದೆ. ಇಲ್ಲಿಂದ ನೋಡಲು ಅ
ಡೊಂಕಾಗಿ ಹರಿದಿರುವ ಕೃಷ್ಣಾನದಿಯ ಪ್ರವಾಹವೂ, ಸಣ್ಣ ಸಣ್ಣ ಅಸಂ
ಭತ್ತದ ಗದ್ದೆಗಳೂ ದೃಷ್ಟಿಗೆ ಬೀಳುವವು. ಮತ್ತು ಕಮಲಗಡ ಪಾಂಡವ
ಹಾಗೂ ಮಾಂಧರದೇವ ಎಂಬ ಹೆಸರಿನ ಗುಡ್ಡಗಳು ಭವ್ಯವಾಗಿ ತೋರುವ
ಪುಣೆ ಮಾರ್ಗದಿಂದ ಹೊರಟು ವೇಣ್ಣಾ ಸರೋವರವನ್ನು ನೋಡಿ ಹಾಗೆ
ಮುಂದೆ ೧॥ ಮೈಲು ಹೋದನಂತರ ಅಲ್ಲಿಂದೊಡೆದು ಮಾರ್ಗದಿಂದ ಕೇ
ಪಾಯಿಂಟಕ್ಕೆ ಹೋಗುವರು.

ಗವ್ಹರ್ನಮೆಂಟ ಹೌಸ ಮತ್ತು ಪ್ರಾಸಪೇಕ್ಟ.

ಇದರ ಎರಡನೇ ಹೆಸರು ಬೇಲಾವೇಸ್ಟಾ ಎಂಬ
ಗಿರುವದು. ಇದು ಪಶ್ಚಿಮ ದಿಕ್ಕಿಗಿರುವ ಗುಡ್ಡ
ಎತ್ತರವಾದ ಚೂಪಾದ ಭಾಗದಲ್ಲಿರುವದು. ಅಲ್ಲಿ
ಸ್ವಲ್ಪ ಅಂತರದ ಮೇಲಿರುವ ಪಾಯಿಂಟಕ್ಕೆ 'ಪ
ಪೇಕ್ಟ' ಪಾಯಿಂಟ ಎಂಬ ಹೆಸರಿರುವದು. ಗವ್ಹ
ರ್ನಮೆಂಟಹೌಸಕ್ಕೆ ಎರಡು ಅಂತಸ್ತುಗಳಿದ್ದು ಉಪ್ಪರಿಗೆಯ ಮುಂಭಾಗದಲ್ಲಿ ಅ

ತ್ತಮವಾದ ಗ್ಯಾಲರಿಯುಂಟು. ಇಲ್ಲಿಂದ ನಾಲ್ಕೂ ಕಡೆಗೆ ನೋಡಹತ್ತಲು ಆಯಾಭಾಗದ ಸೃಷ್ಟಿಸೌಂದರ್ಯವು ಪ್ರೇಕ್ಷಕರ ಮನಸ್ಸನ್ನು ಆಲ್ಹಾದಗೊಳಿಸುವದು. ಗವ್ಹರ್ನಮೆಂಟಹೌಸಿನ ಕಂಪಾಂಡಿನಲ್ಲಿಯೇ ಸಣ್ಣ ಸಣ್ಣ ಕಟ್ಟಡಗಳೂ, ವಿಶ್ರಾಂತಿಗಾಗಿ ತಯಾರಿಸಿದ ಉತ್ತಮ ಸ್ಥಳವೂ, ಬಿಲಿಯರ್ಡಹಾಲವೂ, ನೀರಿನ ಪಂಪವೂ ಇರುವವು. ಗವ್ಹರ್ನಮೆಂಟಹೌಸಿನಲ್ಲಿ ಗವ್ಹರ್ನರಸಾಹೇಬರಿರುವಾಗ ಅದನ್ನು ನೋಡಲಿಕ್ಕೆ ಹೋಗಬೇಕಾದಲ್ಲಿ ಪರವಾನಗಿಯನ್ನು ಪಡಕೊಳ್ಳಬೇಕಾಗುವದು. ಆದರೆ ಎಲ್ಲರಿಗೂ ಪರವಾನಗಿ ಸಿಕ್ಕೀತೆಂದು ನಿಶ್ಚಯವಾಗಿ ಹೇಳಲಿಕ್ಕಾಗದು.

ಈ ಬಂಗಲೆಯ ಮುಂಭಾಗದಲ್ಲಿ ಸುಶೋಭಿತ ಹೂದೋಟವೂ, ಟೇನಿಸ ಕೋರ್ಟವೂ ಇರುವವು. ಕಟ್ಟಡದ ಕೆಳಭಾಗದಲ್ಲಿದ್ದ ಪೋಲೋಗ್ರಾವುಂಡದ ಕ್ಷೇತ್ರವು ೧೨೦೦ ಚೌರಸ ಫೂಟು ಇರುವದು. ಈ ಮೊದಲು ಹೇಳಿದ ಪ್ರಾಸಪೆಕ್ಟ ಪಾಯಿಂಟಕ್ಕೆ ಹೋಗಿ ಸುತ್ತುಮುತ್ತಲೂ ನೋಡಹತ್ತಲಾಗಿ ಬಲಬದಿಗೆ ಎಲ್‌ಫಿನ್‌ಸ್ಟನ್, ಎಡಬದಿಗೆ ಮುಂಬಯಿ ಪಾಯಿಂಟುಗಳು ಮೂರ್ತಿಮಂತವಾಗಿ ಕಾಣಿಸುವವು. ಹಿಂಭಾಗದಲ್ಲಿದ್ದ ಹಸರುಮುರಿಯುವ ಪ್ರದೇಶದ ಶೋಭೆಯು ಅವರ್ಣನೀಯವಾಗಿರುವದು.

ಬ್ರೇಕವುಯಿಥ ಸಾಹೇಬರ ಗೋರಿ.

ಹಿಂದುಸ್ಥಾನದ ಸೈನ್ಯಾಧಿಪತಿಯಾದ ಬೇಕವುಯಿಥ ಸಾಹೇಬರು ಕ್ರಿ. ಶ. ೧೮೩೧ ರಲ್ಲಿ ಮಹಾಬಳೇಶ್ವರದಲ್ಲಿ ಪರಲೋಕವಾಸಿಗಳಾದರು. ಮಹಾಬಳೇಶ್ವರದಲ್ಲಿದ್ದ ಚರ್ಚದ ಹಿಂಭಾಗದ ಸಮೀಪದಲ್ಲಿಯೇ ಬಹಳ ಎತ್ತರವಾದ ಸ್ಥಳದ ಮೇಲೆ ಅವರ ಗೋರಿಯನ್ನು ಕಟ್ಟಿಸಿರುವರು. ಇದರ ಎತ್ತರವು ಸಮುದ್ರಸಪಾಟಿಯಿಂದ ಸರಾಸರಿ ೪೫೫೮ ಫೂಟು ಇರುವದು. ಪಾಂಚಗಣಿಯಿಂದ ಮಹಾಬಳೇಶ್ವರಕ್ಕೆ ಹೋಗಬೇಕಾಗಿ ಹೊರಟ ಜನರಿಗೆ ಎಷ್ಟೋ ಅಂತರದ ಮೇಲಿಂದ ಈ ಗೋರಿಯು ಕಾಣಿಸಹತ್ತುವದು. ಗೋರಿಯ ಮೇಲೆ ೩೦ ಫೂಟು ಎತ್ತರವಾದ ಚಚೌಕು ಸ್ತಂಭ (ಟಾವರ) ಉಂಟು. ಈ ಸ್ತಂಭವನ್ನು ಸಾಹೇಬರ ಮಿತ್ರರು ೩೦೦೦ ರೂಪಾಯಿ ವೆಚ್ಚಮಾಡಿ ಕಟ್ಟಿಸಿರುವರು. ಇದರ ಮೇಲೆ ಅವರ ಮಿತ್ರರದೊಂದು, ಹಾಗೂ ಪತ್ನಿಯದೊಂದು, ಹೀಗೆ ಎರಡು ಶಿಲಾಲೇಖಗಳಿರುತ್ತವೆ. ಸಾಹೇಬರು ಪಿಶಾಚಿಯಾಗಿ ಜನರನ್ನು ಪೀಡಿಸ

ತೊಡಗಿದರೆಂದು ಮೂಢಶ್ರದ್ಧೆಯುಳ್ಳ ಹಿಂದೂಜನರು ನೈವೇದ್ಯ, ಹಣ್ಣುಹಂಪ
ಗಳನ್ನು ಅರ್ಪಿಸುತ್ತಿದ್ದರಂತೆ.

ದಿಲೇಡಿನಾರ್ಥಕೋಟರಾಯಿಡ ಮತ್ತು ದಿನಾರ್ಥಕೋಟ ಪಾಯಿಂಟ.

ಬಬಿಂಗಟನ್ ಪಾಯಿಂಟದ ಕೆಳ
ದಿಯ ಮಾರ್ಗದಿಂದ ಸುಮಾ
ಒಂದೂ ಕಾಲು ಮೈಲು ಬ್ಲ್ಯಾವ್ಹ
ಕಡೆಗೆ ಬಲಬದಿಗೆ ಒಂದು ಮಾರ್ಗ
ಹತ್ತುವದು. ಅದಕ್ಕೆ ಮುಂಬಯಿ ಗವ್ಹರ್ನರರ ಪ್ರಿಯಪತ್ನಿಯ ಹೆಸರಿಟ್ಟಿರು
ಮೂಲಕ ಜನರು ದಿಲೇಡಿನಾರ್ಥ ಕೋಟರಾಯಿಡ ಎಂದೆನ್ನುವರು. ಆ ಮಾಗ
ವು ಸುಮಾರು ಎರಡು ಮೈಲು ಉದ್ದವಿದ್ದು, ಅದನ್ನು ನಾರ್ಥಕೋಟಸಾಹೇ
ಹಾಗು ಬೇರೆ ಇಂಗ್ಲಿಷ ಜನರು ತಮ್ಮ ತಮ್ಮ ಖಾಸಗಿ ಹಣವನ್ನು ವೆಚ್ಚಮಾ
ತಯಾರಿಸಿರುವರು. ಅದು ವಿಶಾಲವಾದ ಎತ್ತರಪ್ರದೇಶದ ಮೇಲಿದ್ದ ನಾರ್ಥ
ಕೋಟ ಪಾಯಿಂಟಕ್ಕೆ ಹೋಗಿರುವದು. ಮಾರ್ಗವು ಅಗಲವಿಲ್ಲದ್ದರಿಂದ ಬಂ
ಗಳು ಹೋಗುವಂತಿಲ್ಲ. ಮಾರ್ಗದ ಎರಡೂ ಬದಿಗೆ ದಟ್ಟ ಗಿಡಗಂಟಿ ಇ
ವದು. ಈ ದಾರಿಯಿಂದ ನಾರ್ಥಕೋಟ ಪಾಯಿಂಟಕ್ಕೆ ಹೋಗಿ ನೋಡಲ
ಮುಂಭಾಗದ ತಗ್ಗುಪ್ರದೇಶದಲ್ಲಿ ಹರಿದ ಕೊಯನಾ ನದಿಯ ದಂಡೆಯು ಪ್ರದ
ಶವು ದೃಷ್ಟಿಗೆ ಬೀಳುವದು. ಅಲ್ಲಿ ವಿಶೇಷವಾಗಿ ಹಬ್ಬಿದ ಗಿಡಗಂಟಿಯು ಬಹ
ಎತ್ತರವಿರುವ ಮೂಲಕ ಭಯಾನಕವಾಗಿ ತೋರುವದು. ಕೊಯನಾ ನದಿ
ದಂಡೆಯು ಪ್ರದೇಶದಲ್ಲಿ ಹುಲ್ಲೂ ಹಾಂಸೆ ವಿಶೇಷವಾಗಿರುವ ಮೂಲಕ ಆ ಪ್ರದ
ಶವು ಯಾವಾಗಲೂ ಹಸರುಮುರಿಯುತ್ತಿರುವದು. ನದಿಯು ದಂಡೆಯು ಗಿ
ಗಂಟಿಯಲ್ಲಿ ಹಿಂಸ್ರಪಶುಗಳು ಮನೆಮಾಡಿಕೊಂಡಿರುತ್ತವೆ. ಪಾಯಿಂಟದ ಎದು
ಗಿರುವ ಸಡಲ್ಬಗ್ಗ ಗುಡ್ಡದ ಮೇಲಿನ ಹುಲ್ಲನ್ನು ತಂದು ಮಾಲಕಪೇಠೆಯ
ಮಾರಿ ಬಡ ಜನರು ಹೊಟ್ಟೆತುಂಬಿಕೊಳ್ಳುತ್ತಿರುತ್ತಾರೆ.

ಮಾಲಕಮದಿನ್ನೆ:—ಮಾಲಕಮಪೇಠೆಯಿಂದ ಪೂರ್ವಕ್ಕೆ ಹೋಗ
ಕೆಲವು ಅಂತರದ ಮೇಲೆ ಒಂದು ದಿನ್ನೆಯು ಹತ್ತುವದು. ಅದಕ್ಕೆ ಮಾಲಕ
ದಿನ್ನೆ ಎಂದೆನ್ನುವರು. ಅದರ ಮೇಲೆ ಕಾರ ಹಾಗು ಹಾರ್ಡಿಂಗಸಾಹೇಬ
ಒಂದು ಅತ್ಯುತ್ತಮವಾದ ಬಂಗಲೆಯನ್ನು ಕಟ್ಟಿಸಿ ಅದರ ಮುಂದೆ ಆಟದ ಸ್ಥ
ವನ್ನು ತಯಾರಿಸಿ, ಸುತ್ತಲೂ ನಾನಾಪ್ರಕಾರದ ಹೂವಿನ ಗಿಡಗಳನ್ನು ಹ

ಬೇಕಾಗಿ ಉತ್ತಮ ವ್ಯವಸ್ಥೆಯನ್ನು ಮಾಡಿದ್ದರಷ್ಟೇ. ಆ ಬಂಗಲೆಯನ್ನು ಸಾಂಪ್ರತಕ್ಕೆ ಬೋಮನಜಿ ದಿನಶಾ ಪೇಟಿಟ್ ಇವರು ಖರೇದಿ ತೆಗೆದುಕೊಂಡು, ಮೊದಲಿಗಿಂತ ಉತ್ತಮ ಸ್ಥಿತಿಯಲ್ಲಿ ಇಟ್ಟಿರುವರು. ಬಂಗಲೆಯೊಳಗಿನ ಜನರು ಸುತ್ತುಮುತ್ತಲಿನ ಸೃಷ್ಟಿಸೌಂದರ್ಯವನ್ನು ನೋಡಿ ಆನಂದಪಡುವದೇನಾಶ್ಚರ್ಯ! ಆ ಬಂಗಲೆಗೆ 'ಮೌಂಟ ಚಾರ್ಲಟ' ಎಂದು ಅನ್ನುವ ರೂಢಿಯುಂಟು. ಕೆಳಬದಿಗಿರುವ ಕೆರೆಯನ್ನು ಬಿಶೆಪ್‌ಸಾಹೇಬರು ಕಟ್ಟಿಸಿರುವ ಮೂಲಕ ಅದಕ್ಕೆ ಬಿಶೆಪ್ ಕೆರೆ ಎಂದೆನ್ನುವರು. ಆ ದಿನ್ನೆಯ ಮೇಲಿಂದ ಪ್ರತಾಪಗಡದ ಪಶ್ಚಿಮ ಭಾಗವು ಸ್ಪಷ್ಟವಾಗಿ ತೋರುವದು. ಆ ಸ್ಥಳವು ಮಂದಮಾರುತನಿಂದ ದೊರೆಯುವ ಸುಖವನ್ನು ಪಡೆಯಲು ಯೋಗ್ಯವಾಗಿರುವದು.

ಧಬಧಬಿಗಳು:— ಮಹಾಬಳೇಶ್ವರದಲ್ಲಿ ಚೀನಿ, ಫಾಲ್ (ಧೋಬೀ) ವೇಣ್ಣಾ ಎಂಬ ಹೆಸರಿನ ಧಬಧಬೆಗಳಿರುತ್ತವೆ. ಅವುಗಳಿಗೆ ಚಳಿಗಾಲದಲ್ಲಿ ನೀರಿನ ಪೂರೈಕೆಯು ವಿಶೇಷವಿರುವ ಮೂಲಕ ಆ ಕಾಲದ ನೋಟವು ಪ್ರೇಕ್ಷಣೀಯವಾಗಿರುತ್ತದೆ. ಸಾಸೂನ, ಫಾಕಲಂಡ ಪಾಯಿಂಟುಗಳ ಮಧ್ಯದ ತಗ್ಗುಪ್ರದೇಶಗಳಲ್ಲಿ ಹರಿಯುವ ಹಳ್ಳಗಳ ನೀರು ಮಾಲಕಮಪೇಠೆಯ ಮಾರ್ಗದ ಬದಿಯಲ್ಲಿರುವ ಎತ್ತರ ಪ್ರದೇಶದ ಮೇಲಿಂದ ಚೀನೀಜನರ ತೋಟಗಳ ಸಮೀಪದಲ್ಲಿ ಹಾರಿಕೊಳ್ಳುವದರಿಂದ ಅದಕ್ಕೆ ಚೀನೀ ಧಬಧಬೆ ಎಂದೆನ್ನುವರು.

ಫಾಲ್ ಧಬಧಬೆಯ ನೀರು ಬಹಳ ಎತ್ತರವಾದ ಪ್ರದೇಶದ ಮೇಲಿಂದ ಬೀಳದಿದ್ದರೂ, ಅತಿಶಯ ಇಕ್ಕಟ್ಟಿನ ಸ್ಥಳದಲ್ಲಿ ಬೀಳುವದರಿಂದ ಅಲ್ಲಿಯ ನೋಟವು ಮನಸ್ಸಿಗೆ ವಿಶೇಷ ಚಮತ್ಕಾರವನ್ನುಂಟುಮಾಡುವದು. ಈ ಧಬಧಬೆಯು ಸಿಡ್ನಿ, ಎಲ್‌ಫಿನ್‌ಸ್ಟನ್ ಪಾಯಿಂಟುಗಳ ನಡುವಿರುವ ಮಾರ್ಗದ ಸಮೀಪದಲ್ಲಿರುತ್ತದೆ. ಮಹಾಬಳೇಶ್ವರ ಮಾರ್ಗದಿಂದ ಕೆಲವು ಅಂತರ ಹೋದಮೇಲೆ ಎಡಗಡೆಗೆ ಹಚ್ಚಿದ ಬೋರ್ಡು ದೃಷ್ಟಿಗೋಚರವಾಗುವದು. ಅದರ ಮೇಲೆ ಧೋಬೀ ಫಾಲ್ ಎಂದು ಇಂಗ್ಲಿಷ ಹಾಗು ಮರಾಠಿ ಅಕ್ಷರಗಳಿಂದ ಬರೆದಿರುತ್ತಾರೆ. ಅಲ್ಲಿಂದ ಫಾಲ್ ಧಬಧಬೆಗೆ ಮಾರ್ಗವು ಹೋಗಿರುವದು. ಆ ಮಾರ್ಗದಿಂದ ಜನರು ಕುದುರೆಗಳ ಮೇಲಿಂದಲೂ, ಕಾಲುನಡಿಗೆಯಿಂದಲೂ ಹೋಗುತ್ತಿರುತ್ತಾರೆ. ಧಬಧಬೆಯ ಸುತ್ತಲೂ ಗಿಡಗಂಟೆಯು ಹಬ್ಬಿರುವ ಮೂಲಕ ಆ ಪ್ರದೇಶವು

ಯಾವಾಗಲೂ ಹಸರುಮುರಿಯುತ್ತಿರುವದು. ಅಲ್ಲಿ ಬೇರೆ ಯಾವ ಪ್ರಕಾ
ಸಪ್ಪಳವಿರದೆ ನೀರಿನ ಸಪ್ಪಳಮಾತ್ರ ಕೇಳಿಸುತ್ತದೆ.

ಮಾಲಕಮಪೇಠೆಯ ಹತ್ತರ ಪಾಂಚಗಣಿ ಮಾರ್ಗದ ಬದಿಗೆ ಒಂ
ದೊಡ್ಡ ಸರೋವರವದೆ. ಅದರ ಕಡೆಗೆ ವೇಣ್ಯಾ ಧಬಧಬೆಯ ಜನಕತ್ವವಿ
ತ್ತದೆ. ಮಳೆಗಾಲದಲ್ಲಿ ಅತಿ ಪರ್ಜನ್ಯದ ಮೂಲಕ ಸರೋವರವು ತುಂಬಿತುಳ
ಹತ್ತಲು, ವೇಣ್ಯಾನದಿಯು ಅದರೊಳಗಿಂದ ಹೊರಬಿದ್ದು ಮೂರು ಮೈ
ಗಮಿಸಿದ ನಂತರ ೫೦೦ ಫೂಟು ಎತ್ತರವಾದ ಸ್ಥಳದ ಮೇಲಿಂದ ಕೆಳಗೆ ಹ
ಕೊಳ್ಳುವದು. ಅದಕ್ಕೆ ವೇಣ್ಯಾ ಧಬಧಬೆ ಎಂದೆನ್ನುವರು. ಅಲ್ಲಿಯ ಚಮತ್ಕಾ
ವನ್ನು ಎಷ್ಟು ಹೇಳಿದರೂ, ಪೂರ್ಣವಾಗದ ಮೂಲಕ ಪ್ರೇಕ್ಷಕರು ಪ್ರತ್ಯ
ಕಣ್ಣಿನಿಂದ ನೋಡಬೇಕಾಗಿ ಸೂಚನೆಯದೆ. ಅಲ್ಲಿಗೆ ಹೋಗಬೇಕಾದ ಕಾ
ದಾರಿಯು ಸಾತಾರೆಯ ಮಾರ್ಗದಿಂದ ಎರಡೂವರೆ ಮೈಲು ಹೋದ ಮೇ
ಎಡಬದಿಗೆ 'ಲಿಂಗಮಳಾ' ಬಂಗಲೆಯ ಹತ್ತರದಿಂದ ಒಡೆದಿರುವದು. ಇನ್ನೊಂ
ಮಾರ್ಗವು 'ಕೇಟ್ಸಪಾಯಿಂಟ' ದ ಹತ್ತರ ಪುಣೆ ಮಾರ್ಗದಿಂದ ಹೋಗಿ
ವದು. ಈ ಎರಡೂ ಮಾರ್ಗಗಳಲ್ಲಿ ಬೇಕಾದ ಮಾರ್ಗದಿಂದ ವೇಣ್ಯಾ ಧಬಧಬೆ
ಹೋಗಬಹುದು.

ನೋಡತಕ್ಕಂಥ ಪ್ರಸಿದ್ಧ ಐತಿಹಾಸಿಕ ಸ್ಥಳಗಳು.

ಮಹಾಬಳೇಶ್ವರದ ಸುತ್ತುಮುತ್ತಲಿನ ಐದು ಹತ್ತು ಮೈಲುಗಳ ಪ್ರದೇ
ದಲ್ಲಿಯ ಮಹತ್ವದ ಸ್ಥಳಗಳನ್ನು ನೋಡಬೇಕಾಗಿ ಶ್ರಮ ತಕ್ಕೊಂಡಲ್ಲಿ ಧಮ
ಶ್ರದ್ಧೆ, ಸೃಷ್ಟಿಸೌಂದರ್ಯಾವಲೋಕನಾಕಾಂಕ್ಷೆ, ಐತಿಹಾಸಿಕ ಸ್ಥಾನದರ್ಶನೇಚ್ಛೆ
ತೃಪ್ತವಾಗದಿರವು. ಪೃಥ್ವಿಯ ಮೇಲಿನ ಅಂಥ ಭವ್ಯ ಸ್ಥಳಗಳನ್ನು ನೋ
ಆಷ್ಟೊಂದು ಆನಂದ ಮತ್ತು ಸಮಾಧಾನ ಏಕೆ ಆಗುವದೆಂಬದಾಗಿ ಓವ
ಕವಿಗೆ ಸಂಶಯ ಬಂದು ಒಂದು ಪ್ರಕಾರದ ಭ್ರಮೆಯಾಯಿತು. ಆಗ ಅವ
ಎಷ್ಟೋ ವಿಚಾರಮಾಡಿ, ಈ ಪ್ರಕಾರದ ಭವ್ಯ ವಸ್ತುವಿನ ನಿರೀಕ್ಷಣದಿಂ
ಪ್ರೇಕ್ಷಕರಿಗೆ ಒಂದು ಪ್ರಕಾರದ ವಿಶ್ವಾಸವನ್ನುಂಟುಮಾಡುವ ಅಗಮ್ಯಶಕ್ತಿ
ಬೋಧವು ಮನಸ್ಸಿಗೆ ಕ್ಷಣಹೊತ್ತು ಆದಂತಾಗಿ, ಅನಿರ್ವಚನೀಯ ಆನಂದಸು
ದಲ್ಲಿ ಮುಳುಗಿಹೋಗಬೇಕಾಗುವದೆಂದು ತಿಳಿದು ತನ್ನ ಭ್ರಮನಿರಸನ ಮಾ

ಕೊಂಡನಂತೆ. ಆದುದರಿಂದ ಯಾವಾತನಿಗೆ ಅನುಕೂಲವಿರುವದೋ ಅಂಥ ಸ್ಥಳಗಳ ನೋಡುವಿಕೆಯಿಂದಾಗುವ, ಆನಂದದ ಅನುಭವ ತೆಗೆದುಕೊಳ್ಳುವ ಯೋಗ್ಯತೆಯು ಬಂದಿರುವದೋ ಆತನು ಎಂದಾದರೂ ಆಯಾ ಸ್ಥಳಗಳಿಗೆ ಹೋಗಬೇಕಾಗಿ ನಮ್ಮ ಹೇಳಿಕೆಯುಂಟು. ಮಹಾಬಳೇಶ್ವರದ ಸಮೀಪದಲ್ಲಿದ್ದ ಅಂಥ ಸ್ಥಳಗಳ ಅಲ್ಪ ಸ್ವಲ್ಪ ಮಾಹಿತಿಯನ್ನು ಕೆಳಗಡೆಯಲ್ಲಿ ಬರೆಯುತ್ತೇವೆ.

ಪ್ರತಾಪಗಡ:—ಪ್ರತಾಪಗಡ ಗ್ರಾಮವು ಮಹಾಬಳೇಶ್ವರದಂತೆಯೇ, ಘಟ್ಟದ ಮೇಲೆ ವಿರಾಜಮಾನವಾಗಿರುವದು. ಅದು ಮಹಾಬಳೇಶ್ವರದ ಪಶ್ಚಿಮ ದಿಕ್ಕಿಗೆ ಹತ್ತು ಮೈಲುಗಳ ಮೇಲಿರುವದು. ಜಾವಲೀಪ್ರಾಂತ ಹಾಗೂ ನೀರಾ ಮತ್ತು ಕೊಯನಾ ನದಿಗಳ ದಂಡೆಯು ಪ್ರದೇಶ, ಕೈವಶಮಾಡಿಕೊಂಡ ಮೇಲೆ ಅಲ್ಲಿ ಹೋಗಿಬರಲಿಕ್ಕೆ ಸುಲಭವಾಗಬೇಕೆಂತಲೂ, ಪಾರಘಟ್ಟದ ಮಹತ್ವದ ಪ್ರದೇಶವು ತನ್ನ ವಶದಲ್ಲಿರಬೇಕೆಂಬ ಉದ್ದೇಶದಿಂದಲೂ, ಘಟ್ಟದ ಸಮೀಪದ ದಿನ್ನೆಯ ಮೇಲೆ ಪ್ರತಾಪಗಡವೆಂಬ ಕೋಟೆಯನ್ನು ಶಿವಾಜಿಮಹಾರಾಜರು ಕಟ್ಟಿಸಿದರು. ಆದರ ಎತ್ತರವು ಸಮುದ್ರಸಪಾಟಿಯಿಂದ ಸರಾಸರಿ ೩೫೪೩ ಫೂಟು ಆಗುವದು. ಕೋಟೆಯು ಕೆಲಸವು ಸಾತಾರೆಯು ಪಿಂಗಳೆ ಮನೆತನದೊಳಗಿನ ಮೋರೋಪಂತ ಪೇಶವೆ ಅಥವಾ ಮುಖ್ಯ ಪ್ರಧಾನರ ಆಳಿಕೆಯಲ್ಲಿ ಕ್ರಿ. ಶ. ೧೬೫೬ ರಲ್ಲಿ ಮುಗಿಯಿತು. ಕೋಟೆಯು ಸುತ್ತಲೂ ಎರಡು ಸಾಲು ಕರೇಕಲ್ಲಿನ ಗೋಡೆಗಳಿದ್ದು ಅಲ್ಲಲ್ಲಿ ಹುಡೆಗಳುಂಟು. ಸಾಂಪ್ರತದಲ್ಲಿ ಅವು ಹಾಳಾಗತೊಡಗಿವೆ.

ಮಾಲಕಮಪೇಠೆಯು ಬದಿಯಿಂದ ಅಲ್ಲಿಗೆ ಹೋಗುವ ರಾಜಮಾರ್ಗದ ಮೇಲೆ ಬಂಡಿಗಳು ಬೇಕಾದ ಹಾಗೆ ಓಡಾಡುತ್ತಿರುವವು. ಅದು ಮುಂಬಯಿ ಪಾಯಿಂಟದ ಕೆಳಬದಿಯಲ್ಲಿ ಹಾಯ್ದು ಫಿಟರ್ಝೆರಲ್ಡ ಘಟ್ಟದ ಮೇಲಿಂದ ವಾಡೆಯುವರೆಗೆ ಹೋಗಿರುತ್ತದೆ. ಆ ಮಾರ್ಗ ಹಿಡಿದು ಹೋಗಹತ್ತಲು ಕೆಲವು ಅಂತರದ ಮೇಲೆ ವಡಗಾಂವ ಹತ್ತುವದು. ಅಲ್ಲಿ ಕೆಲಹೊತ್ತು ವಿಶ್ರಾಂತಿ ತೆಗೆದುಕೊಂಡ ಮೇಲೆ ಮುಂದೆ ಸ್ವಲ್ಪ ಅಂತರ ಗಮಿಸಿ, ಕೋಟೆಯು ಮೇಲೆ ಹತ್ತಲು ಟೊಂಕ ಕಟ್ಟಬೇಕು. ಕೋಟೆಯು ಕೆಳಬದಿಯಲ್ಲಿ ವಾಸಮಾಡುವ ಮಾವಳೆ ಜನರು ವೇಳೆಗನುಸರಿಸಿ ಎರಡು ಇಲ್ಲವೆ ಮೂರು ರೂಪಾಯಿಗಳನ್ನು ತೆಗೆದುಕೊಂಡು, ಡೋಲಿಯಲ್ಲಿ ಕೂಡ್ರಿಸಿ ನಿರಾಯಾಸದಿಂದ ಮೇಲ್ಬದಿಗೆ ಮುಟ್ಟಿಸಿ ತಿರುಗಿ ಕೆಳಬದಿಗೆ ತರು

ವರು. ಗುಡ್ಡದೊಳಗಿನ ಹಾದಿಯು ಎರಡೂ ಬದಿಗೆ ಗಿಡಗಳ ಸಾಲುಗಳಿರು
ದರಿಂದ ಹೋಗುವವರಿಗೆ ಬಹಳ ಶ್ರಮವಾದಂತೆನಿಸುವದಿಲ್ಲ. ಕೋಟೆಯು ಹೊ
ಬದಿಗೆ ಒಂದು ಗೋರಿ ಇದ್ದು ಅದರಲ್ಲಿ ಅಫಜುಲ್‌ಖಾನನ ತಲೆಯನ್ನು ಹುಗಿ
ರುವರೆಂಬಬಗ್ಗೆ ಆಖ್ಯಾಯಿಕೆಯುಂಟು. ಮೇಲೆ ಹೋಗಿ ನೋಡಹತ್ತಲು ಒಂ
ಡೆಗೆ ಮಹಾಬಳೇಶ್ವರ ಗುಡ್ಡಗಳ ಹಾಗು ಮತ್ತೊಂದೆಡೆಗೆ ಮಾವಳಪ್ರಾಂತ
ವಿಲಕ್ಷಣ ಶೋಭೆಯು ಕಾಣಿಸತೊಡಗುವದು. ಯಂತ್ರಸಹಾಯವಿಲ್ಲದೆ ಮ
ಷ್ಯರ ಕಡೆಯಿಂದಾದ ಅಲ್ಲಿಯ ಕೆಲಸವನ್ನು ನೋಡಿ, ಯಾರು ಆಶ್ಚರ್ಯಚಕಿ
ರಾಗಲಿಕ್ಕಿಲ್ಲ? ಎಡಗಡೆಯ ಮಾರ್ಗದಿಂದ ಒಳಗೆ ಹೋಗಲು ಭವಾನಿಯ ದೇವಾ
ಲಯವು ದೃಷ್ಟಿಗೋಚರವಾಗುವದು. ಆ ದೇವಾಲಯದ ಕಟ್ಟಡವು ಕ
ಕಲ್ಲುಗಳಿಂದ ಅತ್ಯುತ್ತಮವಾಗಿ ಕಟ್ಟಿದ್ದು ಅದರ ಸಭಾಮಂಟಪವು ಕಟ್ಟಿಗೆಂ
ದಾಗಿರುತ್ತದೆ. ಸಭಾಮಂಟಪವು ೫೦ ಫೂಟು ಉದ್ದ ೩೦ ಫೂಟು ಅಗ
೧೨ ಫೂಟು ಎತ್ತರವಿರುವದು. ಸಾತಾರೆಯ ಪ್ರತಾಪಸಿಂಹನು ಅದರ ಮೇಲ್ಬ
ಗಿರುವ ತಾಮ್ರದ ತಗಡನ್ನು ಅಚ್ಛಾದಿಸಿರುವನು.

ಗರ್ಭಗುಡಿಯ ಮಧ್ಯದಲ್ಲಿ ಕರೇಕಲ್ಲಿನ ಭವಾನಿಯ ಶಾಲುಂಕಾ ಮೂರ್ತಿ
ಯನ್ನು ಸ್ಥಾಪಿಸಿರುವರು. ಮೂರ್ತಿಯ ಸರಾಸರಿ ಎತ್ತರವು ಒಂದೂವರೆ ಫೂ
ಆಗುವದು. ಆಕೆಯ ಮೈಮೇಲಿನ ಅಮೂಲ್ಯವಾದ ಅಲಂಕಾರಗಳು ನೋಡತ
ವುಗಳಾಗಿವೆ. ಸೂರ್ಯೋದಯವಾದನಂತರ ಕನ್ನಡಿಯಿಂದ ಆಕೆಯ ಮೋ
ಯ ಮೇಲೆ ಕಿರಣಗಳನ್ನು ಕೆಡವಿ ನೋಡಿದಲ್ಲಿ ಮೂರ್ತಿಯು ಸ್ಪಷ್ಟವಾ
ಕಾಣಿಸುವದಲ್ಲದೆ ಮೋರೆಯ ಮೇಲಿನ ಉಗ್ರಕಳೆಯನ್ನೂ, ಅಲಂಕಾರಗಳನ
ನೋಡಿ ಬಹಳೇ ಚಮತ್ಕಾರವೆನಿಸುವದು. ಈ ಪ್ರಕಾರ ನೋಡುವದಕ್ಕಾಗಿ ಅ
ಒಂದು ಕನ್ನಡಿಯನ್ನು ಇಟ್ಟಿರುವರು. ಈ ದೇವಾಲಯವನ್ನು ಶ್ರೀಮನ್ ಛ
ಪತಿ ಶಿವಾಜಿಮಹಾರಾಜರು ಕಟ್ಟಿಸಿರುವರು. ಅಲ್ಲಿಯೇ ಕೇದಾರೇಶ್ವರನ ದೇವಾ
ಲಯವು ಪುರಾತನದ್ದಿರುವದು. ಶಿವಾಜಿಮಹಾರಾಜರು ಭವಾನಿ ದೇವಿಗಾ
ಐದುಸಾವಿರ ರೂಪಾಯಿಗಳ ಉತ್ಪನ್ನವನ್ನು ಮಾಡಿಟ್ಟಿದ್ದರು. ಸಾಂಪ್ರತ
ದಯಾಳು ಇಂಗ್ಲಿಷ ಸರಕಾರದವರು ಮೊದಲಿನ ಉತ್ಪನ್ನದ ಕೆಲವು ಭಾಗವನ
ನಡಿಸಿರುವರು. ಈ ಉತ್ಪನ್ನದಿಂದ ದೇವಿಯ ನಂದಾದೀಪ, ನವರಾತ್ರಿ
ಉತ್ಸವ, ಪ್ರತಿದಿವಸದ ಅನ್ನಛತ್ರ, ನೌಕರರ ಸಂಬಳ ಮೊದಲಾದ ಬಾಬು

ಖರ್ಚು ನಡೆಯುತ್ತದೆ. ಅದರ ಎಲ್ಲ ವ್ಯವಸ್ಥೆಯು ಪಂಚರ ಮಾರ್ಫತ ಆಗುವದು. ದೇವಿಯ ಗುಡಿಯ ಹೊರಬದಿಯಲ್ಲಿ ಎರಡು ಕೆರೆಗಳಿದ್ದು, ಅವುಗಳ ನೀರು ವಿಪುಲವಾಗಿರುವವಲ್ಲದೆ ಬಹಳೇ ಸ್ವಚ್ಛವಾಗಿರುವವು. ಪ್ರತಿದಿವಸ ದೇವಿಯ ಸೇವೆಯನ್ನು ಪೂಜಾರಿಗಳೂ, ಪುರಾಣಿಕರೂ, ಘಡಸೀಜನರೂ ತಪ್ಪದೆ ಮಾಡುತ್ತಿರುವರು. ಗಡದ ಮೇಲೆ ೨೦-೨೫ ಮನೆಗಳಿರುವವು. ಪಶ್ಚಿಮ ಹಾಗು ಉತ್ತರ ಭಾಗಕ್ಕಿರುವ ತಗ್ಗುಪ್ರದೇಶಗಳ ಆಳವು ಸರಾಸರಿ ೭೦೦–೮೦೦ ಫೂಟು ಆಗುವದು. ಅಂಥ ಸ್ಥಳದಲ್ಲಿ ನಿಂತು ಸೂರ್ಯಾಸ್ತದ ಸುಮಾರಕ್ಕೆ ಕೊಂಕಣಪಟ್ಟಿಯ ಕಡೆಗೆ ನೋಡಹತ್ತಲು ಸಮುದ್ರದಂಡೆಯು ಬಹು ರಮಣೀಯವಾಗಿ ತೋರುವದು. ಕೋಟೆಯ ಮುಂದಿನ ಬೈಲುಪ್ರದೇಶದ ಉದ್ದಳತೆಯು ಸುಮಾರು ಅರ್ಧ ಮೈಲು ಆಗುವದು. ಶಿವಾಜಿಮಹಾರಾಜರು ಪ್ರತಾಪಗಡದಲ್ಲಿದ್ದಾಗ ವಿಜಾಪುರದ ಬಾದಶಹನು ಅವನ ಸೊಕ್ಕನ್ನು ಮುರಿಯಬೇಕಾಗಿ ಅಫಜುಲ್‌ಖಾನನನ್ನು ಕಳಿಸಿದ್ದನು. ಅವರಿಬ್ಬರಿಗಾದ ಯುದ್ಧವು ಇತಿಹಾಸಪ್ರಸಿದ್ಧವಿರುವ ಮೂಲಕ ಇಲ್ಲಿ ಬರೆದಿಲ್ಲ.

ಮುಕರಂದಗಡ:— ಮಹಾಬಳೇಶ್ವರದ ಜನರು ಮಕರಂದಗಡಕ್ಕೆ ಘೋಣಸಪುರ ಎಂದು ಕರೆಯುತ್ತಿರುವರು. ಪ್ರತಾಪಗಡದಂತೆಯೇ ಈ ಕೋಟೆಯಾದರೂ ಇರುವದು. ಪ್ರತಾಪಗಡದಲ್ಲಿ ಯುದ್ಧವಾದಂತೆ ಮಕರಂದಗಡದಲ್ಲಿ ಆಗದ ಮೂಲಕ ಇದು ಇತಿಹಾಸಪ್ರಸಿದ್ಧವಾಗಿಲ್ಲ. ಕ್ರಿ. ಶ. ೧೬೫೬ ರಲ್ಲಿ ಶಿವಾಜಿಮಹಾರಾಜರು ಕೋಟೆಯ ಜೀರ್ಣೋದ್ಧಾರ ಮಾಡಿದರಂತೆ. ಕೋಟೆಯ ಎತ್ತರವು ಸಮುದ್ರಸಪಾಟಿಯಿಂದ ४೦೫೫ ಫೂಟು ಆಗುವದು. ಅದರ ಸುತ್ತಲಿನ ಪ್ರದೇಶವು ಉನ್ನತ ಹಾಗು ನಿಮ್ನವಿರುವದು. ಮಕರಂದಗಡವು ಮಾಲಕಮಪೇಠೆಯಿಂದ ದಕ್ಷಿಣದಿಕ್ಕಿಗೆ ಏಳು ಮೈಲು ಇರುತ್ತದೆ. ಕೋಟೆಯ ಹೊರಗಿನ ಸ್ವರೂಪದ ಮೇಲಿಂದ 'ಸಡಲ್‌ಬ್ಯಾಕ' ಹೀಗೆ ಹೆಸರು ಪ್ರಾಪ್ತವಾಗಿರುವದು. ಅದರ ಆಕಾರವು ಬಹಳೇ ವಿಚಿತ್ರವಾಗಿದ್ದು ಸಾಸೂನ, ಬಬಿಂಗಟನ್ ಪಾಯಿಂಟಗಳ ಮೇಲಿಂದ ಕಾಣಿಸುವದು. ಶಿಖರದ ಮೇಲೆ ಹೋಗಬೇಕಾದಲ್ಲಿ ೧೦–೧೨ ಮೈಲು ನಡೆಯಬೇಕಾಗುತ್ತದೆ. ಕಿಲ್ಲೆಯ ಮೇಲೆ ಹೋಗಲಿಕ್ಕೆ ಬಬಿಂಗಟನ್‌ದ ಆಚೆಮಗ್ಗಲಿಗೆ ಒಂದು ಕಾಲುದಾರಿಯುಂಟು. ಅದು ಮಾಂಘರ ಚತುರ್ಬೇಟ ಗ್ರಾಮಗಳ ಮೇಲಿಂದ ಘೋಣಸಪುರದ ಕಡೆಗೆ ಹೋಗಿರುವದು.

ಗುಡ್ಡದ ಪೂರ್ವಪಶ್ಚಿಮ ದಿಕ್ಕಿನಲ್ಲಿರುವ ಎರಡೂ ಶಿಖರಗಳ ಮೇಲೆ ಹೋಗಿ ನೋಡಲು ಮನಸ್ಸಿಗೆ ವಿಸ್ಮಯುವಾಗದಿರದು. ಅಲ್ಲಿಯೇ ಮಲ್ಲಿಕಾರ್ಜುನ ದೇವಾಲಯವಿದ್ದು ಅದು ದಿನೇ ದಿನೇ ಜೀರ್ಣವಾಗುತ್ತ ನಡೆದಿರುವದು. ಪೇಶ್ವೆಯು ಕಾಲಕೀರ್ದಿಯಲ್ಲಿದ್ದ ತಾಯಿಬಾಯಿ ಗಾಣಿಗೇರ ಇವಳು ಒಂದು ನೆಲಮ ಯನ್ನು ಅಗಿಸಿದ್ದಳು. ಪ್ರಕೃತಕ್ಕೆ ಅದರೊಳಗೆ ನೀರಿದ್ದು ಅವು ಬಹಳೇ ತಿ ಯಾಗಿರುವವು.

ಕಮಲಗಡ:—ಇದು ಅತ್ಯುತ್ತಮವಾಗಿ ಕಟ್ಟಿಸಿದ ಕೋಟೆಯು ನಾಲ್ಕೂ ಬದಿಗೆ ಗೋಡೆಯು ಹಾಗೆ ಗರಸಿನ ಭೂಮಿಯು ಇರುವದು. ಅ ವಿಜಾಪುರದ ಬಾದಶಹರ ಮಾಂಡಲಿಕರಾದ ಜಾವಲಿಯ ಚಂದ್ರರಾವ ಮೋ ಇವರು ಮೇಲಿಂದ ಮೇಲೆ ಹೋಗಿ ಬರುತ್ತಿದ್ದರು. ಕಮಲಗಡವನ್ನು ಕ್ರಿ. ಶ ೧೬೫೫ ರಲ್ಲಿ ಶಿವಾಜಿಮಹಾರಾಜರು ವಶಮಾಡಿಕೊಂಡರು. ಇದರ ಎತ್ತರವ ಸಮುದ್ರಸಪಾಟಿಯಿಂದ ೪೫೧೧ ಫೂಟು ಆಗುತ್ತದೆ. ಈ ದಿನ್ನೆಯು ಕೇ ಪಾಯಿಂಟದ ಉತ್ತರಕ್ಕಿರುತ್ತದೆ. ಕಮಲಗಡಕ್ಕೆ ಹೋಗುವವರು ಕೇ ಪಾಯಿಂಟದ ವರೆಗೆ ಬಂಡಿಯೊಳಗಿಂದ ಪ್ರವಾಸಮಾಡುವರು. ಆ ಮೇಲೆ ಸಿ ದಾರಿಯು ಘಟ್ಟದ ಕಾಲುದಾರಿಯಿಂದ ಕೆಳಗಿಳಿದು ವಯಿಗಾವಗ್ರಾಮ ಮೇಲಿಂದ ಕೃಷ್ಣಾ ನದಿಯು ಆಚೆಗೆ ಹೋಗಿ ಅಲ್ಲಿಂದ ನಾಂದಗಣಿ, ಪರತವಾ ಊರುಗಳನ್ನು ಎಡಬದಿಗೆ ಬಿಟ್ಟು, ಗುಡ್ಡದ ಮೇಲೆ ಏರಲಾರಂಭಿಸುವರು. ಅದ ಎತ್ತರವು ಸುಮಾರು ಮೂರು ಮೈಲು. ಗುಡ್ಡದ ಕೆಳಬದಿಯು ತಗ್ಗಿನಲ್ಲಿ ಕೃಷ್ಣ ಮತ್ತು ಜಾಂಬುಳ ಕೊಳ್ಳಗಳಿದ್ದು, ಅವುಗಳಲ್ಲಿ ಅನುಕ್ರಮವಾಗಿ ಕೃಷ್ಣಾ ಹಾಗ ವಲಖೀ ನದಿಗಳು ಹರಿಯುತ್ತಿರುವವು. ಕಿಲ್ಲೆಯ ಪೂರ್ವಭಾಗದಲ್ಲಿರು ವೇಲಂಗ ಗ್ರಾಮದ ಹತ್ತರ ಅವೆರಡೂ ನದಿಗಳ ಸಂಗಮವುಂಟು. ಕಮಲಗಡ ಸುತ್ತಲಿನ ಬೈಲುಪ್ರದೇಶದ ಕ್ಷೇತ್ರವು ಸರಾಸರಿ ೧೦-೧೨ ಎಕರೆ ಆಗುವದು ಅಲ್ಲಿಗೆ ಹೋಗಲಿಕ್ಕೆ ಪೂರ್ವದಲ್ಲಿ ಒಂದು ನೆಲಮಾರ್ಗವಿತ್ತು. ಆದರೆ ಅದು ಈ ಕಟ್ಟಾಗಿರುತ್ತದೆ. ಸಮೀಪದಲ್ಲಿರುವ ಬಾವಿಯು ಆಳವು ೩೦-೩೫ ಫೂಟು ಇದ್ದ ಯಾವಾಗಲೂ ನೀರಿನಿಂದ ತುಂಬಿತುಳುಕುತ್ತಿರುವದು. ಆ ಸ್ಥಳದ ಮೇ ಜನರ ವಸ್ತಿ ಇಲ್ಲ. ಎಲ್ಲಕಡೆಗೂ ಗಿಡಗಂಟಿಯು ಹಬ್ಬಿದ್ದು ಇಲ್ಲಿ ಒಂದು ಉತ್ತ ಮವಾದ ನೀರಿನ ಝುರಿಯೂ, ಗೋರಖನಾಥನ ದೇವಾಲಯವೂ ಉಂಟು

ಆ ಭಾಗದಲ್ಲಿ ಎಪ್ರೇಲ ತಿಂಗಳಲ್ಲಿ ಹಂದಿಗಳ ಕಾಟವು ಬಹಳವಾಗುತ್ತದಂತೆ.

ತುಡುಗರ ಗುಹೆ:—ಮಾಲಕಮಪೇಠೆಯಿಂದ ದಕ್ಷಿಣಕ್ಕೆ ಸುಮಾರು ಐದು ಮೈಲಿನ ಮೇಲಿರುವದು. ಇದನ್ನು ನೋಡಲಿಕ್ಕೆ ಬಹುಜನರು ಹೋಗು ತ್ತಿರುವರು. ಬಬಿಂಗಟನ್ ಪಾಯಿಂಟದಿಂದ ಒಂದು ಮಾರ್ಗವು ಒಡೆದಿದ್ದು ಅದರಿಂದ ಈ ಗುಹೆಗೆ ಹೋಗಬೇಕಾದ ಜನರು ಒಂದು ಮೈಲು ಬಂಡಿಯಲ್ಲಿ ಕೂತು ಪ್ರವಾಸಮಾಡಿ ಬಳಿಕ ಕಾಲುನಡಿಗೆಯಿಂದ ಹೋಗುವರು. ಈ ಗುಹೆಯ ಸಂಬಂಧದ ಅನುಮಾನಗಳು ನಾನಾಪ್ರಕಾರದವುಗಳಿರುವವು. ಆದರೆ ನಿಶ್ಚಯಾ ತ್ಮಕ ಯಾವ ಸಂಗತಿಯೂ ಗೊತ್ತಾಗಿಲ್ಲ. ನಮ್ಮಲ್ಲಿಯ ಕೆಲವರು ಇದು ಪೂರ್ವ ದಲ್ಲಿದ್ದ ರಾಕ್ಷಸರ ವಸತಿಸ್ಥಾನವೆಂದೂ, ಹಲವರು ಋಷಿಗಳ ತಪಶ್ಚರ್ಯದ ಗುಹೆ ಇರಬಹುದೆಂದೂ, ಆಧುನಿಕರು ಧಾವಡ ಜನರ ಕಬ್ಬಿಣ ಕಾರಖಾನೆ ಇದ್ದಾಗ ಅಲ್ಲಿಯ ಕಲ್ಲುಗಳನ್ನು ಒಯ್ದಿರುವ ಮೂಲಕ ಪೊಳ್ಳು ಪ್ರದೇಶವಾಗಿ ರುವದೆಂದೂ ತರ್ಕಿಸುವರು. ಗುಹೆಯ ಉದ್ದಳತೆ ಸುಮಾರು ೧೫೦ ಫೂಟು. ಅಗಲಳತೆ ೧೦ ಫೂಟು ಅಗಿರುವದು. ಇದು ಈಗೀಗ ಮಣ್ಣುಕಲ್ಲುಗಳಿಂದ ಮುಚ್ಚತೊಡಗಿದೆ. ಇದರ ಸುತ್ತಲೂ ದಟ್ಟವಾದ ಗಿಡಗಂಟಿ ಇರುವ ಮೂಲಕ ಹಿಂಸ್ರಪಶುಗಳ ವಾಸಸ್ಥಾನವಾಗಿದೆ.

ಪಾಂಡವಗಡ:—ಕಮಲಗಡದ ಆಚೇ ಮಗ್ಗಲಿಗೆ ಐದು ಮೈಲಿನ ಮೇಲೆ ಪಾಂಡವಗಡವಿರುತ್ತದೆ. ಮಾಲಕಮಪೇಠೆಯಿಂದ ಪಾಂಚಗಣಿಯವರೆಗೆ ಹೋಗಿ ತಾಯಘಟ್ಟದಲ್ಲಿ ಹಾಯ್ದು ಕಾಲುಮಾರ್ಗದಿಂದ ಕೆಳಗಿಳಿದು ಧಾವುಂ, ಅಖೇಪುರಿಗಳ ಮೇಲಿಂದ ಅಲ್ಲಿಗೆ ಹೋಗಬೇಕು. ಇದರ ಎತ್ತರವು ಸಮುದ್ರ ಸಪಾಟಿಯಿಂದ ಸರಾಸರಿ ೪೧೭೭ ಫೂಟು ಆಗುವದು. ಆ ಕೋಟೆಯು ಅತ್ಯು ತ್ತಮವಾಗಿ ಕಟ್ಟಲ್ಪಟ್ಟಿದೆ. ಕೋಟೆಯ ಮೇಲೆ ಹೋಗಿ ನೋಡಲು ಸುತ್ತಲಿನ ದೂರ ದೂರ ಪ್ರದೇಶದ ನೋಟವು ಮನಾನಂದವನ್ನುಂಟುಮಾಡುತ್ತದೆ. ಗಡದ ಮೇಲಿರುವ ನೀರು ಅತ್ಯುತ್ತಮವಾಗಿರುತ್ತವೆ. ಇಲ್ಲಿಯೇ ಪಾಂಡವರು ಅಜ್ಞಾತ ವಾಸದಲ್ಲಿದ್ದಾಗ ಅಡಗಿಕೊಂಡಿದ್ದರೆಂಬ ಬಗ್ಗೆ ಆಖ್ಯಾಯಿಕೆಯುಂಟು. ಗುಡ್ಡದ ಮೇಲ್ಬದಿಯಿಂದ ಬುಡದವರೆಗೆ ನೆಲವನ್ನು ಅಗಿದು ತಯಾರಿಸಿದ ಮೂರುನಾಲ್ಕು ಗುಪ್ತಮಾರ್ಗಗಳಿದ್ದು ಅವುಗಳಿಗೆ ‘ ಪಾಂಡೋದರ ’ ಎಂದೆನ್ನುತ್ತಾರೆ. ಸಾಂಪ್ರ ತಕ್ಕೆ ಅವು ದಿನೇ ದಿನೇ ಅಳಿಯತೊಡಗಿವೆ. ಗಡದಮೇಲೆ ಪಾಂಡವಜಾಯೀಮು

ಎಂಬ ಹೆಸರಿನ ದೇವಾಲಯವಿದ್ದು, ಇದರೊಳಗೆ ಪಾಂಡವರ ಸುಂದರವಾ
ಮೂರ್ತಿಗಳುಂಟು. ಮತ್ತು ಉತ್ತಮವಾದ ಮೂರು ಹೊಂಡಗಳೂ, ಒಂ
ಗವಿಯೂ, ಇರುವವು. ಈ ಸ್ಥಳದಲ್ಲಿ ವರ್ಷಕ್ಕೊಮ್ಮೆ ಜಾತ್ರೆಯು ನೆರೆಯುವದು

ರಾಜಪುರಿ:—ಪಾಂಚಗಣಿ ಗ್ರಾಮದ ಹಿಂಬದಿಯಲ್ಲಿ ಹಾಯ್ದು, ಕಾ
ಮಾರ್ಗದಿಂದ ಜನರು ರಾಜಪುರಿಗೆ ಹೋಗುವರು. ಈ ಮಾರ್ಗದಿಂದ ನಾ
ಮೈಲು ಹೋದಮೇಲೆ ಗುಡ್ಡದ ಮಧ್ಯಭಾಗದಲ್ಲಿ ತಯಾರಿಸಿದ ಗವಿಯು ಹ
ವದು. ಈ ಗವಿಯನ್ನು ಯಾರು ತಯಾರಿಸಿದರೆಂಬ ಮಾತು ಈ ವರೆಗೂ ಗೊ
ಗಿಲ್ಲ. ಗವಿಯ ಮುಂಭಾಗದ ವ್ಹರಾಂಡಿನಲ್ಲಿ ಎರಡು ಚಚ್ಚೌಕು ಹೊಂಡಗಳಿ
ಯಾವಾಗಲೂ ನೀರಿನಿಂದ ತುಂಬಿರುತ್ತವೆ. ಈ ನೀರು ಕ್ಷೇತ್ರ ಮಹಾಬಳೇಶ್ವರ
ನೀರಿನಂತೆ ಸೀ ಹಾಗೂ ತಂಪಿರುವವು, ಗವಿಯಲ್ಲಿ ಎರಡುಫೂಟು ಎತ್ತರವಾ
ಕಾರ್ತಿಕಸ್ವಾಮಿಯ ಮೂರ್ತಿಯುಂಟು. ಹಿಂದೂಧರ್ಮದ ಪ್ರಕಾರ ಆ ಮೂ
ಪೂಜೆಯನ್ನು ಗಂಡಸರಷ್ಟೇ ಮಾಡುತ್ತಿರುವರು. ಹೆಂಗಸರು ಮಾತ್ರ ಕಾತಿ
ಸ್ವಾಮಿಗೆ ಎಂದೂ ಹೋಗಲಾರರು. ಇಲ್ಲಿ ಕಾರ್ತಿಕ ಹುಣ್ಣಿವೆಗೆ ಜಾತ್ರೆ
ನೆರೆಯುವದು. ಈ ಸ್ಥಳವು ನೋಡಲು ಅಪ್ರತಿಮವಾಗಿರುತ್ತದೆ.

ಜನರು.

ಮಾಲಕಮಪೇಠೆಯ ಜನಸಂಖ್ಯೆ ಹಾಗು ಅದರ ಸುತ್ತಲಿನ ಅಡವಿಯ
ವಾಸಿಸುವ ಧಾವಡ ಜನರ ಸಂಖ್ಯೆಯು ಕೂಡಿ ಸರಾಸರಿ ೫೦೦೦ಕ್ಕೆ ಮಿಕ್ಕಿ
ತ್ತದೆ. ಇಲ್ಲಿಯ ಮೂಲನಿವಾಸಿಗಳಲ್ಲಿ ಕೋಳಿ, ಕುರುಬ, ಒಕ್ಕಲಿಗ, ಧಾವ
ಎಂಬ ನಾಲ್ಕು ಜಾತಿಗಳುಂಟು. ಆದರೆ ಉತ್ತರೋತ್ತರ ಮಾಲಕಮಪೇ
ಊರ್ಜಿತಾವಸ್ಥೆ ಬಂದಹಾಗೆ ವ್ಯಾಪಾರಿವರ್ಗಕ್ಕೆ ಲೋಭವುಂಟಾಗಿ ಅವ
ಅಂಗಡಿಗಳನ್ನು ಹಾಕಿ ವಾಸಮಾಡಹತ್ತಿದರು. ಆ ಮೂಲಕ ಸಾಂಪ್ರತ
ಯಾವತ್ತೂ ಜಾತಿಯ ಹಾಗೂ ಉದ್ಯೋಗದ ಜನರು ಮನೆಮಾಡಿಕೊಂಡು ಇ
ತ್ತಾರೆ. 'ಯಾವ ಸ್ಥಳದಲ್ಲಿ ಜೀವಿತ ಹಾಗು ವಿತ್ತಗಳಿಗೆ ಯಾವ ಪ್ರಕಾ
ಅಂಜಿಕೆ ಇರುವದಿಲ್ಲವೋ ಅಂಥಲ್ಲಿ ಹವೆ ನೀರುಗಳನ್ನು ಲಕ್ಷಿಸದೆ ಗೇಣುಹೊ
ಹೊರಕೊಳ್ಳುವದಾಗಿ ಜನರು ಹೋಗದಿರರು,' ಇದೇ ತತ್ವಕ್ಕನುಸರಿಸಿ ಬ್ರಾಹ್ಮ
ಮುಸಲ್ಮಾನ ಮಾರವಾಡಿ ಮೊದಲಾದ ಜಾತಿಯ ಜನರು ಲಾಭದಾಯಕ ವ್ಯಾ

ರೋದ್ಯೋಗಗಳನ್ನು ಮಾಡುತ್ತಿರುತ್ತಾರೆ. ಯಾವ ಸ್ಥಳದಲ್ಲಿ ಬಣಜಿಗ ಮಾರವಾಡಿ ಜನರಿರುವರೋ ಅಂಥದಲ್ಲಿ ಅಂಗಡಿಗಳಿಲ್ಲೆಂಬದು ಕಾಲತ್ರಯದಲ್ಲಿಯೂ ಆಗಿಲ್ಲ. ಈ ಕಾರಣದಿಂದಲೇ ಇಲ್ಲಿ ಅವರ ಅಂಗಡಿಗಳು ವಿಶೇಷವಾಗಿರುವವು.

ಇಲ್ಲಿ ಕುರುಬ ಮತ್ತು ಕೋಳಿಜನರ ಸಂಖ್ಯೆಗಿಂತ ಒಕ್ಕಲಿಗ ಹಾಗು ಥಾವಡ ಜನರ ಸಂಖ್ಯೆಯು ಹೆಚ್ಚಾಗಿರುವದು. ಈ ನಾಲ್ಕೂ ಜಾತಿಯ ಜನರ ಮುಖಮುದ್ರೆ, ಮಾತುಕಥೆಗಳಲ್ಲಿ ಎಷ್ಟೋ ಅಭ್ಯಂತರವಿರುತ್ತದೆ. ಇವರಲ್ಲಿ ಕೋಳಿಜನರು ಬಹಳ ಜಾಣರಿರುವರು. ಇವರ ಶರೀರವು ಅಚ್ಚುಕಟ್ಟಿನದಿದ್ದು, ಎದೆಯು ಹರವಾಗಿರುವದು. ಕೋಳೀಜನರು ಒಕ್ಕಲತನ, ಕೂಲಿ, ಜೇನುಬಿಡಿಸುವ ಉದ್ಯೋಗಗಳನ್ನು ಮಾಡುತ್ತಿರುತ್ತಾರೆ. ಒಕ್ಕಲಿಗರು ಸದೃಢರಾಗಿದ್ದು ಯಾವಾಗಲೂ ಹೊಲಗಳಲ್ಲಿರುವರು. ಕುರುಬರು ಪೂರ್ವದಲ್ಲಿ ಹಾಲು ಬೆಣ್ಣೆಗಳ ವ್ಯಾಪಾರ ಮಾಡುತ್ತಿದ್ದರು. ಅವರ ಸ್ವಭಾವವು ಸಿಟ್ಟಿನದಲ್ಲ. ಶರೀರವು ಕೃಶವಾಗಿದ್ದರೂ ಬೇಕಾದಂಥ ಶ್ರಮದ ಕೆಲಸಗಳನ್ನು ಮಾಡಲು ಬಲು ಗಟ್ಟಿಗರು. ಈ ಜನರು ದನಗಳನ್ನು ಸಾಕಿ ತಮ್ಮ ಕುಟುಂಬದ ಪೋಷಣೆಯನ್ನು ಮಾಡುವರು. ಅವರ ಹತ್ತರ ಕುರಿಗಳು ಅಲ್ಪಸ್ವಲ್ಪ ಇರುವವು.

ಥಾವಡ ಜನರು ಕರ್ಹಾಡ ಗ್ರಾಮದಿಂದ ನೂರು ವರ್ಷಗಳ ಹಿಂದೆ ಇಲ್ಲಿಗೆ ಬಂದರು. ಇವರು ಶ್ರಮಸಹಿಷ್ಣುಗಳು. ಇವರ ಗಲ್ಲೆಲವುಗಳು ಎತ್ತರ, ಕಣ್ಣುಗಳು ಸಣ್ಣವು; ತುಟಿ ದಪ್ಪ ಹಾಗು ವರ್ಣವು ಕಪ್ಪಾಗಿರುವದು. ಇವರ ಕಬ್ಬಿಣ ತೆಗೆಯುವ ಹೋರೆಯು ಕಟ್ಟಾದ ಮೂಲಕ ಹೊಲಗಳನ್ನು ತಕ್ಕೊಂಡು ಒಕ್ಕಲತನವನ್ನು ಮಾಡಲಾರಂಭಿಸಿದರು. ಇವರಷ್ಟು ಶ್ರಮದ ಕೆಲಸವು ಬೇರೆ ಜಾತಿಯ ಜನರಿಂದ ಆಗುವದಿಲ್ಲ. ಇಲ್ಲಿ ಇವರ ವಸ್ತಿಯು ಬಹಳವಿದ್ದು ಯಾವತ್ತು ಜನರು ಕೂಲಿಯನ್ನು ಹೆಚ್ಚಾಗಿ ಮಾಡಿ ಯಾವಾಗಲೂ ಆನಂದದಲ್ಲಿರುತ್ತಾರೆ.

ಉದ್ಯೋಗ:—ಉದ್ಯೋಗಗಳಲ್ಲಿ ನಿಯಾಮಕ ಹಾಗು ಉತ್ಪಾದಕಗಳೆಂಬ ಎರಡು ಭೇದಗಳುಂಟು. ಮೊದಲನೆಯದರಲ್ಲಿ ಅರಸು, ಮಂತ್ರಿ, ಸಿಪಾಯಿ ಮೊದಲಾದ ಸಮಾಜಯಂತ್ರದ ಚಾಲಕರು ಅಥವಾ ವ್ಯವಸ್ಥಾಪಕರು ಬರುತ್ತಾರೆ. ಎರಡನೆಯದರಲ್ಲಿ ಒಕ್ಕಲಿಗ, ನೇಕಾರ, ಬಡಿಗ ಮೊದಲಾದ ಜನರು ಬರುತ್ತಾರೆ. ಇಲ್ಲಿಯ ಯಾವತ್ತು ಜನರು ಬಹಳ ಮಾಡಿ ಎರಡನೇ ಪ್ರಕಾರದ

ಉದ್ಯೋಗಿಗಳಾಗಿರುವರು. ಒಕ್ಕಲತನ, ವ್ಯಾಪಾರ, ಕೂಲಿ ಇವೇ ಇಲ್ಲಿಯ
ಮುಖ್ಯ ಹೋರೆಗಳು.

ಭಾಷೆ:—ಮುಸಲ್ಮಾನ ಮತ್ತು ಧಾವಡ ಜನರ ಹೊರ್ತು ಉಳಿದವ
ಮರಾಠಿ ಭಾಷೆಯನ್ನಾಡುವರು. ಮುಸಲ್ಮಾನರು ಮುಸಲ್ಮಾನೀ ಭಾಷೆಯನ್ನೂ
ಧಾವಡ ಜನರು ಹಿಂದುಸ್ತಾನೀ ಶಬ್ದಗಳಿಂದ ಕೂಡಿದ ಮರಾಠೀಭಾಷೆಯನ್ನೂ
ಆಡುವರು. ಇದಲ್ಲದೆ ಗುಜರಾಥೀ, ಮಾರವಾಡೀ ಇಂಗ್ಲಿಷಭಾಷೆಗಳು ಕೊಂ
ಮಟ್ಟಿಗೆ ನಡೆಯುತ್ತವೆ.

ಪೇಠೆ:—ಕ್ರಿಸ್ತದೇವಾಲಯದ ದಕ್ಷಿಣಕ್ಕೆ ಜನದಟ್ಟಣೆಯು ವಿಶೇ
ವಿರುವ ಸ್ಥಳದಲ್ಲಿ ಪೇಠೆ ಇರುತ್ತದೆ. ಈ ಮಾಲಕಮಪೇಠೆಯಲ್ಲಿ ಪೂರ್ವಪಶ್ಚಿ
ಎರಡೂಮಗ್ಗಲು, ಮನೆಗಳಿಂದೊಡಗೂಡಿದ ಮೂರು ಮಾರ್ಗಗಳುಂಟು. ಅ
ಗಳಲ್ಲಿ ಎರಡು ಮಾರ್ಗಗಳ ಬದಿಗೆ ಅಂಗಡಿಗಳಿದ್ದು, ಅಲ್ಲಿ ಜನರು ಯಾವಾ
ಲೂ, ವಾಸಮಾಡಿಕೊಂಡಿರುತ್ತಾರೆ. ಕ್ರಿಸ್ತದೇವಾಲಯದ ಸಮೀಪದಲ್ಲಿ ಮಾತ್ರ
ಏಳೆಂಟು ಮನೆಗಳುಂಟು. ಇಲ್ಲಿ ನಿಲ್ಲುವಂಥ ಯಾವತ್ತು ಜನರು ವ್ಯಾಪಾ
ಸ್ಥರೂ, ನೌಕರರೂ ಆಗಿರುವರು. ಪೇಠೆಯ ಕ್ಷೇತ್ರವು ಸರಾಸರಿ ೨೪ ಎಕ
ಆಗುತ್ತದೆ. ಪೇಠೆಯ ಮಧ್ಯಭಾಗದಲ್ಲಿ ಎಲ್ಲ ಪ್ರಕಾರದ ಅಂಗಡಿಗಳಿರುತ್ತ
ಈ ಭಾಗಕ್ಕೆಯೇ ಮುಖ್ಯವಾಗಿ ಮಾಲಕಮಪೇಠೆ ಎಂದೆನ್ನುವರು. ಅಂಗಡಿಗ
ಹಿಂಬದಿಯಲ್ಲಿ ವ್ಯಾಪಾರಸ್ಥರ ಕುಂಟುಂಬದವರಿರುವರು. ಬ್ರಾಹ್ಮಣ, ಪಾಸಿ
ಕುರುಬ, ಮಾರವಾಡಿ, ಮುಸಲ್ಮಾನ, ಬಣಜಿಗ, ಚರ್ಮಗಾರ ಮೊದಲಾ
ಜಾತಿಯ ಜನರ ವಸ್ತಿಯುಂಟು. ಈ ಜಾತಿಯವರ ಅಂಗಡಿಗಳು ಬಹುತರವಾ
ಇರುವವು. ಅವುಗಳಲ್ಲಿ ಎಲ್ಲ ಪ್ರಕಾರದ ಸಾಮಾನುಗಳು ದೊರೆಯುತ್ತವೆ. ಆದ
ಸರಕು ಸಾತಾರೆ ವಾಯಿಗಳ ಕಡೆಯಿಂದ ಬರುವ ಮೂಲಕ ತುಟ್ಟಿಯಾಗಿ ದೊ
ಯುವದು.

ಬ್ರಾಹ್ಮಣ:—ಇವರು ಬಡ್ಡಿಯ ವ್ಯವಹಾರ, ಕಾಗದಪತ್ರಗಳನ್ನು ಬ
ಯುವ ಕೆಲಸವನ್ನು ಮಾಡುವವರಲ್ಲದೆ ಸರಾಫಿ ಅಂಗಡಿಗಳನ್ನು ಹಾಕಿರುತ್ತಾ

ಪಾರ್ಸಿ:—ಇವರು ಮೇಲ್ಕಂತ್ರಾಟದಾರರ ಕೆಲಸವನ್ನು ಮಾಡುವದಲ್ಲ
ವಾಹನಗಳನ್ನು ಜನರಿಗೆ ಬಾಡಿಗೆಯಿಂದ ಕೊಡೋಣ, ಇಂಗ್ಲಿಷರಿಗೆ ಬೇಕಾ

ವಂಥ ಪದಾರ್ಥಗಳನ್ನು ಪೂರೈಸೋಣ, ಬರ್ಫ ಸೋಡಾವಾಟರಗಳ ಅಂಗಡಿಗಳನ್ನಿಡೋಣ ಮುಂತಾದ ಕೆಲಸಗಳನ್ನು ಮಾಡುತ್ತಾರೆ

ಮುಸಲ್ಮಾನ:—ಚಾವಡಿಯ ಹತ್ತರ ಮ್ಯುನಸಿಪಾಲ್ಟಿಯವರು ಕಟ್ಟಿಸಿದ ಮಾರ್ಕೇಟಿನಲ್ಲಿ ಮುಸಲ್ಮಾನರ ಕಾಯಿಪಲ್ಲೆ ಹಾಗೂ ಹಣ್ಣುಹಂಪಲಗಳ ಅಂಗಡಿಗಳುಂಟು. ಹಂಗಾಮದ ದಿವಸಗಳಲ್ಲಿ ಬಟಾಟೆ, ಕೋಬಿ, ಫುಲಾವರ, ನವಲಕೋರ, ಬೀಟ, ಬಟಗಡ್ಲೆ ಮೊದಲಾದ ಇಂಗ್ರಜಿ ಪಲ್ಲೆಗಳೂ, ಬೆಂಡೆ, ಬದನೆ, ಅವರೆ, ಹಾಗಲಹಣ್ಣು, ಉಳ್ಳೇಗಡ್ಡಿ ಮೊದಲಾದ ಏತದ್ದೇಶೀಯ ಪಲ್ಲೆಗಳೂ, ಸ್ಟ್ರಾಬೇರಿ, ರಾಜಬೇರಿ, ಗುಜಬೇರಿ ಮೊದಲಾದ ಹಣ್ಣುಗಳೂ, ನಾಗಪುರ ಕಡೆಯ ಹಣ್ಣುಗಳೂ ವಸಯಿಯ ಕೆಂಪು ಬಾಳೇಹಣ್ಣುಗಳೂ, ರತ್ನಾಗಿರಿ ಗೋವಾಂತಿಕೆಗಳ ಹಾಪೂಸ, ಪಾಯರಿ ಮಾವುಗಳೂ, ಪುಣೆಪ್ರಾಂತದ ಕಿತ್ತಳಿ ಹಣ್ಣುಗಳೂ, ಸಪ್ಪರಚಂದ, ಅಂಜೀರು, ದ್ರಾಕ್ಷ, ಚಕೋತ್ರಿ, ಪೇರಲ, ಅನನಸ, ಬಾಳೆ, ಕವಳಿ, ನೀರಲ, ಲಿಂಬಿ ಮೊದಲಾದ ಏತದ್ದೇಶೀಯ ಹಣ್ಣುಗಳೂ ಕಾಲಾನುಸಾರವಾಗಿ ಆಯಾ ಅಂಗಡಿಗಳಲ್ಲಿ ದೊರೆಯುತ್ತಿರುತ್ತವೆ. ಹಣ್ಣುಹಂಪಲ, ಕಾಯಿಪಲ್ಲೆಗಳ ಮಾರಾಟವನ್ನು ಮುಸಲ್ಮಾನರು ಹೆಚ್ಚಾಗಿ ಮಾಡುತ್ತಿರುವರು.

ಮರಾಠಾ, ಕುರುಬ, ಒಕ್ಕಲಿಗರು.

ಇಲ್ಲಿ ಮರಾಠಾ, ಕುರುಬರು ಆಕಳು, ಎಮ್ಮೆಗಳನ್ನು ಸಾಕಿ, ಅವುಗಳ ಹಾಲು ಬೆಣ್ಣೆಗಳ ವ್ಯಾಪಾರ ಮಾಡುವರು. ಈ ಮಾತನ್ನು ಮೊದಲು ಹೇಳಿರುತ್ತದಷ್ಟೇ! ಸೀಝುನದ ದಿವಸಗಳಲ್ಲಿ ವಾಯಿಗ್ರಾಮದ ಗೌಳಿಗರು ಇಲ್ಲಿಗೆ ಬಂದು ಹಾಲಿನ ವ್ಯಾಪಾರವನ್ನು ಮಾಡುವರು. ಅಲ್ಲದೆ ಸಮೀಪದಲ್ಲಿಯ ಹಳ್ಳಿಯ ಜನರು ಬೆಣ್ಣೆಯನ್ನು ತಂದು ಮಾರಾಟ ಮಾಡುತ್ತಿರುವರು. ಮತ್ತು ಪಾಂಚಗಣಿ ಹಾಗು ಮುಂಬಯಿ ಕಡೆಯಿಂದ ಇಲ್ಲಿ ಬೆಣ್ಣೆಯು ಬರುತ್ತದೆ: ಅದನ್ನು ಪಾರ್ಸಿ ಇಂಗ್ಲಿಷ ಜನರು ತೆಗೆದುಕೊಳ್ಳುವರು.

ಮಾರವಾಡಿ:—ಕಪ್ಪಡ ಹಾಗು ಧಾನ್ಯ, ಕಿರಾಣಿ ಮೊದಲಾದ ಪದಾರ್ಥಗಳ ಅಂಗಡಿಗಳನ್ನು ಹಾಕಿ ವ್ಯಾಪಾರ ಮಾಡುತ್ತಿರುವರು.

ಸಿಂಪಿಗರು:—ಇವರ ಅಂಗಡಿಗಳು ಇಲ್ಲಿ ಬಹಳವಿರುತ್ತವೆ. ಅವರಲ್ಲಿ ಕೆಲವರು ಕಪ್ಪಡದ ವ್ಯಾಪಾರ ಮಾಡುವವರಲ್ಲದೆ, ಹೊಲಿಗೆಯ ಕೆಲಸವನ್ನು

ದರೂ ಮಾಡುವರು. ಮಳೆಗಾಲದಲ್ಲಿ ಕೆಲಸವಿಲ್ಲದ ಮೂಲಕ ಬಹಳ ಮ
ಬೇರೆ ಸ್ಥಳಗಳಿಗೆ ಹೋಗುವರು.

ಬಣಜಿಗ, ಗುಜ್ಜರು:—ಇವರ ಕಿರಾಣಿ, ಭುಸಾರಿ, ಸ್ಟೇಶನರಿ ಅಂ
ಗಳಿದ್ದು ಆಯಾ ಅಂಗಡಿಗಳಲ್ಲಿ ಎಲ್ಲ ಪ್ರಕಾರದ, ಸಾಮಾನುಗಳು ದೊರೆಯುತ್ತ
ಅಲ್ಲದೆ ಎಲ್ಲ ಬಗೆಯ ಧಾನ್ಯಗಳ ಹಿಟ್ಟೂ ಸಿಗುತ್ತದೆ.

ರೋಟಿವಾಲೆ:—ಮಹಾಬಳೇಶ್ವರದಲ್ಲಿ ರೋಟಗಳು ಉತ್ತಮ ತರ
ದೊರೆಯುವವು. ಆದರೆ ಇಪ್ಪತ್ತು ವರ್ಷಗಳ ಪೂರ್ವದಲ್ಲಿ ಸಿಗುತ್ತಿದ್ದ ಅಪ್ರತಿ
ವಾದ ರೋಟುಗಳು ಮಾತ್ರ ಈಗ ದೊರೆಯುವದಿಲ್ಲ. ಕಾರಣ ಸಿಂದಿಯು ಮ
ಕರವು ಕೂತ ಮೂಲಕ ಇಲ್ಲಿಗೆ ತಂದು ಮಾರಲಿಕ್ಕೆ ಪೂರೈಸುವದಿಲ್ಲ. ಆದ
ರಿಂದ ಬಟಾಟೆ ಹಾಗು ವನಸ್ಪತಿಗಳ ಸೆರೆಯು ಉಪಯೋಗವನ್ನು ರೋಟಿ
ಮಾಡುವರು. ಆ ಮೂಲಕ ಸಿಂದಿಯಿಂದ ತಯಾರಿಸಿದ ರೋಟುಗಳಷ್ಟು ಉತ್ತ
ರೋಟುಗಳಾಗುವದಿಲ್ಲ.

ಬೋಹರಿ, ಮೇಮನ್:—ಇವರ ಅಂಗಡಿಗಳಲ್ಲಿ ಕಾಚಿನ ಸಾಮಾನುಗ
ಕಪ್ಪು, ಬಸಿ, ಸ್ಕ್ರೂಮೊಳೆ, ಬೇರೆ ಇತರ ಸ್ಟೇಶನರಿ ಸಾಮಾನುಗಳು ದೊರೆಯು
ವಲ್ಲದೆ ತುಪ್ಪ, ಮೇಣ ಮೊದಲಾದವುಗಳು ಸಿಗುವವು.

ಧಾವಡ:—ಇವರು ಕೂಲಿ, ಮನೆಕಟ್ಟುವ ಕೆಲಸ, ಒಕ್ಕಲತನ ಮಾ
ವರಲ್ಲದೆ, ಅಡವಿಯೊಳಗಿನ ನಾನಾ ಪ್ರಕಾರದ ಕಟ್ಟಿಗೆಗಳನ್ನು ತಂದು ಮಾ
ತ್ತಾರೆ. ಎಷ್ಟೋ ಜನರು ಹಮಾಲಿಯ ಕೆಲಸವನ್ನಾದರೂ ಮಾಡುತ್ತಾರೆ.

ಚರ್ಮಗಾರ:—ಈ ಜನರು ಬೂಟು, ಸ್ಲೀಪರಗಳನ್ನು ಉತ್ತಮವಾ
ತಯಾರಿಸುವರು. ಮೊಚ್ಚೆಗಳನ್ನು ಮಾಡುವ ಜನರು ಮಾತ್ರ ತೀರ ಕಡಿಮೆ.

ಬುರುಡರು, (ಮೇದಾರ):—ಇವರು ಬೆತ್ತಿನ ಬುಟ್ಟಿಗಳನ
ಕುರ್ಚಿ ಮೊದಲಾದ ಹೆಣಿಕೆಯ ಕೆಲಸಗಳನ್ನು ಅತ್ಯುತ್ತಮವಾಗಿ ಮಾಡುವ
ಅಲ್ಲಿ ಬಿದಿರಿನ ಬುಟ್ಟಿ, ಪರದೆ (ತಟ್ಟಿ) ಗಳನ್ನು ತಯಾರಿಸುವರು.

ಕಟೆಕರು:—ಕಾಯಿಪಲ್ಲೆ ಅಂಗಡಿಗಳ ಹತ್ತರ 'ಮಟನ್' ಮಾರ್ಕೇ
ಇರುವದು. ಇಲ್ಲಿ ಕುರಿಗಳ ಮಾಂಸ, ಕೋಳೀ ತತ್ತಿಗಳು ದೊರೆಯುತ್ತ

ಇದರ ಸಮೀಪದಲ್ಲಿಯೇ ‘ ಬೀಫ್ ’ (ಗೋಮಾಂಸ) ಮಾರುವ ಪೇಠೆಯುಂಟು.

ಇವರ ಹೊರ್ತು ಬಂಡಿಗಳನ್ನು ನೆಟ್ಟಗೆ ಮಾಡುವವರೂ ತಗಡಿನ ಡಬ್ಬಿ ಕಂದೀಲುಗಳನ್ನು ಮಾಡುವವರೂ, ಫರ್ನಿಚರಗಳನ್ನು ಬಾಡಿಗೆಯಿಂದ ಕೊಡುವ ಹೌಸ ಏಜಂಟರೂ, ಇರುತ್ತಾರೆ. ದವಾಖಾನೆಯ ಹತ್ತರ ಟ್ರೇಚರ ಕಂಪನಿಯು ಔಷಧ ಹಾಗು ಇಂಗ್ಲಿಷರ ಊಟದ ಪದಾರ್ಥಗಳು ದೊರೆಯುವ ಅಂಗಡಿಗಳಿವೆ.

ಇಲ್ಲಿ ಕಟ್ಟಿಗೆ ಹಾಗು ಇದ್ದಲಿಗಳು ಬಹಳ ಅಗ್ಗವಾಗಿ ದೊರೆಯುವವು. ಅವುಗಳನ್ನು ಧಾವಡ ಒಕ್ಕಲಿಗ ಜನರು ಅಡವಿಯೊಳಗಿಂದ ತಂದು ಮಾರುತ್ತಾರೆ. ಹುಲ್ಲಾದರೂ ಪ್ರತಿದಿವಸ ಬಹಳೇ ಮಾರಾಟವಾಗುವದು. ಇದು ಬಟಾಟೆ, ಮೇಣ, ಜೇನತುಪ್ಪ ಇವುಗಳ ಅಗ್ರಸ್ಥಳವಾಗಿರುತ್ತದೆ. ಕೋಳೀ ಜನರು ಅಡವಿಯೊಳಗಿನ ಸಾವಿರಾರು ರೂಪಾಯಿಗಳ ಜೇನತುಪ್ಪನ್ನು ತಂದು ಪೇಠೆಯಲ್ಲಿ ಮಾರುತ್ತಿದ್ದರಂತೆ. ಕೊರಿಸಿ ತಯಾರಿಸಿದ ಕಟ್ಟಿಗೆಯ ಸಾಮಾನುಗಳು ಪೇಠೆಯಲ್ಲಿರುವ ಕಟ್ಟಿಗೆಯ ಅಡ್ಡೆಯಲ್ಲಿ ಮಾರಟಕ್ಕೆ ಇಡಲ್ಪಟ್ಟಿರುತ್ತವೆ. ಕೊಂಕಣ, ದೇಶಗಳಲ್ಲಿಯ ಅಕ್ಕಿ ಮೊದಲಾದ ಸಾಮಾನುಗಳು ಮಾರಲಿಕ್ಕೆ ಬರುವವು. ಮಾರ್ಚತಿಂಗಳಿಂದ ಜನರು ಇಲ್ಲಿಗೆ ಬರಲಾರಂಭಿಸಿದ ಕೂಡಲೆ ದಿಲ್ಲಿ ಮೊದಲಾದ ಭಾಗಗಳಿಂದ ರತ್ನ, ಜವಾಹೀರ, ಕಾಶ್ಮೀರದ ಉಣ್ಣೆಯ ಅರಿವೆ, ದಿಲ್ಲಿ ಆಗ್ರಾಕಡೆಯ ಜಮಖಾನೆ, ಬೇರೆ ಬೇರೆ ಸ್ಥಳದ ಹಣ್ಣು ಹಂಪಲಗಳನ್ನು ಮಾರುವವರ ದಟ್ಟಣೆಯಾಗಿ ಅವರು ಅವುಗಳ ಮಾರಾಟಕ್ಕಾಗಿ ಪ್ರತಿಯೊಂದು ಬಂಗಲೆಗೆ ಹೋಗುತ್ತಿರುವರು.

ಪೇಠೆಯ ಪಶ್ಚಿಮ ಬದಿಗೆ ರೋಮನ್ ಕ್ಯಾಥಲಿಕರ ಚರ್ಚವೂ, ಅದರ ಸಮೀಪದಲ್ಲಿಯೇ ಹೊಸದಾಗಿ ಕಟ್ಟಿಸಿದ ಲಾಯಬ್ರರಿಯ ಸುಂದರವಾದ ಕಟ್ಟಡವೂ, ದವಾಖಾನೆಯೂ, ಪೂರ್ವಭಾಗಕ್ಕೆ ಅಮೇರಿಕನ್ ಚರ್ಚವೂ, ಅದರ ಹಿಂಬದಿಯಲ್ಲಿಯೇ ರೇಸ್ಕೂಲವೂ ಉಂಟು. ಜನರಿಗೆ ಇಳಕೊಳ್ಳುವದಕ್ಕಾಗಿ ಕಟ್ಟಿಸಿದ ಉತ್ತಮವಾದ ಧರ್ಮಸಾಲೆಯಿರುತ್ತದೆ. ಅದರ ಹತ್ತರ ಫಾರೆಸ್ಟ ಆಫೀಸಿನ ಸರಕಾರೀ ಕಟ್ಟಡವಿರುತ್ತದೆ. ರೇಸ್ಕೂಲಿನ ಹಿಂಬದಿಗೆ ಸಾರ್ವಜನಿಕ ಶೌಚಕೂಪಗಳಿದ್ದು ಕಟಕರಿಗೆ ದನ ಕುರಿಗಳನ್ನು ಕೊಯ್ಯುವದಾಗಿ ಗೊತ್ತು ಮಾಡಿದ ಸ್ಥಳವುಂಟು. ಅಲ್ಲಿಯೇ ಹೊಲೆಮಾದಿಗರ ಗುಡಿಸಲುಗಳಿರುತ್ತವೆ. ಆ ಭಾಗಕ್ಕೆ ಬಾನಿವ್ಹ್ಯೂ, ಎಂದೆನ್ನುವರು.

ಪ್ರತಿಯೊಂದು ತಿಂಗಳ ಮೊದಲನೇ ತಾರೀಖಿಗೆ ಪ್ರತಿಯೊಂದು ಪ
ರ್ಥದ ಧಾರಣಿಯನ್ನು ಗೊತ್ತುಪಡಿಸಿ, ಅವುಗಳ ದರವನ್ನು ಬರೆದ ಕಾಗದಗಳನ
ಚಾವಡಿ ಮತ್ತು ಫ್ರಿಅರ ಹಾಲದಲ್ಲಿ ಹಚ್ಚುವರು. ಆದರೆ ಅದರೊಳಗಿನ ಧಾರ
ಯಂತೆ ಮಾರಬೇಕಾಗಿ ಯಾರೂ ಕಟ್ಟಲ್ಪಟ್ಟಿರುವದಿಲ್ಲ. ಆದರೂ ಅದ
ವಿಶೇಷ ಹೆಚ್ಚು ಕಡಿಮೆಯಾಗುವದಿಲ್ಲ.

ಹಟೇಲಗಳು:—ಮಹಾಬಳೇಶ್ವರ ಕ್ಲಬ್ಬಿನ ಹೊರ್ತು ಇಲ್ಲಿ ಯುರೋಪಿ
ನ್, ಪಾರ್ಸೀ ಜನರ ಸಲುವಾಗಿ ತಯಾರಿಸಿದ ಎಷ್ಟೋ ಹಟೇಲಗಳುಂ
ಅವುಗಳಲ್ಲಿ ರಿಪನ್ ಫಾವುಂಟನ್, ರೇಸವ್ಹ್ಯೂ ಎಂಬಿವುಗಳು ಪ್ರಸಿದ್ಧವಾಗಿ
ತ್ತವೆ. ಈಹಟೇಲುಗಳಲ್ಲಿ ನಿಲ್ಲಬೇಕಾದರೆ ದಿನಂಪ್ರತಿ ಅವವುಗಳ ಯೋಗ್ಯತೆ
ನುಸಾರವಾಗಿ ೮-೧೫ ರೂಪಾಯಿಗಳ ವರೆಗೆ ಚಾರ್ಜು ಕೊಡಬೇಕಾಗುತ್ತ
ಯಹುದೀ ಮತ್ತು ಪಾರ್ಸೀ ಜನರ ಎಷ್ಟೋ ವಿಶ್ರಮಾಲಯಗಳುಂಟು. ಅವ
ಳಲ್ಲಿ ರೇಷ್ಹಿಲಾ, ರಾಯಲ್‌ಫಿಮೇಲಿ, ಮಹಾಬಳೇಶ್ವರ ಕ್ಲಬ್ಬ, ಇವು ಹೆಸರಾ
ವುಗಳಿರುತ್ತವೆ.

ಮಹಾಬಳೇಶ್ವರದಲ್ಲಿ ಎಲ್ಲ ಪ್ರಕಾರದ ಅನುಕೂಲತೆಗಳು ಇದ್ದರೂ ಕೂ
ಸ್ಥಳಸಂಕೋಚವು ವಿಶೇಷವಾಗಿರುತ್ತದೆ. ಆದರೆ ಅಧಿಕಾರಸ್ಥರಿಗೂ, ಶ್ರೀಮಂ
ರಿಗೂ ಯಾವ ಪ್ರಕಾರದ ತೊಂದರೆಯಾಗದೆ ಬಡವರಿಗೆ ಮಾತ್ರ ಸ್ಥಳದ ಬ
ಬಹಳೇ ಕಷ್ಟವಾಗುತ್ತದೆ. ಈ ಕಾರಣದಿಂದಲೇ ಕೆಲವರು ಖಾನಾವಳಿ
ಲ್ಲಿಯೇ ಇರುತ್ತಾರೆ. ಇಲ್ಲಿ ಬ್ರಾಹ್ಮಣ, ಲಿಂಗಾಯತ ಮೊದಲಾದ ಯಾವತ್
ಜಾತಿಯ ಜನರ ಖಾನಾವಳಿಗಳುಂಟು. ಅವುಗಳಲ್ಲಿ ತೀರ ಕಡಿಮೆ ತರಗ
ಯಿಂದ ಉಚ್ಚತರಗತಿಯ ವರೆಗಿನ ಖಾನಾವಳಿಗಳ ಪ್ರತಿತಿಂಗಳ ಚಾರ್ಜವು ೨
ರಿಂದ ೧೦೦ ರ ವರೆಗೆ ಇರುವದು.

ಬಂಗಲೆಗಳು:—ಮಹಾಬಳೇಶ್ವರದ ಹವೆ ನೀರುಗಳ ಪ್ರಶಂಸೆಯನ
ಎಷ್ಟು ಮಾಡಿದರೂ ತೀರದೆಂಬದರಲ್ಲಿ ಸಂದೇಹವಿಲ್ಲ. ಈ ಮಾತನ್ನು ಕೇವ
ನಾವೇ ಅನ್ನುತ್ತೇವೆ; ಹೀಗಲ್ಲ. ಆದರೆ ಇದರ ಸತ್ಯತೆಯು ಇಂಗ್ಲಿಷರ, ಹಿಂದ
ದೊಡ್ಡ ದೊಡ್ಡ ಅಧಿಕಾರಸ್ಥರ, ವಿದ್ವಾನ ಡಾಕ್ಟರ ಜನರ ಚಿಕಿತ್ಸೆಯಿಂದ ಆರೋ
ವರ್ಧನೀಯವೆಂದು ಗೊತ್ತಾದ ಹವೆಯ ಅನುಭವವನ್ನು ತೆಗೆದುಕೊಂಡ ಬೇ

ಶ್ರೀಮಂತರ ಕೃತಿಗಳಿಂದ ಸ್ಪಷ್ಟವಾಗುತ್ತದೆ. ಕಾರಣ ಈ 'ಸಾನೇಟರಿಯಮು'ದ ಸುಖಕರವಾದ ಸ್ಥಳದಲ್ಲಿ ಬಂದು ನಿಲ್ಲುವದಾಗಿ, ಅನೇಕ ಸಣ್ಣ ದೊಡ್ಡ ಬಂಗಲೆಗಳುಂಟು. ಅವುಗಳನ್ನು ಈ ಸ್ಥಳದಲ್ಲಾಗುವ ಅತಿವೃಷ್ಟಿಯ ಮೂಲಕ ಕೆಡದಂತೆ ಕಾಯುವ ಕ್ರಮವು ಬಹಳ ದಿವಸಗಳಿಂದ ನಡೆಯುತ್ತಬಂದಿದೆ. ಆದರೆ ಹೆಚ್ಚಿಯು ದಿನೇ ದಿನೇ ಮುಂದಕ್ಕೆ ಹೋಗುತ್ತಿರುವದು. ಇಲ್ಲಿಯ ಬಂಗಲೆಗಳ ಒಡೆಯರೂ, ಮುಂಬಯಿ ಸರಕಾರದವರೂ, ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ಈ ಭಯಂಕರ ಅಡವಿಯಲ್ಲಿ ವಸಾಹತು ಮಾಡಿಟ್ಟಿರುವರು. ಇಲ್ಲಿ ವಿಲಾಯತಿ, ಮುಂಬಯಿ, ಪುಣೆ, ಇಂದೂರ, ಮಿರಜಿ, ಜಮಖಂಡಿ ಮೊದಲಾದ ದೂರ ದೂರ ಪ್ರದೇಶದ ಜನರ ಬಂಗಲೆಗಳಿರುತ್ತವೆ. ಆ ಬಂಗಲೆಗಳ ಸಂಖ್ಯೆಯು ಸರಾಸರಿ ೫೦೦ ಕ್ಕೆ ಮಿಕ್ಕಿರುವದು. ಹೀಗೆ ದೂರ ದೂರದ ಶ್ರೀಮಂತರ ಮನಸ್ಸಿನ ಮೇಲೆ ಯಾವ ಪರಿಣಾಮವಾಯಿತೋ ಅದು ವಸ್ತುಸ್ಥಿತಿ ತದನುರೂಪವಿದ್ದ ಹೊರತು ಆಗುವದಿಲ್ಲೆಂಬದನ್ನು ಯಾರು ತಾನಾಗಿ ಒಪ್ಪಿಕೊಳ್ಳಲಿಕ್ಕಿಲ್ಲ?

ಬಂಗಲೆಗಳ ಒಡೆಯರಿಗೆ ಬೇಸಿಗೆ, ಚಳಿಗಾಲದಲ್ಲಿ ಬಂದು ನಿಲ್ಲಲಿಕ್ಕೆ ಅನುಕೂಲವಾಗದಿದ್ದಲ್ಲಿ, ಅವರ ಸಮ್ಮತಿಯನ್ನು ಪಡಕೊಂಡು ಜನರು ಬಾಡಿಗೆಯಿಂದ ನಿಲ್ಲಲು ಬಹಳೇ ಆತುರತೆಯುಳ್ಳವರಿದ್ದದರಿಂದ ಅವು ತೆರವು ಉಳಿಯುವದಿಲ್ಲ. ಆಯಾ ಬಂಗಲೆಗಳ ಯಜಮಾನರಿಗೆ ಅವುಗಳ ಬಾಡಿಗೆಯ ಹಣವು ವಿಪುಲವಾಗಿ ದೊರೆಯುತ್ತದೆ. ಪ್ರತಿಯೊಂದು ಬಂಗಲೆಯ ಬಾಡಿಗೆಯ ಹಣವು ೧೫೦೦ ರಿಂದ ೩೦೦೦ ದ ವರೆಗೆ ದೊರೆಯುತ್ತದೆ. ಈ ಪ್ರಕಾರ ಇಲ್ಲಿಯ ಬಂಗಲೆ, ಮನೆ, ಅಂಗಡಿಗಳು ನಮ್ಮ ಕಡೆಯ ಭೂಮಿಗಳಂತೆ ಉತ್ಪನ್ನದ ಬಾಬುಗಳಾಗಿವೆ. ಈ ಹವೆ ನೀರುಗಳ ಸುಖೋಪಭೋಗದ ಸಲುವಾಗಿ ಪ್ರತಿವರ್ಷ ಸಾವಿರಾರು ರೂಪಾಯಿಗಳು ವೆಚ್ಚವಾದರೂ ಅವುಗಳ ಬಗ್ಗೆ ತಿಲಮಾತ್ರವಾದರೂ ಕೆಡಕೆನಿಸುವದಿಲ್ಲ. ದೊಡ್ಡ ದೊಡ್ಡ ಸಾಹೇಬ ಜನರೂ, ಕೊಲ್ಹಾಪುರದ ಛತ್ರಪತಿ ಮಹಾರಾಜರೂ, ಹೋಳಕರ, ಗಾಯಕವಾಡ, ಕಛ್ಛ, ಭಾವನಗರ, ಮಿರಜ, ಕುರುಂದವಾಡ, ಜಮಖಂಡಿ ಮೊದಲಾದ ಸಂಸ್ಥಾನಿಕರೂ, ದೊಡ್ಡ ದೊಡ್ಡ ಬ್ಯಾರಿಸ್ಟರರೂ, ವಕೀಲರೂ ಬಂದದ್ದರಿಂದ ಊರೆಲ್ಲ ದಟ್ಟಣೆಯಾಗಿ, ಎಲ್ಲ ಭಾಗವೂ ಶೃಂಗರಿಸಿ ಘಟೋತ್ಕಚನ ಮೋಸದ ಸಂತೆಯು ನೆರೆದಂತೆ ಭಾಸವಾಗುತ್ತದೆ.

ಮಹಾಬಳೇಶ್ವರದಲ್ಲಾಗುವ ಖರ್ಚಿನ ಮುಖ್ಯ ಹಣವೆಂದರೇನೇ ವ
ಬಾಡಿಗೆಯು. ದೊಡ್ಡ ದೊಡ್ಡ ಸಾಹೇಬಜನರ ಹಾಗು ಶ್ರೀಮಂತರ ಬಂಗಲೆಗ
ಮಾಲಕಮಪೇಠೆಯಿಂದ ದೂರ ಇರುವವು. ಆಯಾ ಬಂಗಲೆಗಳಲ್ಲಿ ಅವವುಗ
ಒಡೆಯರೇ ವಾಸಮಾಡುವರು. ಅವರಿಗೆ ಒಂದುವೇಳೆ ಬರಲಿಕ್ಕಾಗದಿದ್ದಲ್ಲಿ ಅ
ಗಳನ್ನು ಬಾಡಿಗೆಯಿಂದ ಕೊಡುವರು. ಬಾಡಿಗೆಯಿಂದ ದೊರೆಯುವ ಬಂಗಲ
ಳನ್ನು ಬೇಸಿಗೆ ಹಾಗು ಚಳಿಗಾಲದಲ್ಲಿ ತಮಗೆ ಅನುಕೂಲವಾಗುವಂಥವುಗಳನ
ಗೊತ್ತು ಮಾಡಬೇಕು. ಈ ಸ್ಥಳದಲ್ಲಿ ಬಾಡಿಗೆಯಿಂದ ಗೊತ್ತು ಮಾಡಿದ ಬಂಗ
ಗಳಲ್ಲಿ ಬೇಕಾದಷ್ಟು ದಿವಸ ನಿಂತರೂ, ಸೀಝುನದ ಬಾಡಿಗೆಯನ್ನು ಕೊಡಬೇಕ
ಗುವದು. ಕಾರಣವೇನಂದರೆ ಮನೆಯವರಿಗೆ ವರ್ಷದ ಬಾಡಿಗೆಯನ್ನು ೨-೩ ತಿಂ
ಳಲ್ಲಿಯೇ ವಸೂಲ ಮಾಡಬೇಕಾಗುತ್ತದೆ. ಬಂಗಲೆಗಳನ್ನು ಬಾಡಿಗೆಯಿಂ
ಕೊಡುವವರಿಗೆ ಬಹಳೇ ಸುಖವಾಗುತ್ತದೆಂದು ಕೆಲವರಿಗೆ ಎನಿಸಬಹುದ
ಆದರೆ ಈ ತಿಳುವಳಿಕೆಯು ತೀರ ತಪ್ಪು. ಕಾರಣ ಸಾಧಾರಣ ಬಂಗಲೆಯನ
ಕಟ್ಟಿಸಬೇಕಾದರೂ ಬಹಳ ಹಣ, ಶ್ರಮ ಬೇಕಾಗುತ್ತದೆ. ಇದಕ್ಕಾದರೂ ಮ
ಯವರು ಅಂಜುವದಿಲ್ಲ. ಆದರೆ ಮಳೆಗಾಲದಲ್ಲಿ ಮನೆಗಳನ್ನು ಜೋಪಾ
ಮಾಡುವ ಕೆಲಸವು ಬಹಳೇ ಬಿಗಿಯಾಗಿರುತ್ತದೆ. ಏಕಂದರೆ ಮಳೆ ಹಾಗು ಬಿ
ಗಾಳಿಗಳ ಜೋರಿನಿಂದ ಬಂಗಲೆಯು ಎಷ್ಟೋ ಭಾಗವು ನಶಿಸಿ ಹೋಗುವದರಿಂ
ಕಟ್ಟುವ ಖರ್ಚಿಗಿಂತಲೂ, ಪ್ರತಿವರ್ಷದ ರಿಪೇರಿಗಾಗಿಯೇ ಬಹಳ ದ್ರವ್ಯ
ಹಾನಿಯಾಗುವದು. ಇಷ್ಟಾದರೂ ಇವು ದೊಡ್ಡವೂ, ವಿಸ್ತಾರವಾದವುಗಳು
ಅನುಕೂಲವಾದವುಗಳೂ ಇರುವದಿಲ್ಲ. ಇವುಗಳಿಗೆ ಬಹಳ ಮಾಡಿ ' ಹ
ಅಥವಾ ಕಾಟೇಜ, ಎಂಬ ಸಂಜ್ಞೆ ಇರುವದು. ಪ್ರತಿಯೊಂದು ಬಂಗಲೆ
ಮುಂದೆ ಸುಖಪ್ರದ, ರಮಣೀಯ, ದಟ್ಟವಾದ ಗಿಡಗಂಟೆ ಇರುವದರಿಂದ ಮೊ
ಲಿನ ಋಷ್ಯಾಶ್ರಮದ ಇಲ್ಲವೆ ಪರ್ಣಶಾಲೆಯು ನೆನಪಾಗಿ ಮನಸ್ಸಿಗೆ ಸುಖವೆನಿ
ವದು. ನಾಮದಾರ ಗವ್ಹರ್ನರಸಾಹೇಬ, ಡೇವಿಡ್ ಸಾಸೂನ, ಸರ ದಿನ
ಪೇಟಿಟ್ ಇವರ ಬಂಗಲೆಗಳು ಅರಮನೆಗಳಿಗಿಂತಲೂ, ಉತ್ತಮವಾಗಿರುತ್ತ
ಇಂಥ ಬಂಗಲೆಗಳು ತೀರ ಕಡಿಮೆ. ಮಧ್ಯಮ ಪ್ರತಿಯ ಮನುಷ್ಯನಿಗೆ ಮಾ
ಕಮ್ ಪೇಠೆಯಲ್ಲಿ ಬಣಜಿಗ, ಮಾರವಾಡೀ ಜನರ ಮನೆ ಹಾಗೂ ಅಂಗಡಿಗ
ಬಾಡಿಗೆಯಿಂದ ನಿಲ್ಲಲಿಕ್ಕೆ ಸಿಗುತ್ತವೆ. ಬೈಲು ಪ್ರದೇಶದಲ್ಲಿ ಎಷ್ಟೋ ಗುಡಿಸ

ಗಳು ನಿಲ್ಲಲು ಅನುಕೂಲವಿರುತ್ತವೆ. ಅವುಗಳಿಗೆ ಮಾತ್ರ ಬಾಡಿಗೆಯು ಕಡಮ ಬೀಳುತ್ತದೆ.

ಯಾವತ್ತು ಬಂಗಲೆಗಳಲ್ಲಿ ನೌಕರರು ಇರಲಿಕ್ಕೆ ಪ್ರಶಸ್ತವಾದ ಸ್ಥಳ, ಬಂಡಿ ಕುದುರೆಗಳಿಗಾಗಿ ತಯಾರಿಸಿದ ಸಣ್ಣ ಸಣ್ಣ ಕಟ್ಟಡಗಳಿರುತ್ತವೆ. ಕಾರಣ ಯಾವ ಪ್ರಕಾರದಿಂದ್ಲೂ ತೊಂದರೆಯಾಗುಗದಿಲ್ಲ. ಕೆಲಕೆಲವು ಬಂಗಲೆಗಳಲ್ಲಿ ವಾಪಿಗಳನ್ನು ತೆಗೆದಿರುವರು. ಬಂಗಲೆಯು ಸಣ್ಣದಿದ್ದಲ್ಲಿ ತಮಗೆ ಅನುಕೂಲವಾಗಬೇಕೆಂದು ಸಣ್ಣ ಹುಲ್ಲಿನ ಚಪ್ಪರವನ್ನು ಹಾಕಿಕೊಳ್ಳುವರು. ಹಟೇಲದಲ್ಲಿ ಇಳಕೊಳ್ಳುವವರ (ಪ್ರವಾಸಿಕರ) ಸಂಖ್ಯೆಯು ಹೆಚ್ಚಾದಂತೆ ಈ ಪ್ರಕಾರದ ವ್ಯವಸ್ಥೆಯನ್ನು ಮಾಡುತ್ತಿರುತ್ತಾರೆ. ಈಗಿದ್ದ ತಗಡುಗಳುಳ್ಳ ಬಂಗಲೆಗಳ ಮೇಲೆ ಮಳೆಗಾಲದಲ್ಲಿ ಹುಲ್ಲಿನ ಆಚ್ಛಾದನವನ್ನು ಹಾಕುವರು.

ಮ್ಯುನಸಿಪಾಲ್ಟಿ:—ಮಾಲಕಮ ಪೇಠೆಯ ವಸಾಹತು ಇಸವಿ ಸನ್ ೧೮೨೭ ರಿಂದ ಪ್ರಾರಂಭವಾಯಿತು. ಅಂದಿನಿಂದ ಕ್ರಿ. ಶ. ೧೮೬೪ರ ವರೆಗೆ ಈ 'ಹಿಲ್‍ಸ್ಟೇಶನ'ದ ಸ್ವಚ್ಛತೆಯು ಸಂಬಂಧದ ವ್ಯವಸ್ಥೆಯನ್ನು ನೋಡುವ ಕೆಲಸವು ಸರಕಾರದವರಿಂದ ನೇಮಿಸಲ್ಪಟ್ಟ ಜನರ ಕಡೆಗಿದ್ದಿತು. ಸರಕಾರೀ ಬೊಕ್ಕಸದೊಳಗಿನ ಕೆಲವೊಂದು ಹಣವನ್ನು ಅವರ ಪರವಾನಗಿಯನ್ನು ತೆಗೆದುಕೊಂಡು ತಮ್ಮ ಕೆಲಸವನ್ನು ಸಾಗಿಸುತ್ತಿದ್ದರು. ಆ ಹಣಕ್ಕೆ 'ಸ್ಟೇಶನಫಂಡ' ಹೀಗೆ ಸಂಜ್ಞೆ ಇತ್ತು. ಮುಂದೆ ಕ್ರಿ. ಶ. ೧೮೬೫ ರಲ್ಲಿ ಈ ಸ್ಟೇಶನದ ಸುಧಾರಣೆ ಮಾಡುವದು ಸರಕಾರದವರ ಮನಸ್ಸಿನಲ್ಲಿ ಬಂದ ಮೂಲಕ ಅವರು ವ್ಯವಸೆಯ ಸಲುವಾಗಿ ಮ್ಯುನಸಿಪಾಲ್ಟಿ ಸ್ಥಾಪನೆ ಮಾಡುವದಾಗಿ ನಿಶ್ಚಯಿಸಿದರು. ಆ ಮೇಲೆ ತಾರೀಖು ೧ ಮಾಹೆ ಮೇ ೧೮೬೭ನೇ ಇಸವಿಯು ದಿವಸ ಮೊದಲಿನ ಜನರನ್ನು ಕಡಿಮೆ ಮಾಡಿ ಸರಕಾರದವರ ಮಾರ್ಫತ ಗ್ರಾಮ ಮ್ಯುನಸಿಪಾಲ್ಟಿಯು ಸ್ಥಾಪಿಸಲ್ಪಟ್ಟಿತು. ಹಿಲ್‍ಸ್ಟೇಶನದ ಸಲುವಾಗಿ ತೆಗೆದುಕೊಂಡ ಎಲ್ಲ ಭೂಮಿಯನ್ನು ಕ್ರಿ. ಶ. ೧೮೮೬ ರಲ್ಲಿ ಗ್ರಾಮ ಮ್ಯುನಸಿಪಾಲ್ಟಿಯುವರ ವಶಕ್ಕೆ ಕೊಟ್ಟರು. ಅಲ್ಲದೆ ಪ್ರತಿವರ್ಷ ಸರಕಾರದವರು ಕೆಲವೊಂದು ನಿಯುಮಿತ ಹಣವನ್ನು ಕೊಡುತ್ತಿರುವರು. ಆದರೆ ಸರಕಾರದವರು ಪ್ರಥಮ: ಬಂಗಲೆಗಳ ದೆಸೆಯಿಂದ ತೆಗೆದುಕೊಂಡ ಸ್ಥಳಗಳ ಸಲುವಾಗಿ ಒಂದು ಎಕರೆಗೆ ಒಂದರಿಂದ ಹತ್ತು ರೂಪಾಯಿಗಳವರೆಗೆ ಕರ ತೆಗೆದುಕೊಳ್ಳುವ ವ್ಯವಸ್ಥೆ ಇಟ್ಟಿರುತ್ತಾರೆ. ಆ ಸ್ಥಳಗಳ ಸಲುವಾಗಿ, ಎಷ್ಟೋ ಜನರಿಗೆ

೨೧-೫೦-೯೯ ವರ್ಷಗಳ ವರೆಗೆ ಉಪಭೋಗಿಸುವ ಬಗ್ಗೆ ಕರಾರುಗಳಿರುತ್ತ
ಸನ್ ೧೮೮೮ ರಲ್ಲಿ ಹೊಸ ಕರಾರು ಮಾಡುವ ಜನರು ಎಕರೆಗೆ ಹತ್ತು ರೂಪ
ಯಿ ಕೊಡಬೇಕೆಂದು ಗೊತ್ತಾಯಿತು. ಇದರ ಹೊರ್ತು ಪ್ರತಿಯೊಂದು ಬಂಗ
ಮನೆಗಳ ಬಾಡಿಗೆಯ ಹಣದಲ್ಲಿ ನೂರಕ್ಕೆ ೨॥ ಯಂತೆ ಸರಕಾರಕ್ಕೆ ಕರವನ
ಕೊಡಬೇಕಾಗಿ ನಿಯಮವಾಗಿದೆ.

(೧) ಫಾರೆಸ್ಟ ಕಡೆಗಿದ್ದ ಭೂಮಿಯ ಉತ್ಪನ್ನ (೨) ಹೌಸಟಕ್ಸ, ಕನ್ಸ
ವ್ಹನ್ಸಿಟಕ್ಸ, ವ್ಹಿಲ್ ಹಾಗು ಹಾರ್ಸ ಟಕ್ಸ, ಮೊದಲಾದವುಗಳು ಮ್ಯುನಸಿಪಾ
ಯವರ ಬೇರೆ ಬೇರೆ ಉತ್ಪನ್ನದ ಬಾಬುಗಳಾಗಿವೆ.

ಈ ಹಿಲ್‌ಸ್ಟೇಶನದಲ್ಲಿ ಮನೆಮಾಡಿಕೊಂಡಿರುವ ಹಾಗು ಹವೆನೀರುಗ
ಸುಖಪ್ರಾಪ್ತಿಯ ಸಲುವಾಗಿ ಬಂದ ಜನರ ಕಡೆಯಿಂದ ಬಂಡಿ ಹಾಗು ಕುದು
ಗಳ ದೆಸೆಯಿಂದ ಕರವನ್ನು ವಸೂಲಮಾಡಿಕೊಳ್ಳುವರು. ಇಲ್ಲಿಗೆ ಬಂದ ಜನ
ಒಂದು ತಿಂಗಳು ಸಹ ನಿಲ್ಲದಿದ್ದರೂ ಅವರ ಕಡೆಯಿಂದ ಒಂದು ತಿಂಗಳ ಪೂ
ಕರವನ್ನು ತೆಗೆದುಕೊಳ್ಳುವ ಪದ್ಧತಿಯುಂಟು. ಸೀಝನದ ಮೂರು ತಿಂಗಳ
ಗಳನ್ನು ಇಲ್ಲಿ ಕಳೆದಲ್ಲಿ ಒಂದು ವರ್ಷದ ಆಕಾರವನ್ನು ಕೊಡಬೇಕಾಗುವದು
ಬಂಡಿ, ಕುದುರೆಗಳ ರಜಿಸ್ಟರ ಮಾಡಿಟ್ಟು ಅದರ ಮೇಲಿಂದ ಕರದ ಆಕಾರವನ
ಮಾಡಿಡುವರು. ಅವು ಸ್ವಂತ ಹಾಗು ಬಾಡಿಗೆಯವು ಇದ್ದರೂ ಉಪಯೋಗಿಸ
ವವನಿಗೆ ಕರ ಕೊಡಬೇಕಾಗುತ್ತದೆ.

ಬಂಡಿ ಮತ್ತು ಕುದುರೆ.	ಪ್ರತಿತಿಂಗಳಿಗೆ.	ಪ್ರತಿವರ್ಷಕ್ಕೆ
ಬಗಿ (ವ್ಹಿಕ್ಟೋರಿಯಾ).	೫ ರೂ.	೧೨ ರೂ.
ಟಾಂಗಾ.	೩ ರೂ.	೮ ರೂ.
ಧಮಣಿ.	೨ ರೂ.	೬ ರೂ.
ಕುದುರೆ.	೨ ರೂ.	೬ ರೂ.
ತಟ್ಟು.	೧॥ ರೂ.	೩ ರೂ.

ಈ ಕರವನ್ನು ಲಕ್ಷ್ಕರೀ ಖಾತೆಯವರಿಗೂ, ಮುಂಬಯಿ ಸರಕಾರದವ
ಬಳಿಯಲ್ಲಿರುವ ನೌಕರರಿಗೂ, ಕೊಡಬೇಕಾಗುವದಿಲ್ಲ.

ಇಲ್ಲಿಯ ಮ್ಯುನಸಿಪಾಲ್ಟಿಯ ಮುಖ್ಯ ಅಧಿಕಾರಿಯು ಸಾತಾರೆಯ ಕಲೆಕ್ಟರನಾಗಿರುವನು. ಆದರೆ ಅವರು ಸಾತಾರೆಯಲ್ಲಿಯೇ ಇರುವ ಮೂಲಕ ಬಹಳ ಮಾಡಿ ಯಾವತ್ತು ಅಧಿಕಾರವನ್ನು ಇಲ್ಲಿಯ ಸುಪರಿಂಟೆಂಡೆಂಟರ ಕಡೆಗೆ ಒಪ್ಪಿಸಿರುವರು. ಮ್ಯುನಸಿಪಾಲ್ಟಿಯ ಚುನಾವಣಿಯ ಕೆಲಸವು ಸರಕಾರದವರಿಂದ ಆಗುವದು. ಮೆಂಬರ ಜನರಲ್ಲಿ ಕೆಲವರು ಸರಕಾರೀ ಜನರೂ, ಕೆಲವರು ಊರೊಳಗಿನ ದೊಡ್ಡ ದೊಡ್ಡ ಸದ್ಗೃಹಸ್ಥರೂ, ಇರುವರು. ಮ್ಯುನಸಿಪಾಲ್ಟಿಯ ಯಾವತ್ತು ಆಫೀಸು ಮಳೆಗಾಲದಲ್ಲಿ ಸಾತಾರೆಗೆ ಹೋಗುತ್ತದೆ. ಮ್ಯುನಸಿಪಾಲ್ಟಿಯ ಯಾವತ್ತು ವ್ಯವಸ್ಥೆಯು ಉತ್ಕೃಷ್ಟವಾಗಿರುತ್ತದೆ.

ಲೇಡಿರೇಸ್ಕೂಲು:—ಮಾಲಕಮಪೇಠೆಯು ಸ್ಥಾಪನವಾದಂದಿನಿಂದ ಮೂವತ್ತು ವರ್ಷಗಳಲ್ಲಿ ಜನವಸತಿಯು ವಿಶೇಷ ಬೆಳೆಯಲು ಅವರು ತಮ್ಮ ತಮ್ಮ ಮಕ್ಕಳ ಸಲುವಾಗಿ ಇಲ್ಲಿಯೇ ವಿದ್ಯಾಭ್ಯಾಸದ ಅನುಕೂಲತೆಯಾಗಬೇಕೆಂದು ಕ್ರಿ. ಶ. ೧೮೬೪ ರಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದರು. ಸರಕಾರದವರು ಸಾಲೆಗಾಗಿ ಕೊಟ್ಟ ಕಟ್ಟಡವು ಸಣ್ಣದಿರುವ ಮೂಲಕ ಅದನ್ನು ಮಾರಿಸನ್ ೧೮೮೬ ರಲ್ಲಿ ಮ್ಯುನಸಿಪಾಲ್ಟಿಯವರು ತಮ್ಮ ಖರ್ಚಿನಿಂದ ಸಾಲೆಗಾಗಿ ಉತ್ಕೃಷ್ಟವಾದ ಕಟ್ಟಡವನ್ನು ಕಟ್ಟಿಸಿದರು. ಈ ಸಮಯಕ್ಕೆ ಮುಂಬಯಿಯ ಗವ್ಹರ್ನರರಾದ ನಾಮದಾರ ಲಾರ್ಡ ರೇ ಸಾಹೇಬರು ಇಲ್ಲಿ ಬಂದ ಮೂಲಕ ಅವರಿಂದ ಹೊಸ ಕಟ್ಟಡದ ಪ್ರವೇಶವಿಧಿಯು ಮಾಡಲ್ಪಟ್ಟಿತು. ಇದಕ್ಕೆ ಅವರ ಪ್ರಿಯಪತ್ನಿಯ ಹೆಸರು ಕೊಟ್ಟದ್ದರಿಂದ ಜನರು 'ಲೇಡಿ ರೇಸ್ಕೂಲು' ಎಂದೆನ್ನ ಹತ್ತಿದರು. ಈ ಹೆಸರಿನ ಸಾಲೆಯು ಪ್ರಕೃತದಲ್ಲಿ ಪ್ರಸಿದ್ಧವದೆ. ಈ ಸಾಲೆಯಲ್ಲಿ ಮರಾಠಿ ೫ನೇ ಇಯತ್ತೆಯವರೆಗೆ ಅಭ್ಯಾಸವು ನಡೆಯುವದು. ಸೀಝುನದ ದಿವಸಗಳಲ್ಲಿ ಹುಡುಗರ ಸಂಖ್ಯೆಯು ಇನ್ನೂರರವರೆಗೆ ಉಳಿದ ದಿವಸಗಳಲ್ಲಿ ನೂರಾಐವತ್ತರ ವರೆಗೆ ಇರುವದು. ಸಾಲೆಯು ಮ್ಯುನಸಿಪಾಲ್ಟಿಯವರ ವಶದಲ್ಲಿದ್ದು ಅದರ ಯಾವತ್ತೂ ಖರ್ಚನ್ನು ಅವರೇ ನಡಿಸುವರು. ಸಾಲೆಯ ಸ್ಥಿತಿಯು ಅತ್ಯುತ್ತಮವಾಗಿರುತ್ತದೆ.

ಹಾಸ್ಪಿಟೆಲ್:—ಫ್ರಿಅರಹಾಲಿನ ಹತ್ತರ ಮ್ಯುನಸಿಪಾಲ್ಟಿಯವರ ಆಶ್ರಯದಿಂದ ನಡೆಯುವ 'ಸ್ಟೇಶನ್ ಹಾಸ್ಪಿಟಲ್' ಉಂಟು. ಹಾಸ್ಪಿಟಲ್‌ದಲ್ಲಿ ಕೆಲಮಟ್ಟಿಗೆ ಔಷಧೋಪಚಾರಗಳು ಧರ್ಮಾರ್ಥವಾಗಿರುವ ಮೂಲಕ ಇದಕ್ಕೆ

ಧರ್ಮಾರ್ಥ ದವಾಖಾನೆ ಎಂತಲೂ ಅನ್ನುವರು. ಇಲ್ಲಿಯ ಸುಪರಿಂಟೆಂಡೆಂ ಸಾಹೇಬರು ದವಾಖಾನೆಯ ಯಾನತ್ತೂ ವ್ಯವಸ್ಥೆಯ ಬಗ್ಗೆ ಜಬಾಬದಾರರಿರು ಮೂಲಕ ಅದರ ಹೊರೆಯು ಅವರ ಮೇಲೆಯೇ ಹೆಚ್ಚಾಗಿ ಅವಲಂಬಿಸಿರುವದ ಈ ಸಾಹೇಬ ಬಹಾದ್ದೂರರವರ ಹುಕುಮಿನ ಪ್ರಕಾರ ದವಾಖಾನೆಯ ಕೆಲ ಮಾಡುವದಕ್ಕಾಗಿ ಒಬ್ಬ ಹಾಸ್ಪಿಟಲ್ ಅಸಿಸ್ಟಂಟ ಮತ್ತೊಬ್ಬ ಕಂಪೌಂಡರ ಹೀ ಇಬ್ಬರು ನೌಕರರಿರುವರು. ಅವರು ಮುಂಜಾನೆ ೭ ರಿಂದ ೧೦ ರ ವರೆಗೆ ಮಧ ಹ್ನದಲ್ಲಿ ೫ ರಿಂದ ೭ ರ ವರೆಗೆ ದವಾಖಾನೆಯನ್ನು ತೆರೆದಿಟ್ಟು ಔಷಧೋಪಚಾ ಕ್ಕಾಗಿ ಹಾಜರ ಇರುವರು. ಮೆಡಿಕಲ್ ಕಾಲೇಜದ ಅಭ್ಯಾಸವನ್ನು ಪೂಣ ಮಾಡಿದಂಥ ಯುರೋಪಿನ್ ಮನುಷ್ಯನನ್ನೇ ಇಲ್ಲಿಯ ಸುಪರಿಂಟೆಂಡೆಂಟನಾ ನೇಮಿಸುವ ಮೂಲಕ ಆತನೇ ಹಾಸ್ಪಿಟಲದ ಸಿವ್ಹಿಲ್ ಸರ್ಜನನಾಗಿರುವನ ಅವರಿಗೆ ಯಾರಾದರೂ ಭೆಟ್ಟಿಯಾಗುವದಿದ್ದಲ್ಲಿ ಮುಂಜಾನೆ ೯ ರ ಒಳಗಾ ಚೀಟಿಯನ್ನು ಕಳಿಸಬೇಕಾಗುವದು. ಹಾಸ್ಪಿಟಲದ ಖರ್ಚನ್ನು ಮ್ಯುನಸಿಪಾ ಯವರೇ ನಡಿಸುವರು. ಔಷಧದ ಸಂಬಂಧದಿಂದ ಶ್ರೀಮಂತರಿಗೆ ಮಾ ಫೀ ಕೊಡಬೇಕಾಗುವದು. ಆದರೆ ಸರಕಾರೀ ನೌಕರರಿಗೂ, ಬಡಬಗ್ಗರಿಗ ಫೀ ಕೊಡುವ ಕಾರಣಬೀಳುವದಿಲ್ಲ.

ಚಾವಡಿ, ಫೌಜದಾರ ಕಚೇರಿ:— ಈ 'ಹಿಲ್ ಸ್ಟೇಶನ'ದ ಯಾ ತ್ತೂ ವ್ಯವಸ್ಥೆಯನ್ನು ನೋಡುವದಾಗಿ ಸರಕಾರದವರು ಒಬ್ಬ ಯುರೋಪಿಯ ನನ್ನು ನೇಮಿಸುತ್ತಿರುವರು. ಅವರಿಗೆ ಸುಪರಿಂಟೆಂಡೆಂಟರೆಂದು ಹುದ್ದೆ ಇರುತ್ತ ಅವರು ಮಹಾಬಳೇಶ್ವರದಲ್ಲಿ ಅಕ್ಟೋಬರ ಪ್ರಾರಂಭದಿಂದ ಜೂನ ೧೫ನ ತಾರೀಖಿನ ವರೆಗೆ ಇದ್ದು ಯಾವತ್ತೂ ವ್ಯವಸ್ಥೆಯನ್ನು ಮಾಡುವರು. ಸು ರಿಂಟೆಂಡೆಂಟ ಸಾಹೇಬರು ಸಿವ್ಹಿಲ್ ಸರ್ಜನ ಪರೀಕ್ಷೆಯನ್ನು ಪಾಸಾದವರಿರಬ ಕೆಂಬ ನಿಯಮವಿರುತ್ತದೆ. ಇವರಿಗೆ ಎರಡನೆ ವರ್ಗದ ಮಾಜಿಸ್ಟ್ರೇಟರ ಅಧಿಕಾ ವಿರುತ್ತದೆ. ಆದರೆ ಒಮ್ಮೊಮ್ಮೆ ಮೊದಲನೆ ವರ್ಗದ ಮಾಜಿಸ್ಟ್ರೇಟಿಯ ಅಧಿಕಾ ವನ್ನಾದರೂ ಕೊಡಬೇಕಾಗುವದು. ಮೂರನೇ ವರ್ಗದ ಮಾಜಿಸ್ಟ್ರೇಟಿ ಅಧಿಕಾರವುಳ್ಳ ಮಹಾಲಕರಿಯಾದರೂ ಇಲ್ಲಿ ಇರುವನು. ಆತನು ಇಲ್ಲಿ ಹ ರಡು ತಿಂಗಳು ವಾಸ ಮಾಡಬೇಕಾಗುವದು. ಮಹಾಲಕರಿಯು ಮೇ ತಾಲೂಕಿನ ಮಾಮಲೇದಾರ ಕೈಕೆಳಗಿನ ಠಾಣೇದಾರನಾಗಿರುವನು. ಅಲ್ಲ

ಸುಪರಿಂಟೆಂಡೆಂಟರ ಕೆಲಸಕ್ಕೆ ಸಹಾಯಕಾರಿಯಾಗಿರುವನು. ಸಾತಾರೆ ಜಿಲ್ಹೆಯ ಕಲೆಕ್ಟರರೇ ಸುಪರಿಂಟೆಂಡೆಂಟ ಸಾಹೇಬರ ಮೇಲಧಿಕಾರಿಗಳಾಗಿರುವರು. ಸಂಸ್ಥಾನಿಕರು ಇಲ್ಲಿ ಬರುವ ಪೂರ್ವದಲ್ಲಿ ತಾವು ಎಷ್ಟು ಜನರೊಂದಿಗೆ ಬರುವರೆಂಬದನ್ನು ಸುಪರಿಂಟೆಂಡೆಂಟ ಸಾಹೇಬರಿಗೆ ತಿಳಿಸಬೇಕಾಗುವದು.

ಮಹಾಲಕರಿ ಕಚೇರಿ ಅಥವಾ ಚಾವಡಿ ಎಂಬ ಹೆಸರಿನ ಸರಕಾರಿ ಕಟ್ಟಡವು ಮಾಲಕಮಪೇಠೆಯ ಮಧ್ಯದಲ್ಲಿರುತ್ತದೆ. ಅಲ್ಲಿ ಸರಕಾರೀ ಬೊಕ್ಕಸವಿರುವದು. ಸೀಝನದ ದಿವಸಗಳಲ್ಲಿ ಬಂದಂಥ ದೊಡ್ಡ ದೊಡ್ಡ ಅಧಿಕಾರಿಗಳ ಪಗಾರವು ವೇಳೆಗೆ ಸರಿಯಾಗಿ ಮುಟ್ಟಬೇಕೆಂದು ಬೊಕ್ಕಸದಲ್ಲಿ ಯಾವಾಗಲೂ ಒಂದು ಲಕ್ಷ ರೂಪಾಯಿ ಕಾಯ್ದಿಡುವರು. ಹಣದ ವ್ಯವಹಾರದ ಸಂಬಂಧದ ಕೆಲಸವು ಅಕ್ಟೋಬರದಿಂದ ಜೂನದ ವರೆಗೆ ಸುಪರಿಂಟೆಂಡೆಂಟರ ಕಡೆಗೆ, ಮುಂದೆ ಮಳೆಗಾಲದಲ್ಲಿ ಮಾತ್ರ ಮಹಾಲಕರಿಯ ಕಡೆಗೆ ಇರುತ್ತದೆ. ಹುಜೂರ ಡೆಪ್ಯುಟಿ ಕಲೆಕ್ಟರರ ಕಡೆಗೆ ಲೆಕ್ಕಪತ್ರದ ತಪಾಸಣಿಯ ಕೆಲಸವಿರುವದು. ಹಣದ ಕೊರತೆ ಬಿದ್ದಲ್ಲಿ ಜಿಲ್ಹೆಯ ಬೊಕ್ಕಸದೊಳಗಿಂದ ತರಿಸುವರು. ಸಾಹೇಬ ಬಹಾದ್ದೂರರೆವರು ತಮ್ಮ ಹೆಡ್ ಕ್ಲಾರ್ಕನನ್ನು ಪ್ರತಿತಿಂಗಳ ಮೊದಲನೆ ವಾರ ಹಾಗೂ ಪ್ರತಿಯೊಂದು ಮಂಗಳವಾರ, ಗುರುವಾರ, ಶನಿವಾರ ದಿವಸ ಮಧ್ಯಾಹ್ನದ ಒಂದು ಘಂಟೆಯಿಂದ ನಾಲ್ಕರ ವರೆಗೆ ಕೆಲಸ ಮಾಡುವದಕ್ಕಾಗಿ ಕಚೇರಿಗೆ ಕಳಿಸುವರು. ಕಚೇರಿಯಲ್ಲಿ ನೋಟು ಕೊಟ್ಟರೆ ಹಣ ದೊರೆಯುವ ಮೂಲಕ ಪ್ರವಾಸಿಕರಿಗೆ ಬಹಳೇ ಅನುಕೂಲವಾಗುತ್ತದೆ.

ಮೇಲೆ ಹೇಳಿದ ಕಟ್ಟಡದಲ್ಲಿಯೇ ಪೋಲೀಸ ಆಫೀಸು ಇರುತ್ತದೆ. ಅದರ ಮುಖ್ಯಾಧಿಕಾರಿಯು ಫೌಜದಾರ ಇಲ್ಲವೆ ಚೀಫ್ ಕಾನಸ್ಟೇಬಲನು ಆಗಿರುವನು. ಆತನ ಕೈಕೆಳಗೆ ಪೋಲೀಸ ಸಿಪಾಯಿ ಹಾಗು ನಾಯಿಕ ಜನರು ಕೂಡಿ ೧೫ ರಿಂದ ೩೦ರ ವರೆಗೆ ಇರುವರು. ಇಲ್ಲಿಯ ಪೋಲೀಸರು ಮಾರ್ಗದಲ್ಲಿ ಅಲ್ಲಲ್ಲಿಗೆ ನಿಂತು ಮುಂಜಾವಿನಿಂದ ಸಂಜೆಯುವರೆಗೆ ಯಾವ ಪ್ರಕಾರದ ಗದ್ದಲವಾಗದಂತೆ ವ್ಯವಸ್ಥೆಯನ್ನಿಡುವರು. ರಾತ್ರಿಯಲ್ಲಿ ಭಾಲೆಗಳನ್ನು ತೆಗೆದುಕೊಂಡು ಪೇಟೆಯ ಸುತ್ತುಮುತ್ತಲೂ ಬಂದೇಸವನೆ ಕಾವಲಿಗಾಗಿ ಅಡ್ಡಾಡುತ್ತಿರುವರು. ಸಾತಾರೆ ಜಿಲ್ಹೆಯ ಪೋಲೀಸ ಸುಪರಿಂಟೆಂಡೆಂಟನು ಈ ಖಾತೆಯ ಮುಖ್ಯಾಧಿಕಾರಿಯಾಗಿರುವನು.

ಮಾಲಕಮ ಪೇಠೆಯು ಮೇಢೇ ತಾಲೂಕಿನ ಭಾಗವಾಗಿರುವದರಿಂ
ಅಲ್ಲಿಯ ಸಬರಜಿಸ್ಟರರು ಮಾರ್ಚ ಎಪ್ರೇಲ, ಮೇ ತಿಂಗಳುಗಳ ಮೊದಲ
ಸೋಮವಾರ ಇಲ್ಲಿಗೆ ಬಂದು, ದಸ್ತನೋಂದಣಿಯ ಕೆಲಸವನ್ನು ಮಾಡುವರ
ನೂರರೊಳಗಿನ ದಸ್ತಸೋಂದಣಿ ಮಾಡುವದಕ್ಕಾಗಿ ಇಲ್ಲಿ ಒಬ್ಬ ಗ್ರಾಮ ರ
ಸ್ಟರನಿರುವನು. ಅವನು ತಿಂಗಳಲ್ಲಿ ಹದಿನೈದು ದಿವಸ ಮಾಲಕಮ ಪೇಠೆಯ
ಉಳಿದ ದಿವಸಗಳನ್ನು ತಾಲೂಕಿನ ಬೇರೆ ಬೇರೆ ಊರೊಳಗೆ ಕಳೆಯುವನು.

ಲಾಯಬ್ರರಿ:—ಮನುಷ್ಯನ ಜ್ಞಾನಾರ್ಜನೆಗೆ ಅವಶ್ಯವಾಗಿ ಉಪಯೋ
ಗಬೀಳುವ, ಮಹತ್ವದ ಸಾಧನಗಳಲ್ಲಿ ಒಂದಾದ ಲಾಯಬ್ರರಿಯು ಮಹಾಬಳೆ
ಶ್ವರದಲ್ಲುಂಟು. ಇದರ ಕಟ್ಟಡವು ಜೀರ್ಣವಾದ ಮೂಲಕ ಜನರು ದಾನಶೂ
ರಾದ ಸೇಟ ಬಮ್ಮನಜಿ ದಿನಶಾ ಪೇಟಿಟ್ ಇವರ ಕಡೆಗೆ ಹೋಗಿ ಸಹಾಯ
ಬೇಡಲು, ಅವರು 'ಕಟ್ಟಡಕ್ಕೆ ನನ್ನ ಹೆಸರು ಇಡಬೇಕೆಂದು, ಹೇಳಿ ಅದಕ್ಕೆ
ಹತ್ತುವ ಯಾವತ್ತು ಖರ್ಚನ್ನು ಕೊಡಲೊಪ್ಪಿದರು. ಕಟ್ಟಡ ಹಾಗು ಕಂಪಾಂಡ
ಗಳಿಗೆ ಕೂಡಿ ಸರಾಸರಿ ೧೭೦೦೦ ರೂಪಾಯಿ ವೆಚ್ಚವಾಗಿರುವವು. ಈ ಕಾರ್ಯ
ದಿಂದ ನಮ್ಮೆಲ್ಲರ ಮೇಲೆ ಪೇಟಿಟರವರ ಮಹದುಪಕಾರವಾಗಿರುತ್ತದಲ್ಲವೇ
ಮೇಲೆ ಹೇಳಿದ ಹಣದ ಹೊರ್ತು ಪೇಟಿಟ ಮನೆತನದವರು ಕೊಡುತ್ತಿರ
ಸಾವಿರ ರೂಪಾಯಿ ಹಾಗು ಬೇರೆ ಬೇರೆ ಸದ್ಗೃಹಸ್ಥರ ಕೊಟ್ಟ ಹಣದ ಬಡ್ಡಿ
ವರ್ಗಣಿ ಮೊದಲಾದವುಗಳಿಂದ ಲಾಯಬ್ರರಿಯ ಖರ್ಚು ನಡೆಯುವದು.

ಈ ಕಟ್ಟಡವು ಸಮನೆಲದ ಮೇಲೆ ಇದ್ದ ಕಾರಣ ೩-೩॥ ಫೂಟು ಎತ್ತ
ವಾದ ಕಟ್ಟೆಯನ್ನು ಹಾಕಿ ಅದರ ಮೇಲೆ ಹೊಸ ಪದ್ಧತಿಯಂತೆ ಕಟ್ಟಲ್ಪಟ್ಟಿರ
ತ್ತದೆ. ಇದರಲ್ಲಿ ಮೂರು ಭಾಗಗಳಿದ್ದು ಮೊದಲನೆಯದು ವಾಚಕರಿಗಾಗಿ, ಎರ
ನೆಯದು. ಆಟುಗಳಿಗಾಗಿ, ಮೂರನೆಯದು ಸಾರ್ವಜನಿಕ ಸಭೆಗಳಿಗಾಗಿ ಉ
ಯೋಗಿಸಲ್ಪಡುತ್ತವೆ. ಪ್ರತಿಯೊಂದು ಭಾಗದಲ್ಲಿ ಉತ್ತಮೋತ್ತಮ ಫರ್ನಿಚರ
ಳಿವೆ ಲಾಯಬ್ರರಿಯಲ್ಲಿ ಗುಜರಾಥಿ, ಇಂಗ್ಲಿಷ, ಮರಾಠಿ ಅತ್ಯುತ್ತಮ ಗ್ರಂಥಗ
ರುವವಲ್ಲದೆ ದೈನಿಕ, ಸಾಪ್ತಾಹಿಕ, ಮಾಸಪತ್ರಗಳು ಬರುವವು. ಕಟ್ಟಡ
ಮುಂದುಗಡೆಯಲ್ಲಿ ಉತ್ಕೃಷ್ಟವಾದ ಹೂದೋಟವಿರುತ್ತದೆ. ಲಾಯಬ್ರರಿ
ನಿಯಮಗಳು ಬೇರೆ ಕಡೆಗಿದ್ದಂತೆಯೇ ಇರುತ್ತವೆ. ಇದರ ಯಾವತ್ತು ವ್ಯ

ಸ್ಥೆಯು ಉತ್ಕೃಷ್ಟವಾಗಿರುತ್ತದೆ. ಈ ಹೊಸ ಲಾಯಬ್ರರಿಯ ಪ್ರವೇಶವಿಧಿಯು ನಾಮದಾರ ಲಾರ್ಡ ನಾರ್ಥಕೋಟ ಗವ್ಹರ್ನರ ಸಾಹೇಬರಿಂದ ತಾರೀಖು ೨೨ ಮಾಹೆ ಮೇ ಸನ್ ೧೯೦೨ನೇ ಇಸವಿಯ ದಿವಸ ವಿಜೃಂಭಣೆಯಿಂದ ಜರುಗಿತು. ಈ ಸಂಸ್ಥೆಯ ಉತ್ಪಾದಕ ಕಮಿಟಿಯ ಮುಂದಾಳುಗಳಾದ ಸಾಲಿಸಿಟರ-ಭಾಯಿ ಶಂಕರ ನಾನಾಭಾಯಿ, ಶ್ರೀ. ನಾರಾಯಣ ವಿಶ್ವನಾಥ ಮಾಂಡಲಿಕ ಬಿ. ಎ. ಮೊದಲಾದ ಜನರು ಬಹಳೇ ಪ್ರಯತ್ನ ಮಾಡಿ ತಮ್ಮ ಕಾರ್ಯದಲ್ಲಿ ಯಶಪಡೆದು, ಮಹಾಬಳೇಶ್ವರಕ್ಕೆ ಬರುವ ಜನರ ಮೇಲೆ ಮಹದುಪಕಾರ ಮಾಡಿಟ್ಟಿರುವರು. ಇದಕ್ಕೆ 'ನೇಟಿವ್ಹ ಜನರಲ್ ಲಾಯಬ್ರರಿ'ಎಂಬ ಹೆಸರಿಟ್ಟಿರುವರು. ಇದಲ್ಲದೆ ಬೇರೆ ಬೇರೆ ಕಡೆಗೆ ಎಷ್ಟೋ ಚಿಕ್ಕ ಪುಟ್ಟ ಲಾಯಬ್ರರಿಗಳಿವೆ.

ರೇಗಾರ್ಡನ್:—ನೇಟಿವ್ಹ ಜನರಲ್ ಲಾಯಬ್ರರಿಯ ಸಮೀಪದಲ್ಲಿಯೇ ನಾನಾಪ್ರಕಾರದ ಹೂಗಿಡಗಳಿಂದ ಸುಶೋಭಿತವಾದ ಹೂದೋಟವಿರುತ್ತದೆ. ಅದಕ್ಕೆ 'ರೇಗಾರ್ಡನ್' ಎಂದೆನ್ನುವರು. ಅಲ್ಲಿ ಜನರಿಗೆ ಕೂಡ್ರುವದಕ್ಕಾಗಿ ಉತ್ತಮೋತ್ತಮ ಪರ್ನೀಚರಗಳನ್ನೂ, ಹುಡುಗರ ದೆಸೆಯಿಂದ ಕಬ್ಬಿಣದ ತೊಟ್ಟಿಲಗಳನ್ನೂ, ವರ್ತುಲಾಕಾರವಾಗಿ ತಿರುಗುವ ಕುದುರೆಯ ಚಕ್ರಗಳನ್ನೂ, ಇಟ್ಟಿರುವರು. ಅಲ್ಲಿಗೆ ಹೋಗಿ ಸುಖವನ್ನು ಸಂಪಾದಿಸುವ ಜನರು ತಿಂಗಳೊಂದಕ್ಕೆ ಕೆಲವೊಂದು ಹಣಕೊಡಬೇಕಾಗುತ್ತದೆ. ಆನಂದದಲ್ಲಿ ವೇಳೆಗಳೆಯಲಿಕ್ಕೆ ಇದೊಂದು ಮಹತ್ವದ ಸಾಧನವಾಗಿದೆ.

ಪೋಸ್ಟ ಹಾಗು ತಾರಆಫೀಸು:—ಮಾಲಕಮಪೇಠೆಯ ಪಶ್ಚಿಮದಲ್ಲಿ ಈ ಎರಡೂ ಆಫೀಸುಗಳು ಒಂದಕ್ಕೊಂದು ಸಮೀಪವಾಗಿರುವವು. ಪೋಸ್ಟದ ಕೆಲಸವು ಹನ್ನೆರಡು ತಿಂಗಳು ನಡೆಯುವದು. ತಾರಿನ ಕೆಲಸವು ಮಾತ್ರ ಅಕ್ಟೋಬರದಿಂದ ಜೂನ ೧೫ನೇ ತಾರೀಖಿನವರೆಗೆ ನಡೆಯುವದು. ಪತ್ರಗಳನ್ನು ಒಗೆಯುವದಕ್ಕಾಗಿ ಅಲ್ಲಲ್ಲಿಗೆ ಕಂಬ ಹಾಗು ಸಿಲಿದಂರ ಆಕಾರದ ಡಬ್ಬಿಗಳ ವ್ಯವಸ್ಥೆಯನ್ನು ಇಟ್ಟಿರುತ್ತಾರೆ. ಸಾಹೇಬ ಜನರ ಟಪಾಲು ಒಯ್ಯಲಿಕ್ಕೆ ಅವರ ನೌಕರರು ಆಫೀಸಿಗೆ ಬರುವರು. ಉಳಿದವರ ಪತ್ರಗಳನ್ನು ಪೋಸ್ಟಮನ್ನರು ತಲ್ಪಿಸುವರು. ಸೀಝುನದ ದಿವಸಗಳಲ್ಲಿ ಕೆಲಸವು ಹೆಚ್ಚಾಗುವ ಮೂಲಕ ಎಷ್ಟೋ ಮಾಸ್ತರರನ್ನೂ ಪೋಸ್ಟಮನ್ನರನ್ನೂ ಬೇರೆ ಕಡೆಯಿಂದ ಕರೆಯಿಸಿಕೊ

ಳ್ಳುವರು. ಯುರೋಪಕ್ಕೆ ಹೋಗುವ ಪತ್ರಗಳಿಗಾಗಿ ಒಂದು ದಿವಸ ಮ
ಬಂಗಿ, ಮನಿಯಾರ್ಡರ ಮೊದಲಾದವುಗಳ ದೆಸೆಯಿಂದ ಮತ್ತೊಂದು ದಿ
ಹೀಗೆ ಎರಡು ದಿವಸ ವಾರದಲ್ಲಿ ಗೊತ್ತುಪಡಿಸಿರುವರು. ಮೇಲ್ಕಂತ್ರಾಟದಾರ
ಟಪಾಲು ಒಯ್ಯುವ ಹಾಗೂ ತರುವ ವ್ಯವಸ್ಥೆಯನ್ನು ಮಾಡುತ್ತಿರುವನು.

ಹೌಸ ಎಜಂಟ:—ಪಾಲೇಮಾಯಿಟ ಸಾಹೇಬರು ಕ್ರಿ. ಶ. ೧೮೬
ರಲ್ಲಿ ಮಹಾಬಳೇಶ್ವರಕ್ಕೆ ಬಂದು ಹೌಸ ಎಜಂಟರ ಉದ್ಯೋಗವನ್ನು ಪ್ರಾರ
ಸಿದರು. ಆ ಕೆಲಸವೇ ಅವರಿಗೆ ಪ್ರಿಯವಾದ ಮೂಲಕ ಅದನ್ನು ಅವ
ಸಾಯುವವರೆಗೆ ಬಿಡಲಿಲ್ಲ. ಬಳಿಕ ಫ್ರಾಂಕ್ಸ ಸಾಹೇಬರು ೨೦-೨೫ ವರ್ಷ
ವರೆಗೆ ಅದೇ ಉದ್ಯೋಗವನ್ನು ಉತ್ತಮರೀತಿಯಿಂದ ಮಾಡಿದರು. ತದನಂ
ಎಜಂಟರು ಕೇವಲ ತಮ್ಮ ಕೆಲಸವನ್ನಷ್ಟೇ ಮಾಡದೆ ಬೇರೆ ಬೇರೆ ಉದ್ಯೋ
ಗಳನ್ನು ಮಾಡಹತ್ತಿದ್ದರಿಂದ ಅವರ ಹೆಸರನ್ನು ಕೊಡುವ ಕಾರಣವಿಲ್ಲ. ಸಾಂ
ತದಲ್ಲಿ ಪ್ರತಿಯೊಂದು ಜಾತಿಯ ಜನರು ತಮ್ಮ ತಮ್ಮ ಜಾತಿಯವರನ್ನೇ ಎಜಂ
ರನ್ನಾಗಿ ಮಾಡಿಕೊಂಡ ಮೂಲಕ ನೋಡಿದತ್ತೆಲ್ಲ ಹೌಸ ಎಜಂಟರೇ
ಕುಳಿತಿರುವರು. ಬೇರೆ ಕಡೆಯಿಂದ ಇಲ್ಲಿಗೆ ಬಂದ ಜನರ ಯಾವತ್ತೂ ವ್ಯವ
ಯನ್ನು ಏಜಂಟರು ಉತ್ತಮರೀತಿಯಂದ ಮಾಡಿಕೊಟ್ಟು, ತಮ್ಮ ಶ್ರಮದ ಬ
ಕಮಿಶನ್ ತೆಗೆದುಕೊಳ್ಳುತ್ತಾರೆ. ಮಹಾಬಳೇಶ್ವರದಲ್ಲಿ ಸ್ಥಳಸಂಕೋಚವಿರ
ಮೂಲಕ ಅಲ್ಲಿಯ ಮನೆ ಬಂಗಲೆಗಳನ್ನು ಬಂದಂಥವರಿಗೆ ಯೋಗ್ಯ ಬಾ
ಯಿಂದ ಕೊಡಿಸುವ ಉದ್ಯೋಗವನ್ನೇ ಎಜಂಟರು ಮುಖ್ಯವಾಗಿ ಮಾಡುವ
ರಿಂದ ಇವರಿಗೆ ಹೌಸ ಎಜಂಟರೆಂದೆನ್ನುವರು.

ಸ್ಮಶಾನಗಳು:— **अनित्यानि शरीराणि वैभवं नैव शाश्वतं ॥**
नित्यः संनिहितो मृत्युः कर्तव्यो धर्मसंग्रहः ॥ १

ಮಹಾಬಳೇಶ್ವರದಲ್ಲಿ ಹಿಂದೂ, ಮುಸಲ್ಮಾನ, ಇಂಗ್ಲಿಷ, ಪಾರ್ಶೀ ಜ
ಸ್ಮಶಾನಗಳು ಬೇರೆ ಬೇರೆ ಕಡೆಗಿರುತ್ತವೆ. ಆಯಾಜನರು ತಮ್ಮ ತಮ್ಮ ಜಾ
ಧರ್ಮಕ್ಕನುಸರಿಸಿ ಪ್ರೇತಸಂಸ್ಕಾರಮಾಡುವರು. ಇಲ್ಲಿಯ ವ್ಯಾಪಾರಸ್ಥ
ಉತ್ತಮಹವೆಯ ನಿಮಿತ್ತ ಬಂದಂಥ ಜನರ ಕಡೆಯಿಂದ ಪ್ರೇತಸಂಸ್ಕಾರ
ಬೇಕಾಗುವ ಸಾಮಾನುಗಳನ್ನು ತಯಾರಮಾಡಿ ಕೊಟ್ಟು ಅವುಗಳ ಲಾಭವ

ಪಡೆಯಲಿಕ್ಕೆ ಹಿಂಜರಿಯುವದಿಲ್ಲ. ಇಂಗ್ಲಿಷರು ಮನುಷ್ಯನ ಜೀವಿತ್ವಕ್ಕೆ ಸಮುದ್ರದ ಮೇಲಿನ ಹಡಗದ ಉಪಮೆಯನ್ನು ಕೊಟ್ಟದ್ದು ಯಥಾಯೋಗ್ಯವದೆ. ' Life is but a ship in the ocean '. ಈ ಕಾರಣದಿಂದ ಆರೋಗ್ಯವರ್ಧಕ ಸ್ಥಳದಲ್ಲಿಯೂ, ಅನಿಷ್ಟ ಹಾಗು ಪ್ರಾಣಹಾರಕ ಪ್ರಸಂಗಗಳು ಒಮ್ಮೊಮ್ಮೆ ಬಂದೊದಗುವವು. ಕಾಲಗತಿಯಿಂದ ಒಂದುವೇಳೆ ಅಂಥ ಪ್ರಸಂಗ ಬಂದರೂ, ಅದಕ್ಕೆ ಹೆದರದೆ, ಅಲ್ಲಿಯೇ ನಿಲ್ಲಲಿಕ್ಕೆ ಸಿದ್ಧರಾಗಿರಬೇಕು.

ವೇಣ್ಣ್ಯಾಕೆರೆಯ ಉಗಮದಹತ್ತರ ಹಿಂದೂ ಜನರ ಸ್ಮಶಾನ ಭೂಮಿಯಿದ್ದು ಅಲ್ಲಿ ದಹನವಿಧಿ ಅಥವಾ ಭೂಮಿಗತ ಸಂಸ್ಕಾರಗಳು ಜಾತಿ ಧರ್ಮದ ಪ್ರಕಾರ ನಡೆಯುವವು. ಮುಸಲ್ಮಾನರ ಸ್ಮಶಾನಗಳು ಸಾತಾರೆ ರೋಡದ ಕಡೆಗಿರುವ ಬ್ಲ್ಯೂವ್ಹಲಿ ಹತ್ತರ ಒಂದು, ಮಾಲಕಮ ಪೇಠೆಯಿಂದ ಆರು ಮೈಲಿನ ಮೇಲಿರುವ ಲಿಂಗಮಳಾ ತೋಟದ ಹತ್ತರ ಮತ್ತೊಂದು ಹೀಗೆ ಎರಡು ಇರುತ್ತವೆ. ಪಾರ್ಸಿ ಜನರ ಸ್ಮಶಾನವು ಪೇಟಿಟ ರೋಡದ ಹತ್ತರ ಇರುತ್ತದೆ. ಇಂಗ್ಲಿಷರ ಸ್ಮಶಾನವು ಮಹಾಡಮಾರ್ಗದ ಎಡಬದಿಗೆ ಕಾಲು ಮೈಲಿನ ಮೇಲೆ ಟಾಯಗರ ಪಾಥ ಮಾರ್ಗದ ಹತ್ತರ ಇರುತ್ತದೆ. ಮುಸಲ್ಮಾನರ ಗೋರಿಗಳಂತೆ ಇಂಗ್ಲಿಷರ ಗೋರಿಗಳಿರುವವು. ಇವರ ಗೋರಿಗಳು ಕರೇ ಹಾಗು ಬಿಳೇ ಸಂಗಮರವರೀ ಕಲ್ಲುಗಳಿಂದ ಕಟ್ಟಲ್ಪಟ್ಟಿರುವವು. ಗೋರಿಗಳ ಸುತ್ತಲೂ ಕರೇಕಲ್ಲಿನ ಕಂಪೌಂಡು ಇರುತ್ತದೆ. ಗೋರಿಗಳ ಮೇಲೆ ಅವರವರ ಮಾಹಿತಿಗಳ ಶಿಲಾಲೇಖಗಳುಂಟು. ಅವುಗಳನ್ನು ನೋಡಿ ಪ್ರೇಕ್ಷಕರ ಮನಸ್ಸಿನೊಳಗಿನ ಸ್ಮಶಾನವೇದನೆಗಳು ನಶಿಸಿ ಹೋಗುವವು.

ದೇವಾಲಯುಗಳು:—ಹಿಂದುಸ್ತಾನದೊಳಗಿನ ಬೇಕಾದ ರಮಣೀಯ ಸ್ಥಳಗಳನ್ನು ನೋಡಿದರೂ ಅಲ್ಲಿ ನಮ್ಮ ಜನರು ಒಂದಿಲ್ಲೊಂದು ದೇವಾಲಯವನ್ನು ಸ್ಥಾಪಿಸಿ ಪರಮೇಶ್ವರನ ಸರ್ವ ವ್ಯಾಪಕತ್ವ ಹಾಗು ಸರ್ವ ಶಕ್ತಿಗಳ ನೆನಪು ಮನುಷ್ಯಮಾತ್ರರಿಗೆ ಮಾಡಿಕೊಟ್ಟಿರುವರು. ನಿರ್ಜನ ಅರಣ್ಯ, ದೊಡ್ಡ ದೊಡ್ಡ ದರಿ ಹಾಗು ಗುಡ್ಡ ಮೊದಲಾದ ಸ್ಥಳಗಳಲ್ಲಿ ಒಂದಿಲ್ಲೊಂದು ದೇವರ ಇಲ್ಲವೆ ದೇವಿಯ ಗುಡಿಗಳು ಕಂಡುಬರುವವು. ಅದರಂತೆ ಮಹಾಬಳೇಶ್ವರದಲ್ಲಿಯಾದರೂ ಅನೇಕ ದೇವಾಲಯುಗಳುಂಟು. ಅವುಗಳಲ್ಲಿ ಹನುಮಂತ, ಶ್ರೀರಾಮ, ಶಂಕರ

ವಿಠೋಬಾ ಮೊದಲಾದ ದೇವರ ದೇವಾಲಯುಗಳು ಪೇಠೆಯಲ್ಲಿರುವವು. ದೇವ
ಸಂಬಂಧದ ಯಾವತ್ತೂ ಖರ್ಚನ್ನು ಪೇಠೆಯೊಳಗಿನ ಜನರೂ, ಇಲ್ಲಿ ಬಂದು
ದೊಡ್ಡ ದೊಡ್ಡ ಹಿಂದೂ ಗೃಹಸ್ಥರೂ ನಡಿಸುವರು. ದೇವಾಲಯುಗಳಲ್ಲಿ ಮೇಲಿಂ
ಮೇಲೆ ಉತ್ಸವಗಳಾಗುತ್ತಿದ್ದು ಆ ಸಮಯಕ್ಕೆ ಕೀರ್ತನ, ಪುರಾಣ ಮೊದಲಾ
ವುಗಳು ವಿಜೃಂಭಣೆಯಿಂದ ಜರುಗುತ್ತಿರುವವು. ಕ್ರಿಸ್ತೀಜನರ ಬಂದು ಚರ್ಚ
ರುವದು. ಅದರ ರಿಪೇರಿಯನ್ನು ಇಂಜಿನಿಯರ ಖಾತೆಯವರು ಮಾಡುತ್ತ
ರುವರು.

ಪಾಂಚಗಣಿ:—ಪಾಂಚಗಣಿ ಗ್ರಾಮವು ಮಹಾಬಳೇಶ್ವರ ಹಾ
ವಾಯಿ ಇವುಗಳ ಮಧ್ಯದಲ್ಲಿರುವದು. ಅದು ಹವೆ ನಿರುಗಳ ಸಂಬಂಧದಿ
ಪ್ರತಿ ಮಹಾಬಳೇಶ್ವರವೇ ಆಗಿರುವದು. ಆದರ ಎತ್ತರವು ಮಹಾಬಳೇಶ್ವ
ಕ್ಕಿಂತ ೨೦೦ ಫೂಟು ಕಡಿಮೆ ಇರುತ್ತದೆ. ಮಹಾಬಳೇಶ್ವರದಷ್ಟು ಇಲ್ಲಿ ಮ
ಯಾಗದ ಮೂಲಕ ಹನ್ನೆರಡು ತಿಂಗಳು ಮನೆಮಾಡಿಕೊಂಡು ಇರಲಿಕ್ಕೆ ಅ
ಯಾಗುವದಿಲ್ಲ. ಅಲ್ಲದೆ ಅಲ್ಲಿಯಷ್ಟು ಚಳಿಯೂ ಇಲ್ಲ. ಪಾಂಚಗಣಿ ವಸತಿ
ನವು 'ಜಾನಸೇಚ' ಸಾಹೇಬರ ಪರಿಶ್ರಮದಿಂದ ಆಯಿತು. ಇಲ್ಲಿ ೧೮೫೪-೬
ಅವಧಿಯಲ್ಲಿ ಭೂಮಿ ಹಾಗು ಹವೆಯು ಮನುಷ್ಯರಿಗೂ, ಸಮಶೀತೋಷ
ಕಟಿಬಂಧದಲ್ಲಿ ಬೆಳೆಯುವ ಹಣ್ಣಿನ ಗಿಡಗಳಿಗೂ ಅತ್ಯುತ್ತಮವಾಗಿರುವದೆಂ
ಸ್ವಾನುಭವದಿಂದ ಕಂಡುಬಂದಮೂಲಕ ಸಾಹೇಬ ಜನರು ಮನೆಮಾಡಿಕೊಂ
ಇರಹತ್ತಿದರು. ಇಲ್ಲಿಯ ಸ್ವಚ್ಛತೆಯ ದೆಸೆಯಿಂದ ಸರಕಾರದರು ಪ್ರತಿವರ್ಷ
೨೦೦೦ ರೂಪಾಯಿಗಳನ್ನು ಕೊಡಲೊಪ್ಪಿರುವರು. ಸರ ಚಾರ್ಲಟ ಫ್ರಿ
ಸಾಹೇಬರು ಜಾನಸೇಚ ಸಾಹೇಬರಿಗೆ ಆನರರಿ ಸುಪರಿಂಟೆಂಡೆಂಟ ಹಾ
ಮಾಜಿಸ್ಟ್ರೇಟರನ್ನಾಗಿ ಮಾಡಿ ಯಾವತ್ತೂ ವ್ಯವಸ್ಥೆಯನ್ನು ನೋಡುವ ಕೆಲ
ವನ್ನು ಕೊಟ್ಟರು. ಇಲ್ಲಿ ಮಹಾಬಳೇಶ್ವರದಂಥ ನೋಡತಕ್ಕಂಥ ಸ್ಥಳಗಳಿ
ಅಗರೂ ಕೃಷ್ಣಾನದಿಯ ಪೂರ್ವ ಪಶ್ಚಿಮವಾಗಿ ಹಬ್ಬಿದ ಕೊಳ್ಳಿನ ಪ್ರದೇಶ
ಅಪ್ರತಿಮವಾಗಿರುತ್ತದೆ. ಈ ಚಿಕ್ಕ ಗ್ರಾಮದಲ್ಲಿ ಶ್ರೀಶಂಕರನ ಉತ್ತಮವಾ
ದೇವಾಲಯವಿರುತ್ತದೆ. ಪಾಂಚಗಣಿಯ ಮಣ್ಣಿನಲ್ಲಿ ಲೋಹಾಂಶವು ವಿಶೇ
ವಾಗಿ ಮಿಶ್ರವಾಗಿರುತ್ತದೆ. ಸಾರ್ವಜನಿಕ ಝರಿಗಳು ಮೂರು ಇದ್ದು ಅವುಗ
ನೀರು ಮಹಾಬಳೇಶ್ವರದ ನೀರಿನಂತೆಯೇ ಇರುತ್ತವೆ.

ಹವೆಯ ದೃಷ್ಟಿಯಿಂದ ಈ ಸ್ಥಳವು ಉತ್ತಮವಾಗಿರುವದು. ಇಲ್ಲಿಯ ಹವೆಯು ತಂಪು ಹಾಗು ಸ್ವಲ್ಪ ರುಕ್ಷವಾಗಿರುತ್ತದೆ. ನೀರು ಪಾಚಕವಾಗಿರುತ್ತವೆ. ಇತ್ತಿತ್ತಲಾಗಿ ಉತ್ತಮವಾದ ಮಾರ್ಗ, ಪಾಯಿಂಟದಂಥ ಸ್ಥಳ, ಟೇನೀಸ ಕೋರ್ಟುಗಳು ತಯಾರಿಸಲ್ಪಟ್ಟಿರುವವು. ಸುಪರಿಂಟೆಂಡೆಂಟರ ಆಫೀಸು, ರಹದಾರಿ ಬಂಗಲೆ, ಹಟೇಲ, ಲಾಯಬ್ರರಿ, ಪೋಷ್ಟ ಹಾಗು ತಾರ ಆಫೀಸು ಸರಕಾರಿ ಮರಾಠಿ, ಇಂಗ್ಲಿಷ ಸಾಲೆ, ದವಾಖಾನೆ, ಮಾರ್ಕೇಟ ಮೊದಲಾದವುಗಳು ಇರುತ್ತವೆ. ರಹದಾರಿ ಬಂಗಲೆಯಲ್ಲಿ ಯಾವತ್ತು ಪ್ರಕಾರದ ಉತ್ತಮ ವ್ಯವಸ್ಥೆಯಿರುತ್ತದೆ. ಮನುಷ್ಯ ಶರೀರಸುಖಕ್ಕೆ ಮುಖ್ಯವಾಗಿ ಬೇಕಾಗುವ ಹವೆಯು ಉತ್ತಮವಾಗಿರುವ ಮೂಲಕ ಮನಸ್ಸು ಯಾವಾಗಲೂ ಉಲ್ಹಾಸವೃತ್ತಿಯಲ್ಲಿರುವದು. ಆದುದರಿಂದಲೇ ಎಷ್ಟೋ ರೋಗೀ ಜನರು ಇಲ್ಲಿಗೆ ಬಂದು ತಮ್ಮ ರೋಗವನ್ನು ನಿರ್ಮೂಲ ಮಾಡಿಕೊಂಡು ಹೋದರೆಂಬ ಬಗ್ಗೆ ಅನೇಕ ಆಧಾರಗಳಿವೆ. ಇಲ್ಲಿ ಇಂಗ್ಲಿಷರೂ, ಪಾರ್ಸೀ ಜನರೂ ವಿಶೇಷವಾಗಿ ವಸ್ತಿ ಮಾಡಿಕೊಂಡಿರುತ್ತಾರೆ.

ನರಸರಿ:—ತಂಪು ಹವೆಯಲ್ಲಾಗುವ ಗಿಡ, ವನಸ್ಪತಿ, ಬಟಾಟೆ ರಟಗಳ್ಳಿ, ಬ್ಲಕ್‌ಬೇರಿ, ಮೊದಲಾದವುಗಳನ್ನು ತಯಾರಿಸುವ ಪ್ರಯತ್ನವು ಸಫಲವಾಗತೊಡಗಿದೆ. ಪಾಂಚಗಣಿಯ ಕಾಫಿಯು ಶಿಫಾರಸನ್ನು ಇಂಗ್ಲಂಡದ ಒಬ್ಬ ದಲಾಲನು ಮಾಡಿರುವನಂತೆ. ಮಧುರ ವಾಸನೆಯ 'ಹೇಲಿಅಟ್ರೋಪಮರ್ಟಲ'ದ ಹೂಗಳು ಅಡವಿಯಲ್ಲಿ ಬಹಳವಾಗುತ್ತಿದ್ದು ಹಿಂದುಸ್ತಾನದಲ್ಲಿ ದುರ್ಮಿಲವಾಗಿರುವ ಬ್ರಾಯರದ ಹೂಗಳು ದೊರೆಯುವವು. ಬೇಲಿಯ ಮೇಲೆಲ್ಲ ಗುಲಾಬಿಯ ಹೂಗಳು ಪಸರಿಸಿದ್ದು ಅವುಗಳ ನೋಟವು ಸಪಟಂಬರ, ಅಕ್ಟೋಬರ ತಿಂಗಳುಗಳಲ್ಲಿ ಅಂದವಾಗಿ ತೋರುವದು. ಆ ಸಮಯದಲ್ಲಿ ಸಣ್ಣ ಗಿಡಗಂಟೆ, ಬಟರಕಪ್, ಅಡವಿಯ ಬಟಗಡ್ಡೆ ಮೊದಲಾದವುಗಳಿಂದ ಭೂಮಿಯು ಶೃಂಗರಿಸಲ್ಪಟ್ಟಿರುವದು. ಸಮನೆಲದ ಮೇಲೆ ಕರುಕೆ, ಹುಲ್ಲು, ವಿಶೇಷವಾಗಿ ಹಬ್ಬಿರುವ ಮೂಲಕ ಅದು ಭೂಮಿಯ ಮೇಲೆ ಹಸರು ಬಣ್ಣದ ಹಾಸಿಗೆಯನ್ನು ಹಾಸಿದಂತೆ ಭಾಸವಾಗುವದು.

ವಾಚಕಮಹಾಶಯರೇ ನಾವು ನಮ್ಮ ಯಥಾಮತಿಗನುಸರಿಸಿ ಸಹ
ಲದ ಮೇಲಿನ ಮಹಾಬಳೇಶ್ವರ, ಹಾಗು ಅದರ ಸುತ್ತುಮುತ್ತಲಿನ ೮-೧೦ ಮೈ
ಗಳ ಮೇಲಿರುವ ಸ್ಥಳಗಳ ಮಾಹಿತಿಯನ್ನು ಬರೆದಿರುತ್ತೇವೆ. ಕಾರಣ ನ
ಪ್ರಿಯಬಾಂಧವರಲ್ಲಿ ಪ್ರತಿಯೊಬ್ಬರು ಆಯಾ ಸ್ಥಳಗಳಿಗೆ ಹೋಗುವಾಗ ಈ
ಪುಸ್ತಕದ ಉಪಯೋಗವನ್ನು ಮಾಡಿಕೊಂಡಲ್ಲಿ ನಮ್ಮ ಶ್ರಮವು ಸಾರ್ಥಕ
ದಂತಾಗುತ್ತದೆ. ನಾವು ಸೀಝುನದ ನಿಮಿತ್ತ ಮಹಾಬಳೇಶ್ವರಕ್ಕೆ ಹೋ
ಅಲ್ಲಿ ದೊರಕಿಸಿದ ಯಾವತ್ತು ಮಾಹಿತಿಯನ್ನು ಕರ್ನಾಟಕ ಬಂಧು ಭಗಿನಿಯ
ತಿಳಿಸಬೇಕಾಗಿ, ಪ್ರೇರಿಸಿದ ಪರಮೇಶ್ವರನನ್ನು ಭಜಿಸಿ ಉತ್ತರೋತ್ತರ ಗ್ರಂ
ಳನ್ನು ಬರೆಯಲು ಬುದ್ಧಿಕೊಡಲೆಂದು ಶರಗೊಡ್ಡಿ ಬೇಡಿಕೊಳ್ಳುತ್ತೇವೆ.

ಸಮಾಪ್ತ.

ಸಹಾಯಕಾರರ ಹೆಸರು.

ಕಾಗವಾಡ.

ಶ್ರೀ. ತ್ರ್ಯಂಬಕ ಗಣೇಶ ಪಟವರ್ಧನ
,, ಸಿದಗೌಡಾ ನಾಥಗೌಡಾ ಪಾಟೀಲ
,, ದಾದಾ ಗಡೆಪ್ಪಾ ಗಡೆಣ್ಣವರ
,, ಪಾರೀಸ ಭರಮಪ್ಪಾ ಕಠಾರೆ
,, ಬಾಹುಬಲಿ ಸುಬರಾವ ಕುಸನಾಳೆ
,, ರಾಮಚಂದ್ರ ಪರಶರಾಮ ಸಾಳುಂಕೆ
,, ಬಸಗೌಡಾ ಅಪ್ಪಣಗೌಡಾ ಪಾಟೀಲ
,, ಬಾಳೇಶಾ ಅಪ್ಪಾ ಖೋತ
,, ದಾದಾ ಅಪ್ಪಾ ಖೋತ
,, ರಾಮಪ್ಪಾ ಅಣ್ಣಪ್ಪಾ ಕೋರೆ
,, ಸಂಗಪ್ಪಾ ಸೈದಪ್ಪಾ ಪಾಟೀಲ
,, ಬಸಗೌಡಾ ಚನಗೌಡಾ ಪಾಟೀಲ
,, ಆರ್.ಆರ್. ಜೋಶಿ ಪೋಸ್ಟಮಾಸ್ತರ
,, ಶಿವಲಿಂಗೇಶ್ವರಸ್ವಾಮಿ ಹಿರೇಮಠ
,, ಆತ್ಮಾರಾಮ ನರಸಿಂಹ ಕುಲಕರ್ಣಿ
,, ಜಿನ್ನಪ್ಪಾ ಕಾಳಪ್ಪಾ ಕರವ
,, ಭಿಕಚಂದ ಭಾಯಿಚಂದ
,, ರಾಮಗೌಡಾ ಮಲಗೌಡಾ ಪಾಟೀಲ
,, ವೀರಸಂಗಪ್ಪಾ ಹೆದ್ದೂರೆಪ್ಪಾ ರೂಗೆ
,, ದೇವಪ್ಪಾ ಸತ್ಯಪ್ಪಾ ದರೂಗೆ
,, ವಿರುಪಾಕ್ಷ ತಿಪ್ಪಣ್ಣಾ ರೂಗೆ
,, ಕೇಶವ ಗಣೇಶ ಗದ್ರೆ
,, ಗಣೇಶ ವಾಮನ ಘಾಟಕ
,, ಅಪ್ಪಾ ತಾತ್ಯಾ ಕರವ
,, ದಾದಾ ಅಪ್ಪಾಜಿ ಹವಲದಾರ
,, ದತ್ತು ವೆಂಕಾಜಿ ಘೋರಪಡೆ
,, ನರಸಗೌಡಾ ಭರಮಗೌಡಾ ಪಾಟೀಲ
,, ಮಲಗೌಡಾ ರಾಯಗೌಡಾ ಪಾಟೀಲ
,, ಕಲ್ಲಂಭಟ್ಟ ಗುಂಡಭಟ್ಟ ಜೋಸಿ

ಶ್ರೀ. ಜೋತಿ ನಾನಾ ಮಾಳಿ
,, ಸತ್ಯಗೌಡಾ ಅಲಗೌಡಾ ಪಾಟೀಲ
,, ಬಾಬು ಅಣ್ಣಪ್ಪಾ ಭೆಂಡವಾಡೆ
,, ನೀಲಕಂಠ ಧರ್ಮಪ್ಪಾ ಪೂಜಾರಿ
,, ಮುರಿಗೆಪ್ಪಾ ಮಲ್ಲಪ್ಪಾ ರೂಗೆ
,, ಭಾವು ಶಂತಪ್ಪಾ ಶೆಟ್ಟಿ
,, ಅಣ್ಣಪ್ಪಾ ಅಪ್ಪಣ್ಣಾ ಮಾಲಗತ್ತಿ
,, ಭಾವು ಅಪ್ಪಣ್ಣಾ ಮಾಲಗತ್ತಿ
,, ಏಶವಂತ ರಾಮಪ್ಪಾ ಮಾಲಗತ್ತಿ
,, ಬಾಬು ಶೇಷಪ್ಪಾ ಶೇಡಬಾಳೆ
,, ಅಣ್ಣಪ್ಪಾ ಅಪ್ಪಾ ಕುಂಬಾರ
,, ಭರಮಪ್ಪಾ ಅಪ್ಪಾ ಕುಂಬಾರ
,, ಬಾಳೇಶಾ ಭರಮಪ್ಪಾ ಕಠಾರೆ
,, ತಾತ್ಯಾ ಅಪ್ಪಣ್ಣಾ ಧೋತ್ರೆ
,, ತಾತ್ಯಾ ಹೂವಣ್ಣಾ ಝೂರೆ
,, ಅಪ್ಪಣ್ಣಾ ಸಾತಪ್ಪಾ ಪಾಟೀಲ
,, ಶೇಷಗೌಡಾ ಬಸಗೌಡಾ ಪಾಟೀಲ
,, ಭರಮಪ್ಪಾ ಸಾತಪ್ಪಾ ಪಾಟೀಲ
,, ಸತ್ಯಪ್ಪಾ ಸಂಗಪ್ಪಾ ಬಾಡಗೆ
,, ದಾದಾ ಅಪ್ಪಾಜಿ ಮಾಳಿ
,, ಜಿನ್ನಪ್ಪಾ ದೇವರಾಯಪ್ಪ ಮಾಲಗಾವೆ
,, ದರೆಪ್ಪಾ ಪಾಯಪ್ಪಾ ಕರೋಲಿ
,, ಬಾಬಾಲಾಲ ಅಮೀರ ಮಹಾತ
,, ಭರಪ್ಪಾ ಸಕ್ಕಪ್ಪಾ ಕರವ
,, ರಘುನಾಥ ರಾಮಚಂದ್ರ ಭಟ್ಟ
,, ಶಂಕರ ಜಕ್ಕಪ್ಪಾ ಉದಗಾಂವೆ
,, ಪರಪ್ಪಾ ಭರಮಪ್ಪಾ ಉದಗಾಂವೆ
,, ನಾಥಗೌಡಾ ಜೋತಗೌಡಾ ಪಾಟೀಲ
,, ಕಾಳಪ್ಪಾ ತವನಪ್ಪಾ ಪೂಜಾರಿ

ಶ್ರೀ. ಭಾವು ಮಲ್ಲಪ್ಪಾ ಸೋಮಣ್ಣವರ
,, ಗುರಪಾದಪ್ಪಾ ಜೋತಲಿಂಗಪ್ಪಾ ತೇಲಿ
,, ಬಾಬಾಜಿ ಧರ್ಮಣ್ಣಾ ಮಾಲಗಾಂವೆ
,, ದರೆಪ್ಪಾ ಸತ್ಯಪ್ಪಾ ಕುನ್ನೆ
,, ಬಸಲಿಂಗ ಲೋಕಪ್ಪಾ ರೂಗೆ
,, ಗುಂಡು ಬಾಬಾಜಿ ಖೋತ
,, ಅಣ್ಣಾಪ್ಪಾ ನರಸಪ್ಪಾ ಸಾಂಗವಡೆ
,, ಶಿವಲಿಂಗ ಮಹಾದೇವ ರೂಗೆ
,, ಬಾಳಪ್ಪಾ ಸಾತಪ್ಪಾ ಶೆಟ್ಟಿ
,, ವಿರುಪಾಕ್ಷ ಚನಮಲ್ಲಪ್ಪಾ ರೂಗೆ
,, ಅಣ್ಣಾಪ್ಪಾ ಸದಾಸಿವ ತೇಲಿ
,, ನಥುರಾಮು ತುಳಜಾರಾಮು
,, ಕಾಸೀಮ ಬಾಬಾಜಿ ಅತ್ತಾರ
,, ರಾಯಗೌಡಾ ಮಲಗೌಡಾ ಪಾಟೀಲ
,, ಏಸು ಭೀಮಾ ಸಮಗಾರ

ಜೂಗಳ.

ಶ್ರೀ. ವೀರಗೌಡಾ ಕಾಡಗೌಡಾ ಪಾಟೀಲ
,, ದತ್ತೋ ಮೈರಾಳ ಕುಲಕರ್ಣಿ
,, ಬಳವಂತ ಶಂಕರ ಕುಲಕರ್ಣಿ
,, ಗೋವಿಂದ ಜೀವಾಜಿ ಕುಲಕರ್ಣಿ
,, ಪರಗೌಡಾ ಸಿದಗೌಡಾ ಪಾಟೀಲ
,, ನಾರಾಯಣ ಕೇಶವ ಜೋಸಿ
,, ಭೀಮಾಜಿ ರಾಮಚಂದ್ರ ರಾಹುಳ
,, ಕೇಶವ ತುಕಾರಾಮು ಜೋಸಿ
,, ನರಸೋ ಆದಪ್ಪಾ ಉದಗಾಂವಿ
,, ವೀರಪ್ಪಾ ಗಂಗಾರಾಮು ಶೇಗಣೆ

ಶೇಡಬಾಳ ಸ್ಟೇಶನ.

ಶ್ರೀ. ಜನಾರ್ದನ ವಾಮನ ರಾನಡೆ
,, ಬಳವಂತ ನಾರಾಯಣ ದೇಶಪಾಂಡೆ
,, ಬಸಪ್ಪಾ ಶಿವಲಿಂಗಪ್ಪಾ ಕೊಳೋಲಗಿ
,, ಧೋಂಡಾಚಾರ್ಯ ಬಾಬಾಚಾರ್ಯ ಜಹಾಗೀರದಾರ (ಮಲ್ಲೊಳ್ಳಿ ವಿಜಾಪೂರ)

ಶೇಡಬಾಳ.

ಶ್ರೀ. ಬಾಪೂಜಿ ಗುರನಾಥ ದಿವಾ
,, ದಾಸೋ ಕೇಶವ ಸಂಗೋರ
,, ಭೀಮಾಜಿ ರಾಮಚಂದ್ರ ಮೋ
,, ಕೃ. ಮ. ಕುಲಕರ್ಣಿ ಹೆಡ್‌ಮ
,, ಅನಂತ ಮಹಾದೇವ ಜೋಸಿ
,, ರಾಮಚಂದ್ರ ಸಖಾರಾಮು ನೇ
,, ಭಾವು ಪುರಂಧರ ಲಗಾರೆ
,, ಶ್ರೀಮಂಧರ ನೀಲಕಂಠ ನಾಂ
,, ಶಾ. ನ. ಮಹಿಷಿ
,, ಹ. ಬಾ. ವಾಳವೇಕರ
,, ಚಿನ್ನಪ್ಪಾ ಎಸ್. ಮಠದ ಹೆಡ್
ಮಿ

ಮಿರಜ.

ಶ್ರೀ. ಬಿ. ಬಿ. ಸಪ್ತಾಳ ಡಾಕ್ಟರ

ಬೆಳಗಾಂವ.

ಶ್ರೀ. ಡಾಕ್ಟರ ಹ. ವೆ. ಸವಣೂರ
L. M. S
,, ಎ ಆಯ್. ಹಿಪ್ಪರಗಿ ಉರ್ದು
ಎ. ಇ. ಬೆಳಗಾ
,, ಜಿ. ಕೆ. ಆಗಾ. ಜನೇ. ಅ. ಡೆ.
ಎ. ಇ. ಬೆಳಗ
,, ವೆಂಕಟೇಶ ಕೃಷ್ಣ ಮಂಗಸೂ
ಡಿ ಕ
,, ಕಾಸೀಮ ನರುದ್ದೀನ ಹಂಚಿನ

ಅಕ್ಕತಂಗೇರಹಾಳ

ಶ್ರೀ. ಚನಗೌಡಾ ಬಸಗೌಡಾ ಪಾ

ಚಿಕ್ಕೋಡಿ ಸ್ಟೇಶನ.

ಶ್ರೀ. ಗೋವಿಂದ ಗೋಪಾಳ ನಾಯ

ಅಕ್ಕಿವಾಟ.

ಶ್ರೀ. ಶ. ಮ. ಜೋಸಿ ಹೆಡ್‌ಮಾಸ್ತ
,, ವೀ. ಸಿ. ಹಿರೇಮಠ ಅ. ಮಾಸ್ತ